# ಪುಸ್ತಕ ಪ್ರಪಂಚ

ಏಪ್ರಿಲ್ ೧೯೯೯



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು



ಡಾ॥ ಬಿ. ಆರ್. ಅಂಬೇಡ್ಕರ್

# ಪುಸ್ತಕ ಪ್ರಪಂಚ

## ಮಾಸಿಕ


**ಸಂಪುಟ ೪೯ ಸಂಚಿಕೆ ೭**

**ಏಪ್ರಿಲ್ ೧೯೯೯**




## ಪರಿವಿಡಿ

**PUSTAKA PRAPANCHA : Monthly**

Published and printed by Karnataka State Adult Education Council, Mysore-6. Price : Rupees Ten

ಬಿಡಿಪ್ರತಿ : ರೂ. ೧೦

ವಾರ್ಷಿಕ ಚಂದಾ : ರೂ. ೧೦೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

**ಪ್ರಕಟಣೆ**

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–೫೭೦ ೦೦೬

# ಬಸ್ ರಾಜತಂತ್ರ ಬರಿಯ ಸಂಕೇತವೆ?

ರಾಷ್ಟ್ರ ವಿಭಜನೆಗೊಂಡು ಐವತ್ತು ವರ್ಷಗಳಾದರೂ ಕಾಶ್ಮೀರ ಸಮಸ್ಯೆ ಇನ್ನೂ ಬಗೆಹರಿಯದಿರುವುದು ಇಲ್ಲಿಯ ನಾಯಕರ ಅದಕ್ಷತೆಗೆ ಬೇಮುತ್ಸದ್ದಿತನಕ್ಕೆ, ಜಾತಿ ಮತ ಮೂಲವಾದ ಅನೈಕ್ಯಕ್ಕೆ, ಅಲ್ಪಸಂಖ್ಯಾತರ ಪರಕೀಯ ಪ್ರಜ್ಞೆಗೆ, ಬಲಿಷ್ಠ ರಾಷ್ಟ್ರಗಳ ದ್ವೇಷಾಸೂಯಾಸಹಿತವಾದ ಕಿತಾಪತಿ ಚಿತಾವಣೆಗಳಿಗೆ ಸಾಕ್ಷಿಯಾಗಿದೆ. ೧೯೭೮ ರಲ್ಲಿ ಜನತಾ ಸರ್ಕಾರ ಆಡಳಿತ ನಡೆಸುತ್ತಿದ್ದಾಗ ವಿದೇಶೀಯ ವ್ಯವಹಾರಗಳ ಮಂತ್ರಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿಯವರು ಪಾಕಿಸ್ತಾನಕ್ಕೆ ಭೇಟಿ ಕೊಟ್ಟಿದ್ದರು. ಸೇನಾನಿ ಜಿಯಾ-ಉಲ್-ಹಕ್ ಆ ದೇಶದ ಸರ್ವಾಧಿಕಾರಿಯಾಗಿದ್ದರು. ಬಂಗ್ಲಾ ದೇಶ ಪ್ರತ್ಯೇಕಗೊಂಡದ್ದರಿಂದ ಸಹಜವಾಗಿಯೇ ಪಾಕಿಸ್ತಾನದ ಜನ ಕ್ರುದ್ಧರಾಗಿದ್ದರು. ಎರಡೂ ದೇಶಗಳ ಸಂಬಂಧ ಕುದುರಬೇಕಾದರೆ ಕೊಳುಕೊಡೆಯ ಔದಾರ್ಯವಿರಬೇಕೆಂದು ಅಂದು ಜಿಯಾ ಸ್ಪಷ್ಟಪಡಿಸಿದ್ದರು. '೧೯೭೨ ರಲ್ಲಿ ಸಿಮ್ಲಾ ಒಪ್ಪಂದಕ್ಕೆ ಎರಡು ರಾಷ್ಟ್ರಗಳೂ ಸಹಿ ಹಾಕಿದಾಗ ನೀವು ಪ್ರತಿಭಟನಾ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದಿರಲ್ಲ, ಈಗ ಅವರ ಪರವಾಗಿದ್ದೀರಲ್ಲ ಸರಿಯೆ? ಎಂದು ಪತ್ರಕರ್ತರು ಆ ಸಮಯದಲ್ಲಿ ವಾಜಪೇಯಿಯವರನ್ನು ಪ್ರಶ್ನಿಸಿದ್ದುಂಟು. ಆಗ ನಾನು ಜನಸಂಘದಲ್ಲಿದ್ದೆ. ಆಗ ಅದು ಒಪ್ಪಂದದ ವಿರೋಧವಾಗಿತ್ತು. ಈಗ ನಾನು ಜನತಾಪಕ್ಷದಲ್ಲಿದ್ದೇನೆ. ಅದು ಒಪ್ಪಂದದ ಪರವಾಗಿದೆ' ಎಂದು ಹೇಳಿ ವಾಜಪೇಯಿ ನುಣುಚಿಕೊಂಡಿದ್ದರು. ಹೋದ ದಾರಿಗೆ ಸುಂಕವಿಲ್ಲದೆ ಅವರು ವಾಪಸಾದರು. ಅಧಿಕಾರಾರೂಢರಾದ ನಾಯಕರ ಹಾಗೂ ಅಧಿಕಾರರಹಿತರಾದ ನಾಯಕರ ಜಾತಿ ತೀರ ವಿಭಿನ್ನವಾದುವು, ಅವರಿಗೆ ದೇಶ ಮುಖ್ಯವಲ್ಲ ಎಂಬ ಸಂಗತಿ ಈ ಪ್ರಕರಣದಿಂದ ವ್ಯಕ್ತವಾಗುತ್ತದೆ.

ಸಂಯುಕ್ತ ಸರ್ಕಾರದ ಸೆಳೆತೆಳೆತದ ಗೊಂದಲದಲ್ಲಿಯೇ ಪ್ರಧಾನಿ ವಾಜಪೇಯಿಯವರು ಬಸ್ ರಾಜತಂತ್ರವನ್ನು ಹೂಡಿರುವುದು ವಿಶಿಷ್ಟ, ವಿನೂತನ, ವಿಚಿತ್ರ ಪ್ರಯೋಗವಾಗಿದೆ. ಎರಡು ಕಡೆಯವರಿಗೂ ಆ ತಂತ್ರದ ಬಗ್ಗೆ ಸಂದೇಹವಿದೆ. ಆ ಸಂದೇಹ ಸುಳ್ಳಾಗಲೆಂದು ಕೆಲವರು ಶಾಂತಿಪ್ರಿಯರು ಹಾರೈಸುವುದೂ ಉಂಟು. ೧೯೯೮ ರಲ್ಲಿ ಕೊಲಂಬೊ ಮತ್ತು ನ್ಯೂಯಾರ್ಕ್ ನಗರಗಳಲ್ಲಿ ವಾಜಪೇಯಿಯವರೊಡನೆ ತಾವು ಮಾಡಿದ ಭೇಟಿ ನಿರರ್ಥಕವೆಂದು ಪಾಕಿಸ್ತಾನದ ಪ್ರಧಾನಿ ನವಾಜ್ ಷರೀಫರೆ ಘೋಷಿಸಿದ್ದರು. ಕಾಶ್ಮೀರ ವಿವಾದಿತ ಪ್ರದೇಶವೆಂಬುದನ್ನು ಭಾರತ ಮಾನ್ಯ ಮಾಡದಿದ್ದರೆ, ವಾಜಪೇಯಿ ಪಾಕಿಸ್ತಾನಕ್ಕೆ ಬರಬೇಕಿಲ್ಲ, ಷರೀಫ್ ಇಂಡಿಯಾಕ್ಕೆ ಹೋಗಬೇಕಾಗಿಲ್ಲವೆಂದು ಜಮಾತ್ ಕಾರ್ಯಕರ್ತರು ಸ್ಪಷ್ಟಪಡಿಸಿದ್ದಾರಲ್ಲದೆ, ೧೯ ರಂದು ಲಾಹೋರ್‌ನಲ್ಲಿ ಪ್ರತಿಭಟನಾ ಪ್ರದರ್ಶನವನ್ನೇರ್ಪಡಿಸಿದ್ದುಂಟು. ವಾಜಪೇಯಿ

ಯವರು ೨೦–೨–೧೯೯೯ ರಂದು ಅಮೃತಸರವನ್ನು ವಿಮಾನಯಾನದ ಮೂಲಕ ತಲುಪಿ, ಹಿಂದಿನ ದಿನವೇ ಅಲ್ಲಿಗೆ ತಲುಪಿದ್ದ ಬಸ್ಸನ್ನೇರಿ, ಗಡಿಪ್ರದೇಶದ ವಾಘವನ್ನು ಮುಟ್ಟುತ್ತಾರೆ. ಅವರು ತಮ್ಮ ಜತೆಯಲ್ಲಿ ಕರೆದುಕೊಂಡು ಹೋದ ೨೨ ಮಂದಿ ಗಣ್ಯರ ಗುಂಪಿನಲ್ಲಿ ಗೃಹಮಂತ್ರಿ ಲಾಲಕೃಷ್ಣ ಆಡ್ವಾನಿ ಮತ್ತು ಕಾಶ್ಮೀರದ ಮುಖ್ಯ ಮಂತ್ರಿ ಫರೂಕ್ ಅಬ್ದುಲ್ಲಾ ಇಲ್ಲದಿದ್ದುದು ಆಶ್ಚರ್ಯಕರ ಸಂಗತಿ. ಅದೇನೇ ಇರಲಿ, ಅಮೃತಸರದಿಂದ ಗಡಿಯವರೆಗೆ ಸುಮಾರು ಐವತ್ತು ಮೈಲಿ ದೂರ ದಾರಿಯುದ್ದಕ್ಕೂ ಹರ್ಷೋನ್ಮತ್ತರಾದ ಜನ ವಿವಿಧ ವಸ್ತ್ರಭೂಷಣಾಲಂಕೃತರಾಗಿ ತಮ್ಮ ಪ್ರಧಾನಿಯ ಯಾತ್ರೆ ಯಶಸ್ವಿಯಾಗಲೆಂದು ಜಯಕಾರ ಘೋಷಿಸುತ್ತಾರೆ. ಮನೆಗಳಿಗೆ ಸುಣ್ಣ ಬಣ್ಣ ಹಚ್ಚಿರಲಾಗಿ, ಬಾವುಟಗಳು, ತೋರಣಗಳು, ಕಮಾನುಗಳು, ವಾದ್ಯವೃಂದಗಳಿಂದಾಗಿ ಎಲ್ಲೆಲ್ಲೂ ಹಬ್ಬದ ವಾತಾವರಣ ಕಂಗೊಳಿಸುತ್ತದೆ. ಪ್ರಧಾನಿಗಳು ಗಡಿಯನ್ನು ತಲುಪಿದ ಕೂಡಲೇ ಭಾರತೀಯ ಸೈನ್ಯ ಅವರಿಗೆ ಗೌರವ ರಕ್ಷೆ ನೀಡುತ್ತದೆ.

ವಾಜಪೇಯಿಯವರು ದೆಹಲಿಯನ್ನು ಬಿಡುವ ಹಿಂದಿನ ದಿನ (೧೯–೨–೯೯) ಉಗ್ರರು ಜಮ್ಮು ಕಾಶ್ಮೀರದ ಮೇಲೆ ಧಾಳಿ ಮಾಡಿ, ಇಪ್ಪತ್ತು ಮಂದಿ ಅಮಾಯಕರನ್ನು ಕೊಲ್ಲುತ್ತಾರೆ. ಮತ್ತೊಂದು ಕಡೆ ಜಮಾತ್ ಸಂಘಟನೆ ಇಂಡಿಯಾದ ಮೇಲೆ ಜೆಹಾದ್ ಸಾರುತ್ತದೆ. ಇದನ್ನೆಲ್ಲ ಬಲ್ಲ ಷರೀಫರು ಯಾವುದನ್ನೂ ದೈವಯೋಗಕ್ಕಾಗಲಿ, ಅಧಿಕಾರಿಗಳ ವಿಚಿತ್ರ ವರ್ತನೆಗಾಗಲಿ ಬಿಡದೆ, ತಾವೇ ಖುದ್ದಾಗಿ ಏರ್ಪಾಡುಗಳನ್ನು ಪರಿಶೀಲಿಸುತ್ತಾರೆ. ಪಾಕಿಸ್ತಾನದ ಕಡೆಯ ಗಡಿಯಲ್ಲಿ ವಾಜಪೇಯಿಯವರು ಅಪರಾಹ್ನ ೪–೧೫ ಗಂಟೆಯ ಸಮಯದಲ್ಲಿ ಬಸ್ಸಿಳಿಯುತ್ತಿದ್ದಂತೆ ಷರೀಫರು ಅವರ ಕೈಕುಲುಕುತ್ತಾರೆ, ಆಲಿಂಗಿಸಿಕೊಳ್ಳುತ್ತಾರೆ. ವಾದ್ಯಗಳು ಮೊಳಗುತ್ತವೆ. ಬಹುವರ್ಣರಂಜಿತವಾದ ಭಂಗ್ರನೃತ್ಯ ಅಲ್ಲಿದ್ದ ಕೆಲವೇ ಕೆಲವು ಜನರನ್ನು ಮುದಗೊಳಿಸುತ್ತದೆ. ತೋಪು ವಂದನೆ, ಗೌರವ ರಕ್ಷಣೆ ಮತ್ತು ಲಘೂಪಾಹಾರ ಮುಗಿದ ನಂತರ ಹೆಲಿಕಾಪ್ಟರ್‌ನಲ್ಲಿ ಇಬ್ಬರು ಪ್ರಧಾನಿಗಳೂ ಲಾಹೋರಿನ ರಾಜಭವನಕ್ಕೆ ತೆರಳುತ್ತಾರೆ. ಹೆಲಿಕಾಪ್ಟರ್ ಏರುತ್ತಿದ್ದಾಗಲೂ ಗಡಿಯಾಚೆಯ ಭಾರತೀಯ ವಾದ್ಯಸಂಗೀತ ಕೇಳಿಸುತ್ತದೆ. ನಿಲ್ದಾಣದಲ್ಲಿಳಿದಾಗ ಸೇನಾಧಿಕಾರಿಗಳು ಅವರನ್ನು ಸ್ವಾಗತಿಸುತ್ತಾರೆ.

ಲಾಹೋರ್ ಕೋಟೆಯಲ್ಲಿ ಏರ್ಪಡಿಸಿದ್ದ ಅದ್ದೂರಿಯ ಭೋಜನಕೂಟದಲ್ಲಿ ವಾಜಪೇಯಿಯವರು ಪಾಕಿಸ್ತಾನದ ಪ್ರಧಾನಿಯನ್ನು ಕುರಿತು ಅವರು ನೀಡಿದ ಸ್ವಾಗತಕ್ಕಾಗಿ ವಂದಿಸುತ್ತಾರೆ : 'ಎರಡೂಕಡೆಯ ಜನರ ಆಶೆ ಆಕಾಂಕ್ಷೆಗಳನ್ನು ಪೂರೈಸಬೇಕಾದ್ದು, ನಂಬಿಕೆ ವಿಶ್ವಾಸ ಸ್ನೇಹಗಳನ್ನು ಕುದುರಿಸಬೇಕಾದ್ದು, ಗಟ್ಟಿಯಾದ ಸಹಕಾರ ತಳಹದಿಯನ್ನು ನಿರ್ಮಿಸಬೇಕಾದ್ದು ನಮ್ಮ ಕರ್ತವ್ಯ. ಸಮತೋಲನ ಸಂಯಮ ವಾಸ್ತವತೆಗಳ ದಾರಿಯನ್ನು ಹಿಡಿದು, ಹಿಂಸಾಚಾರವನ್ನು ತ್ಯಜಿಸಿ, ಪೂರ್ವಗ್ರಹ ಮುಕ್ತವಾದ ವಾತಾವರಣದಲ್ಲಿ ಚರ್ಚೆ ನಡಸುವುದಾದರೆ ಎಲ್ಲ ಸಮಸ್ಯೆಗಳನ್ನು

ಬಗೆಹರಿಸಿಕೊಳ್ಳಬಹುದು. ಜಮ್ಮು ಕಾಶ್ಮೀರ ಸೇರಿದಂತೆ ಎಲ್ಲ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಬಹುದಾಗಿದೆ. ನೂತನ ಸಹಸ್ರಮಾನಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ ನಮ್ಮ ಮುಂದಿನ ಪೀಳಿಗೆಗಳ ಯೋಗಕ್ಷೇಮವನ್ನು ಲಕ್ಷ್ಯದಲ್ಲಿರಿಸಿಕೊಳ್ಳಬೇಕಾಗಿದೆ' ಕೊನೆಯಲ್ಲಿ ಅವರು ಷರೀಫ್ ದಂಪತಿಗಳಿಗೆ ಇಂಡಿಯಾಕ್ಕೆ ಬರುವಂತೆ ಆಹ್ವಾನ ನೀಡುತ್ತಾರೆ. ಭಾರತೀಯ ಹಿತಾಸಕ್ತಿಗಾಗಿಯೇ ಪಾಕಿಸ್ತಾನದ ಸುಭದ್ರತೆ ಅಗತ್ಯವೆಂದೂ, ಎರಡೂ ರಾಷ್ಟ್ರಗಳ ಪ್ರಗತಿಯ ದೃಷ್ಟಿಯಿಂದ ನಾವು ಒಳ್ಳೆಯ ನೆರೆಯವರಾಗಿ ಬಾಳಬೇಕೆಂದೂ ಅವರು ಸ್ಪಷ್ಟಪಡಿಸುತ್ತಾರೆ.

ಎರಡು ದಿನಗಳ ಚರ್ಚೆಯ ನಂತರ ಇಬ್ಬರು ಪ್ರಧಾನಿಗಳು ಲಾಹೋರ್ ಘೋಷಣೆಗೆ ಸಹಿ ಹಾಕುತ್ತಾರೆ. ಆ ಘೋಷಣೆಯ ಮುಖ್ಯಾಂಶಗಳಿವು : ಜಮ್ಮು ಮತ್ತು ಕಾಶ್ಮೀರ ಸಮಸ್ಯೆ ಸೇರಿದಂತೆ ಎಲ್ಲ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಕಲ ಪ್ರಯತ್ನಗಳನ್ನು ತೀವ್ರಗೊಳಿಸತಕ್ಕದ್ದು. ಆಂತರಿಕ ವ್ಯವಹಾರಗಳಲ್ಲಿ ಯಾರೂ ತಲೆ ಹಾಕಕೂಡದು. ಅನಧಿಕೃತವಾದ ಅಣ್ವಸ್ತ್ರಗಳ ಬಳಕೆಯಿಂದಾಗುವ ಅನಾಹುತಗಳನ್ನು ತಪ್ಪಿಸಲು ಶೀಘ್ರ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಸಾರ್ಕ್ ಸಂಘಟನೆಯ ಧ್ಯೇಯೋದ್ದೇಶಗಳನ್ನು ದೃಢೀಕರಿಸುವುದಲ್ಲದೆ, ಶೀಘ್ರ ಆರ್ಥಿಕ ಪ್ರಗತಿ, ಸಾಮಾಜಿಕ ವಿಕಾಸ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಮೂಲಕ ದಕ್ಷಿಣ ಏಷಿಯಾ ಜನರ ಜೀವನಮಟ್ಟವನ್ನು ಹೆಚ್ಚಿಸತಕ್ಕದ್ದು. ಎಲ್ಲ ಬಗೆಯ ಉಗ್ರ ಚಳುವಳಿಗಳನ್ನು ಹತ್ತಿಕ್ಕತಕ್ಕದ್ದು. ಸರ್ವಮಾನವ ಹಕ್ಕುಗಳನ್ನು ಮೂಲಭೂತ ಸ್ವಾತಂತ್ರ್ಯವನ್ನು ರಕ್ಷಿಸತಕ್ಕದ್ದು. ಅಣ್ವಸ್ತ್ರಗಳ ಪ್ರಥಮ ಪ್ರಯೋಗ ನಿಷೇಧದ ವಿಷಯದ ಬಗ್ಗೆಯಾಗಲಿ, ಸೀಟಿಬೀಟಿಯನ್ನು ಕುರಿತಾಗಲಿ ಪ್ರಧಾನಿಗಳು ಯಾವೊಂದು ನಿರ್ಣಯರೂಪಿಸಿದಂತಿಲ್ಲ.

ಬಸ್ ರಾಜತಂತ್ರ ಸಂಕೇತದಿಂದಾಚೆಗೆ ಮುಂದುವರಿದುದಾಗಿ, ಶಾಂತಿ ಭದ್ರತೆಗಳ ಸಮಸ್ಯೆಯನ್ನು ಕುರಿತು ಚರ್ಚಿಸಿದುದಾಗಿ, ಪರಸ್ಪರ ವಿಶ್ವಾಸ ಭರವಸೆಗಳ ಆಧಾರದ ಮೇಲೆ ದ್ವಿಪಕ್ಷೀಯ ಸಂಬಂಧವನ್ನು ಹೆಚ್ಚಿಸಲು ಒಪ್ಪಿದುದಾಗಿಯೂ ಷರೀಫ್ ತಮ್ಮ ಭಾಷಣದಲ್ಲಿ ತಿಳಿಸುತ್ತಾರೆ. ಬಿಕ್ಕಟ್ಟನ್ನು ಪರಿಹರಿಸಿ, ಸಂಧಾನಕ್ಕಿದ್ದ ಅಡಚಣೆಗಳನ್ನು ತೆಗೆದು ಹಾಕಿ, ಮುಂದಿನ ಮಾರ್ಗವನ್ನು ಸುಲಲಿತಗೊಳಿಸಿದ್ದೇ ಬಸ್ ರಾಜತಂತ್ರದ ಫಲಶ್ರುತಿಯೆಂದು ಹೇಳಬಹುದಾಗಿದೆ. ವಿಶ್ವಸಂಸ್ಥೆ, ಜಪಾನ್, ಅಮೆರಿಕಾ, ಇಂಗ್ಲೆಂಡ್ ಮುಂತಾದ ಜಗತ್ತಿನ ಪ್ರಮುಖ ರಾಷ್ಟ್ರಗಳು ಪ್ರಸಕ್ತ ಸಂಧಾನವನ್ನು ಸ್ವಾಗತಿಸಿವೆ. ಮಾಜಿ ಪ್ರಧಾನಿ ಬೆನಜೀರ್ ಭುಟ್ಟೋ ವಾಜಪೇಯಿಯವರನ್ನು ಭೇಟಿ ಮಾಡುವ ಇಚ್ಛೆಯನ್ನು ವ್ಯಕ್ತಪಡಿಸಿದ್ದರೂ ಅದು ಫಲಪ್ರದವಾದಂತಿಲ್ಲ. ಅದೇನೇ ಇರಲಿ, ಸಿಮ್ಲಾ ಒಪ್ಪಂದವನ್ನು ಮಾನ್ಯ ಮಾಡಿ, ದ್ವಿಪಕ್ಷೀಯ ಚರ್ಚೆಯ ಮೂಲಕ ಎಲ್ಲ

ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ನಿರ್ಧಾರ ಯೋಗ್ಯವಾದದ್ದು. ಎಂಥ ಸಂದರ್ಭದಲ್ಲಿಯೂ ಈ ನಿರ್ಧಾರವನ್ನು ಕೈಬಿಡದೆ, ರಾಷ್ಟ್ರವಿಭಜನೆಯ ಕಾಲದ ಕಹಿಯನ್ನು ಮರೆತು, ವಿದೇಶೀ ಕಿತಾಪತಿಗೆ ಮನಗೊಡದೆ, ಎರಡೂ ಕಡೆಯ ಜನರ ಹಿತಾಸಕ್ತಿಯೊಂದನ್ನೇ ದೃಷ್ಟಿಯಲ್ಲಿಟ್ಟುಕೊಂಡು, ಪರಸ್ಪರ ಹೊಂದಾಣಿಕೆಯಿಂದ ಸಂಧಾನವನ್ನು ಮುಂದುವರಿಸಿದ್ದಾದರೆ ಎರಡು ರಾಷ್ಟ್ರಗಳೂ ಸುಖ ಸಮೃದ್ಧಿಯಿಂದ ಶಾಂತಿಯಿಂದ ಬದುಕಬಹುದಾಗಿದೆ.

ಲಾಹೋರ್ ಘೋಷಣೆಯ ನಂತರ ಪ್ರಧಾನಿ ಷರೀಫ್ ಹೇಳಿದ್ದೇನು? ಕಾಶ್ಮೀರದ ಸಮಸ್ಯೆಯಿಂದಾಗಿ ಪಾಕಿಸ್ತಾನದಲ್ಲಿ ದಿನದಿಂದ ದಿನಕ್ಕೆ ನಿರಾಶೆ ಅಶಾಂತಿ ಮನೋಘಾತ ತೀವ್ರಗೊಳ್ಳುತ್ತಿವೆ; ಅದು ಬಗೆಹರಿಯುವ ತನಕ ಎರಡು ರಾಷ್ಟ್ರಗಳಿಗೂ ಶಾಂತಿಯಿರದು. ಅದು ವಿವಾದಾಸ್ಪದ ವಿಷಯವೆಂದು ವಾಜಪೇಯಿಯವರೂ ಒಪ್ಪಿಕೊಂಡಿದ್ದಾರೆ ಎಂಬುದು ಅವರ ತೀರ್ಮಾನ. ರೆಡ್‌ಕ್ಲಿಫ್ ಫೈಸಲಾತಿಯ ಪ್ರಕಾರದ ನಿಯಂತ್ರಣ ರೇಖೆಯನ್ನು ಖಾಯಮ್ಮಾದ ಅಂತರರಾಷ್ಟ್ರೀಯ ರೇಖೆಯೆಂದು ಗಣಿಸುವುದಿಲ್ಲವಾಗಿ, ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಜನಮತಗಣನೆ ಅನಿವಾರ್ಯವೆಂಬುದಾಗಿ ಅಲ್ಲಿಯ ಕಾಶ್ಮೀರ ವ್ಯವಹಾರ ಮಂತ್ರಿ ಸೇನಾನಿ ಮಜೀದ್ ಮಲ್ಲಿಕ್ ಸ್ಪಷ್ಟಪಡಿಸಿದ್ದಾರೆ. ರಸಾಯನ ವಿಜ್ಞಾನದಲ್ಲಿ ಡಾಕ್ಟೊರೇಟ್ ಪದವಿ ಪಡೆದಿರುವ, ಮೂವತ್ತೇಳು ವರ್ಷದ ಕಾದಂಬರಿಕಾರ್ತಿ ಆಟಿಯಾ ಶಮ್‌ಶೆದ್ ಎಂಬ ಹೆಣ್ಣೊಬ್ಬಳು ಕಾಶ್ಮೀರವನ್ನು ಪಾಕಿಸ್ತಾನಕ್ಕೊಪ್ಪಿಸಿದ್ದಾದರೆ ಬ್ರಹ್ಮಚಾರಿ ವಾಜಪೇಯಿಯವರನ್ನು ತಾನು ಮದುವೆಯಾಗುವುದಾಗಿ ಜಂಗ್ ಎಂಬ ಉರ್ದು ದಿನಪತ್ರಿಕೆಗೆ ಹೇಳಿಕೆ ನೀಡಿದ್ದಾಳೆ.

ಈ ಎಲ್ಲ ವಿದ್ಯಮಾನಗಳನ್ನು ನೋಡಿದಾಗ ಬಸ್ ರಾಜತಂತ್ರ ಮುಖಾಂತರದ ಸಂಧಾನ ಸಫಲವಾಗುವುದೆ ಎಂಬ ಸಂದೇಹ ದೃಢವಾಗುತ್ತದೆ. ಜನಮತಗಣನೆ ಕೇವಲ ಒಂದು ರಾಜ್ಯಕ್ಕೆ ಸೀಮಿತಗೊಂಡಿರಬೇಕೇ? ಅಥವಾ ಇಡೀ ಭಾರತಕ್ಕೆ ಅನ್ವಯವಾಗಬೇಕೆ? ಜಮ್ಮು ಮತ್ತು ಲಡಕ್ ಪ್ರದೇಶಗಳನ್ನು ಭಾರತಕ್ಕೆ ವರ್ಗಾಯಿಸಿ, ಉಳಿದ ಭಾಗವನ್ನು ಪಾಕಿಸ್ತಾನಕ್ಕೆ ವಹಿಸಿಬಿಡಬಹುದಲ್ಲವೆ? ಅಥವಾ ಸ್ವತಂತ್ರ ರಾಷ್ಟ್ರವೆಂದು ಘೋಷಿಸಬಾರದೇಕೆ? ಯಾವುದಾದರೂ ಪರಿಹಾರೋಪಾಯವನ್ನು ಹುಡುಕಿದರೆ ಮಾತ್ರ ಎರಡು ರಾಷ್ಟ್ರಗಳಲ್ಲಿ ನೆಮ್ಮದಿ ತಳವೂರಬಹುದೆಂದು ನಂಬಬಹುದಾಗಿದೆ. ಅಷ್ಟೇ ಅಲ್ಲ, ಭಾರತದಲ್ಲಿ ಜಾತಿಗಳನ್ನಳಿಸಿ, ಜನಜೀವನ ಏಕಮುಖವಾಗಿ ಒಂದಾಗುವಂತೆ ಏರ್ಪಾಡು ಮಾಡದಿದ್ದ ಪಕ್ಷದಲ್ಲಿ ದೇಶದ ಅಖಂಡತೆಗೆ ಭರವಸೆಯಿಲ್ಲವೆಂದೇ ಹೇಳಬೇಕಾಗಿದೆ.

# ಚೀನಾ-ಅಮೆರಿಕಾ ಬಾಂಧವ್ಯ

ಈ ಎರಡೂ ರಾಷ್ಟ್ರಗಳ ಬಾಂಧವ್ಯ ಹೊರ ನೋಟಕ್ಕೆ ಸ್ನೇಹಯುಕ್ತವಾಗಿ ತೋರಿದರೂ, ಶೀತಲ ಸಮರವೆನ್ನುವಷ್ಟರ ಮಟ್ಟಿಗೆ ಆಂತರಂಗಿಕವಾಗಿ ವಿರಸಾಟ ನಡೆಯುತ್ತಿದೆ. ಇಂಡಿಯಾ ಜಪಾನ್ ಕೊರಿಯಾ ಇರಾನ್‌ಗಳನ್ನು ಹದ್ದಿನಲ್ಲಿಟ್ಟು ಕೊಳ್ಳುವ ದೃಷ್ಟಿಯಿಂದ ಚೀನಾದ ಎಲ್ಲ ಅತಿರೇಕ ದುರುದುಂಬಿತನಗಳನ್ನು ಅಮೆರಿಕಾ ಸಹಿಸಿಕೊಂಡು, ಸ್ನೇಹವನ್ನು ನಟಿಸುತ್ತಿದೆ. ಚೀನಾ ಏನು ಮಾಡಿದರೂ, ಅಮೆರಿಕಾ ಅದನ್ನು ಪ್ರಶ್ನಿಸುವುದಿಲ್ಲ. ಚೀನಾ ಯುದ್ಧಕೋರ ರಾಷ್ಟ್ರಗಳಿಗೆ ಕಳ್ಳತನದಿಂದ ಯುದ್ಧ ಸಾಮಗ್ರಿಯನ್ನು ಸಾಗಿಸುತ್ತಿದೆ; ಅಣುರಹಸ್ಯಗಳನ್ನು ನೀಡುತ್ತಿದೆ. ಅದು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಹೆಗಲೆಣೆಯಾಗಿ ಸವಾಲು ಹಾಕುವ ಸಾಮರ್ಥ್ಯವನ್ನು ಪಡೆದಿರುವುದರಿಂದ ಅಮೆರಿಕಾ ಅದರ ಬಗ್ಗೆ ಅನುನಯದ ಕ್ರಮವನ್ನನುಸರಿಸುತ್ತಿದೆ. ಆ ಸಾಮರ್ಥ್ಯ ಇಂಡಿಯಾಕ್ಕಿಲ್ಲ. ಧರ್ಮದ ಹೆಸರಿನಲ್ಲಿ, ದೇಶ ರಕ್ಷಣೆಯ ನೆಪದಲ್ಲಿ ಪ್ರಜಾತಂತ್ರವಾದಿಗಳನ್ನು ಗಲ್ಲಿಗೇರಿಸುತ್ತಿರುವ ಸಂಗತಿ ಅಮೆರಿಕಾ ಸರ್ಕಾರಕ್ಕೆ ಅರಿಯದ ವಿಷಯವೇನಲ್ಲ. ಅಕಸ್ಮಾತ್ ಅದೇನಾದರೂ ಆ ಪ್ರಶ್ನೆ ಎತ್ತಿದರೆ, ಇದೆಲ್ಲ ಆಂತರಿಕ ವ್ಯವಹಾರಕ್ಕೆ ಸಂಬಂಧಿಸಿದ್ದು, ಅದರಲ್ಲಿ ಹೊರಗಿನವರು ಮೂಗು ತೂರಿಸಕೂಡದೆಂದು ಚೀನಾ ಗರ್ಜಿಸುತ್ತದೆ. ಆ ಗರ್ಜನೆಗೆ ಅಮೆರಿಕಾ ಹೆದರುತ್ತದೆ. ಪಾಶ್ಚಾತ್ಯರಿಗೆ ಹೆದರದ ಇಂಥ ಪ್ರಬಲ ರಾಷ್ಟ್ರವೊಂದು ಏಷ್ಯಾದಲ್ಲಿದೆಯೆಂದು ಏಷಿಯಾದ ಜನ ಹೆಮ್ಮೆ ಪಡುವಂತಾಗಿದೆ. ಚೀನಾವಾದರೂ ನೆರೆಹೊರೆಯ ರಾಷ್ಟ್ರಗಳೊಡನೆ ವಿಶ್ವಾಸದಿಂದ ವರ್ತಿಸುತ್ತ ಹೊಟ್ಟೆಬಾಕತನವನ್ನುಳಿದು, ಶಾಂತಿಯಿಂದ ತಮ್ಮ ನಡುವಣ ಸಮಸ್ಯೆಗಳನ್ನೆಲ್ಲ ಬಗೆಹರಿಸಿಕೊಂಡದ್ದಾದರೆ, ಜಗತ್ತಿನಲ್ಲಿ ಅದರ ಪ್ರತಿಷ್ಠೆ ಮತ್ತಷ್ಟು ಹೆಚ್ಚುತ್ತದೆನ್ನುವುದರಲ್ಲಿ ಸಂದೇಹವಿಲ್ಲ. ಬಹು ದೀರ್ಘಕಾಲದ ಸಮಸ್ಯೆಗಳನ್ನು ಚರ್ಚಿಸುವ ಸಲುವಾಗಿ ಭಾರತೀಯ ಸರ್ಕಾರ ಸಂಧಾನ ಪ್ರಾರಂಭಿಸಿರುವುದು ಸ್ತುತ್ಯ ಸಂಗತಿ. ಈ ಸಂಧಾನ ಯಶಸ್ವಿಯಾಗಲೆಂದು ಹಾರೈಸೋಣ.

# ರಸ್ತೆ ರಾಜಕೀಯ

ಬೆಂಗಳೂರು ಮೈಸೂರುಗಳ ಬೆಳವಣಿಗೆಯ ವೇಗವನ್ನು ನೋಡಿದಾಗ, ಇಷ್ಟರಲ್ಲೇ ಅವೆರಡೂ ಅವಳಿ ನಗರಗಳಾಗುವ ಸಂಭವವಿದೆ. ಹೀಗಾಗಿ ಓಬೀರಾಯನ ಕಾಲದಲ್ಲಿ ಕೋಣನ ಬಂಡಿಗಳಿಗೆಂದು ನಿರ್ಮಾಣಗೊಂಡ ರಸ್ತೆಗಳು ಈಗಿನ ಬಹುಸಂಖ್ಯೆಯ ವಾಹನ ಸಂಚಾರಕ್ಕೆ ಯೋಗ್ಯವಾಗುಳಿದಿಲ್ಲ. ವಾಹನಗಳ ಸಾಂದ್ರತೆಯಿಂದಾಗಿ ಸಂಚಾರ ಕುಂಟುತ್ತದೆ; ಅಪಘಾತಗಳು ಹೆಚ್ಚುತ್ತಿವೆ. ಈ ಅನಾಹುತ ಅನಾನುಕೂಲಗಳನ್ನು ತಡೆಗಟ್ಟುವ ಮತ್ತು ಜನರಿಗೆ ಸೌಲಭ್ಯಗಳನ್ನು ಕಲ್ಪಿಸುವ ಸಲುವಾಗಿ ಹೊಸ ಹೆದ್ದಾರಿಯೊಂದನ್ನು ಬೆಂಗಳೂರು ಮೈಸೂರುಗಳ ಮಧ್ಯೆ ನಿರ್ಮಿಸಲು ಸರಕಾರ ಯೋಚನೆ ಮಾಡಿದ್ದು ಸರಿಯೆ, ವಿವೇಕಿಗಳು ಮತ್ತು ರೈತ ಹಿತಾಸಕ್ತರು ವಿವೇಚಿಸಬೇಕು. ನೂತನ ಮಾರ್ಗ ನಿರ್ಮಾಣದಿಂದ ಸುಮಾರು ಇಪ್ಪತ್ತೈದು ಸಾವಿರ ಎಕರೆ ಹೊಲ ಗದ್ದೆ ತೋಟಗಳನ್ನು ರೈತರಿಂದ ಕಸಿದುಕೊಳ್ಳಬೇಕಾಗಿದೆ. ಅವರು ನಿರ್ವಸಿತರಾಗುತ್ತಾರೆ; ಅನುಕೂಲಸ್ಥರೂ ದರಿದ್ರರಾಗುತ್ತಾರೆ; ಮಕ್ಕಳು ಬೀದಿ ಪಾಲಾಗುತ್ತಾರೆ; ಲಕ್ಷಾಂತರ ಟನ್ ದವಸ ಖೋತಾ ಬೀಳುತ್ತದೆ; ಕೃಷ್ಯುತ್ಪನ್ನ ಕ್ಷೀಣಿಸುತ್ತದೆ; ಪರಿಸರಕ್ಕೆ ಧಕ್ಕೆಯೊದಗುತ್ತದೆ. ರಸ್ತೆ ನಿರ್ಮಾಣದಿಂದೊದಗುವ ಲಾಭದೊಡನೆ ಈ ನಷ್ಟವನ್ನು ತಾಳೆ ಹಾಕಿ ಪರೀಕ್ಷಿಸಿದಾಗ, ನಷ್ಟವೇ ಬಹು ಪ್ರಮಾಣದಲ್ಲಿ ಎದ್ದು ಕಾಣುತ್ತದೆ, ಇವೆಲ್ಲಕ್ಕಿಂತ ಮಿಗಿಲಾಗಿ ಮನೆ ಭೂಮಿ ಕಳೆದುಕೊಂಡವರ ಮಾನಸಿಕ ಆಘಾತವನ್ನಳೆಯಲು ಸಾಧ್ಯವೆ? ಭೂದಾಹವಾಗಲಿ, ಕೃಷಿ ಭೂಮಿಯ ಅಪಹರಣವಾಗಲಿ ದೈವದ್ರೋಹವಾಗುತ್ತದೆ, ದೇಶದ್ರೋಹವಾಗುತ್ತದೆ. ಕೃಷಿ ಭೂಮಿಯನ್ನು ಚಿನ್ನಕ್ಕಿಂತ ಮಿಗಿಲಾಗಿ ಅಪವ್ಯಯವಾಗದಂತೆ ಕಾಪಾಡಿಕೊಳ್ಳಬೇಕಾದ್ದು ಸಜ್ಜನರ, ದೇಶಾಭಿಮಾನಿಗಳ ಆದ್ಯಕರ್ತವ್ಯ.

ರೈಲು ಮಾರ್ಗ ಸೇರಿ ಬೆಂಗಳೂರು ಮೈಸೂರುಗಳ ನಡುವೆ ಮೂರು ಮಾರ್ಗಗಳಿವೆ. ನಾಲ್ಕನೆಯದಾದ ರೈಲು ಮಾರ್ಗ ಬೆಂಗಳೂರಿಂದ ಕೊಯಮತ್ತೂರಿನೆಡೆಗೆ ಹರಿಯುವಾಗ, ಮೈಸೂರಿಗೆ ಸಮೀಪವಾಗುತ್ತದೆ. ಮಂಡ್ಯ ಮತ್ತು ಕನಕಪುರಗಳ ಮೂಲಕ ಹಾದು ಹೋಗುವ ರಸ್ತೆಗಳನ್ನು ಅಗಲಗೊಳಿಸಿ, ಬಾಗುಗಳನ್ನು ಸರಿಗೊಳಿಸಿ, ಗುಂಡಿಗಳನ್ನು ಮುಚ್ಚಿದರೆ, ರೈಲುಗಳ ಓಡಾಟವನ್ನು ಮತ್ತು ವೇಗವನ್ನು ಹೆಚ್ಚುಗೊಳಿಸಿದರೆ ಗಲಗು ಗೊಂದಲ ನೆಗ್ಗು ನುಗ್ಗಾಟ ಅವಗಡ ವಿಘಟನಗಳನ್ನು ಯಶಸ್ವಿಯಾಗಿ ತಡೆಗಟ್ಟಬಹುದು. ಹಳೆಯ ಮಾರ್ಗಗಳ ನವೀಕರಣದಿಂದಾಗಿ ತಗಲುವ ವೆಚ್ಚ ಕಡಮೆ; ನಷ್ಟವಾಗುವ ಭೂಮಿ ಕಮ್ಮಿ. ಮಾನವ ಹೃದಯವುಳ್ಳ ಅಧಿಕಾರಿಗಳು, ಆಡಳಿತಗಾರರು ಮತ್ತು ನಾಯಕರು ಈ ಕಡೆ ಗಮನ ಹರಿಸುವರೆ?

ದೇಜಗೌ

# ಏಷ್ಯಾದ ಬೆಳಕು-ಬುದ್ಧ

ಟಿ. ಎಸ್. ಲಲಿತ

೭೦೨, ಮೊದಲ ಮಹಡಿ, ೧೭ ನೇ ಮೇನ್
ಸರಸ್ವತಿಪುರ, ಮೈಸೂರು–೫೭೦೦೦೯

ದೂರದಿಂದಲೇ ನೀವು ಆ ದೇವಾಲಯುವನ್ನು ಕಾಣುತ್ತೀರಿ. ಶತಶತಮಾನಗಳಿಂದಲೂ ಬಡ ರೈತರಿಂದ ಉಳಲ್ಪಡುತ್ತಿರುವ ಭಾರತದ ವಿಶಾಲ ನೆಲದಲ್ಲಿ ೫೧ ಮೀಟರ್ ಎತ್ತರದ ಗೋಪುರ ಮೇಲೆದ್ದು ಕಾಣುತ್ತದೆ. ೨೫ ಶತಮಾನಗಳ ಹಿಂದೆ ಇದೇ ಬೋಧಗಯಾದ ವಿಶಾಲ ಬೋಧಿ ವೃಕ್ಷದ ಕೆಳಗೆ ಗೌತಮಬುದ್ಧ ಜ್ಞಾನದ ಬೆಳಕು ಕಂಡ.

ನಮ್ಮ ಧರ್ಮ ಯಾವುದೇ ಇರಲಿ, ಸಾರ್ವತ್ರಿಕ ಮೌಲ್ಯ ಹೊಂದಿದ ಅವನ ಬೋಧನೆ, ಕರುಣೆ, ಜ್ಞಾನ, ಮಾನವತೆಯ ಮೂಲಕ ಸಿದ್ಧಾರ್ಥ–ಗೌತಮ ಬುದ್ಧನಾಗಿ ನಮ್ಮೆಲ್ಲರೊಂದಿಗೆ ಸಂಭಾಷಿಸುತ್ತಾನೆ. ವಿಶ್ವದ ೨೬೧ ಮಿಲಿಯನ್ ಬೌದ್ಧರಲ್ಲಿ ಹೆಚ್ಚಿನವರು ಏಷ್ಯಾದ ನಿವಾಸಿಗಳು.

ಯಾವ ಬರಹವನ್ನೂ ಬುದ್ಧ ಬಿಟ್ಟು ಹೋಗಿಲ್ಲ. ಆತನ ಹೇಳಿಕೆಗಳು ಹಾಗೂ ಜೀವನದ ಪ್ರಮುಖ ಘಟನೆಗಳು ಮೌಖಿಕವಾಗಿ ಹೇಳಲ್ಪಟ್ಟವು. ಕ್ರಿ. ಪೂ. ೪೮೦ರಲ್ಲಿ ಆತ ಮರಣಹೊಂದಿದ ನಂತರವೂ ಅನೇಕ ಶತಮಾನಗಳವರೆಗೆ ಅವು ದಾಖಲಾಗಲಿಲ್ಲ. ಆದರೂ ಎಲ್ಲಾ ಸಾಕ್ಷ್ಯಾಧಾರಗಳನ್ನು ಸೋಸಿದ ಸಂಶೋಧಕರು ಆತನ ಜೀವನದ ತಿರುಳನ್ನು ಬೇರ್ಪಡಿಸಿದ್ದಾರೆ.

ಸಿದ್ಧಾರ್ಥನ ತಂದೆ ಆಳಿದ್ದು ಇಂದಿನ ನೇಪಾಳವೆನಿಸಿರುವ ಭಾರತದ ಉತ್ತರ ಗಡಿಯ ಹಿಮಾಲಯದ ತಪ್ಪಲಿನ ಗ್ರಾಮೀಣ ಪ್ರದೇಶ. ಸಿದ್ಧಾರ್ಥ ಹುಟ್ಟಿದ ವಾರದೊಳಗೇ ತಾಯಿಯ ಮರಣ. ಹುಡುಗ, ಕೋಟೆಯಾವೃತ ರಾಜಧಾನಿ ಕಪಿಲವಸ್ತುವಿನ ಅರಮನೆಯಲ್ಲಿ ಬೆಳೆಯುತ್ತಾ ಕುದುರೆ ಸವಾರಿ, ಶಿಕಾರಿ ಧಾರ್ಮಿಕ ಗ್ರಂಥ ಪಠಣ ಹಾಗೂ ದೇವರ ಪೂಜೆಯಲ್ಲಿ ಕಳೆದ. ವಯಸ್ಸಿಗೆ ಮೀರಿದ ಜ್ಞಾನ, ಅಸಾಧಾರಣ ಶೌರ್ಯದ ಖನಿ ಎನಿಸಿದ.

ಸಂತೃಪ್ತಿದಾಯಕ ವೈವಾಹಿಕ ಜೀವನ ಸಿದ್ಧಾರ್ಥನದು. ರಾಹುಲ ಹುಟ್ಟಿದ ನಂತರ ಒಂದು ನಡುರಾತ್ರಿಯಲ್ಲಿ ಜಗವೆಲ್ಲ ಮಲಗಿರಲು ಇವನೊಬ್ಬನೆದ್ದು, ಹೆಂಡತಿ

ಮೂಲ : ರೀಡರ್ಸ್ ಡೈಜೆಸ್ಟ್‌ನ 'ಅರ್ನೆಸ್ಟ್ ಹ್ಯಾನ್ ಸನ್' ಅವರ "ಬುದ್ಧ ದಿ ಲೈಟ್ ಆಫ್ ಏಷ್ಯ" ಲೇಖನ.

ಮಗುವಿನತ್ತ ಕಡೆಯ ನೋಟ ಬೀರಿ, ಕುದುರೆಯನ್ನೇರಿ, ಕತ್ತಲನ್ನು ಸೀಳಿ ಹೊರಟ. ಕುದುರೆಯೊಂದಿಗೆ ಆಳನ್ನು ಅರಮನೆಗೆ ಹಿಂತಿರುಗಿ ಕಳಿಸಿದಾಗ ತನ್ನೊಡೆಯನ ಅಗಲಿಕೆ ತಾಳಲಾರದ ಕುದುರೆ ಸಾವನ್ನಪ್ಪಿತು.

ಇಪ್ಪತ್ತೊಂಬತ್ತರ ಹರೆಯದಲ್ಲಿ ಈ 'ಮಹಾ ಪರಿತ್ಯಾಗ'ಕ್ಕೆ ಪ್ರೇರಣೆಯಾದರೂ ಏನು? ಅರಮನೆಯ ಉದ್ಯಾನದಾಚೆ ಸಿದ್ಧಾರ್ಥ ಕಂಡುದು ಒಬ್ಬ ಅಸಹಾಯಕ ವೃದ್ಧ, ಒಂದು ಮೃತ ಶರೀರ ಹಾಗೂ ಒಬ್ಬ ಧಾರ್ಮಿಕ ವ್ಯಕ್ತಿ. ಅವನನ್ನು ಬೆರಗುಗೊಳಿಸಿದ್ದು ಮಾನವನ ಈ ನರಳುವಿಕೆ ಹಾಗೂ ದುಃಖದ ಸ್ಥಿತಿ. ಮನುಷ್ಯ ಈ ಸ್ಥಿತಿಯನ್ನು ಹೇಗೆ ಜಯಿಸಬಲ್ಲ? ಚಿಂದಿಯುಟ್ಟು ಕೈಯಲ್ಲಿ ಭಿಕ್ಷಾಪಾತ್ರೆ ಹಿಡಿದಿದ್ದರೂ ಆ ಧಾರ್ಮಿಕ ವ್ಯಕ್ತಿಯ ಮುಖದಮೇಲೆ ಅಸಾಧಾರಣ ಶಾಂತಿ ನೆಲಸಿದ್ದನ್ನು ಕಂಡುಕೊಂಡ. ಮೊದಲ ಹಂತದಲ್ಲಿ ಎಲ್ಲ ಸಾಂಸಾರಿಕ ಸುಖ ಹಾಗೂ ಐಶ್ವರ್ಯವನ್ನು ತ್ಯಾಗ ಮಾಡುವುದೇ ತನ್ನೆಲ್ಲ ಪ್ರಶ್ನೆಗಳಿಗೆ ಉತ್ತರ ದೊರಕಿಸಿಕೊಳ್ಳುವ ಮಾರ್ಗವೆಂದು ತಿಳಿದ.

ಮನೆ ತ್ಯಜಿಸಿದ ಸಿದ್ಧಾರ್ಥ, ಅಸ್ತಿತ್ವದ ನಿಜವಾದ ಅರ್ಥ ಕಂಡುಕೊಳ್ಳಲು ನಿರ್ಧರಿಸಿ ನೆಲೆ ಇಲ್ಲದೆ ಬಿಕ್ಕೆ ಬೇಡುತ್ತ ಉತ್ತರ ಭಾರತದಲ್ಲಿ ಸಂಚರಿಸಿದ. ಮೊದಲು ಹಿಂದು ಪವಿತ್ರ ಗ್ರಂಥಗಳ ಇಬ್ಬರು ಬೋಧಕರಲ್ಲಿ ಶಿಷ್ಯವೃತ್ತಿ. ಅನಂತರ ದೇಹ ದಂಡಿಸುವ ಐವರು ಸನ್ಯಾಸಿಗಳೊಂದಿಗೆ ವಾಸ, ಉಪವಾಸ, ಪರಿಣಾಮ, ಎದ್ದು ನಿಲ್ಲಲೂ ಶಕ್ತಿ ಇಲ್ಲದೆ, ಫಲ ಸಿಗದ ವ್ಯರ್ಥ ಹುಡುಕಾಟ.

ಸನ್ಯಾಸಿಗಳ ಸಂಗಬಿಟ್ಟು ಸಿದ್ಧಾರ್ಥ, ಇಂದಿನ ಬಿಹಾರದ ಬೋಧಗಯೆಯ ಬಳಿಯ ನದಿಯ ತೀರ ಸೇರಿದ. ತಿಳಿ ನೀರಿನಲ್ಲಿ ಸ್ನಾನ ಮಾಡಿದ ನಂತರ ರೈತ ಹೆಣ್ಣೊಬ್ಬಳು ತಂದ ಪಾಯಸವನ್ನು ಕೃತಜ್ಞತೆಯಿಂದ ಸ್ವೀಕರಿಸಿದ. ಅತಿಯಾದ ತಿನ್ನುವಿಕೆ ಅಥವಾ ಉಪವಾಸ ಎರಡೂ ಹಾನಿಕಾರಕ ಆದ್ದರಿಂದ ಇನ್ನು ಮುಂದೆ ಎಲ್ಲ ವಿಷಯದಲ್ಲೂ ಮಧ್ಯಮ ಮಾರ್ಗವನ್ನು ಅನುಸರಿಸುವ ನಿರ್ಧಾರ ಮಾಡಿದ.

ಆರು ವರ್ಷಗಳ ನಂತರ ೭ ದಿನಗಳ ವರೆಗೂ ಸಿದ್ಧಾರ್ಥ ಸ್ಥಿರಚಿತ್ತದಿಂದ ಬೋಧಿ ವೃಕ್ಷದ ಕೆಳಗೆ ಕುಳಿತು ಧ್ಯಾನ ಮಗ್ನನಾದ. ಅವನ ಧ್ಯಾನ ಭಂಗ ಮಾಡಲು ಭೋಗ ಜೀವನದ ಆಮಿಷ ತೋರಿಸಲು, ಸುಂದರ ಸ್ತ್ರೀಯರ ಸಮೂಹವನ್ನೇ ಅವನ ಮುಂದೆ ನಿಲ್ಲಿಸಿದ ಕೆಡುಕಿನ ಶಕ್ತಿ ಮಾರ. ತನ್ನ ಪ್ರಯತ್ನದಲ್ಲಿ ವಿಫಲನಾದ, ಮಾರ ನರಕದ ದೈತ್ಯರಿಂದ ಸಿದ್ಧಾರ್ಥನ ಮೇಲೆ ಆಕ್ರಮಣ ಮಾಡಿಸಿದ.

ಅಲುಗಾಡದ ಸಿದ್ಧಾರ್ಥ, ಒಳಿತು ಕೆಡಕುಗಳ ಸಾಂಕೇತಿಕ ಸ್ಪರ್ಧೆಯಲ್ಲಿ ಕೆಡಕಿನ ಮೇಲೆ ವಿಜಯಿಯಾದ. ದಂತ ಕತೆಗಳೇನೇ ಸಾರಲಿ ಆತಂಕದ ಕ್ಷಣಗಳನ್ನೆದುರಿಸಿದ ಸಿದ್ಧಾರ್ಥ ಹುಡುಕಾಟ ಕೊನೆಗೆ ನಿಂತು ಕಂಡು 'ಬುದ್ಧ'ನಾದ.

## ಬೋಧನೆ

ತಾನು ಹೊಸದಾಗಿ ಕಂಡುಕೊಂಡ ಜ್ಞಾನದೊಂದಿಗೆ ಬುದ್ಧ ವಾರಣಾಸಿ ತಲುಪಿದ. ಊರ ಹೊರಗಿನ ಹರಿಣೋದ್ಯಾನದಲ್ಲಿ ತನ್ನೈವರು ಸನ್ಯಾಸಿ ಮಿತ್ರರನ್ನು ಸಂಧಿಸಿದ. ಅವನ ಜ್ಞಾನ ಪ್ರಭೆಯನ್ನು ಕಂಡು ನಮಸ್ಕರಿಸಿದ ಆ ಐವರನ್ನೇ ತನ್ನ ಸಭಿಕರನ್ನಾಗಿಸಿಕೊಂಡು ಪ್ರಸಿದ್ಧ ನಾಲ್ಕು "ಆರ್ಯ ಭವ್ಯ ಸತ್ಯ"ಗಳನ್ನವರಿಗೆ ಬೋಧಿಸಿದ. (೧) ಬದುಕು ನೋವಿನಿಂದ ಕೂಡಿದೆ (೨) ಸದಾ ಐಹಿಕ ಸುಖ ಸಂತೋಷ ಹಾಗೂ ಪ್ರಾಪಂಚಿಕ ವಸ್ತುಗಳಿಗಾಗಿ ಆಸೆ ಪಡುವುದು ನೋವಿಗೆ ಕಾರಣ(೩) ಮನುಷ್ಯ ಆಸೆಯಿಂದ ಮುಕ್ತನಾದಾಗ ನೋವಿನಿಂದಲೂ ಮುಕ್ತನಾಗುತ್ತಾನೆ. (೪) ಈ ನೋವಿನಿಂದ ಬಿಡುಗಡೆಗೆ ಕೊಂಡೊಯ್ಯುವ ಮಾರ್ಗವೇ ಅಷ್ಟಾಂಗ ಮಾರ್ಗ. ಅವುಗಳೆಂದರೆ (೧) ಒಳ್ಳೆಯ ವಿಚಾರ (೨)ಒಳ್ಳೆಯ ಗುರಿ (೩) ಒಳ್ಳೆಯ ನಡೆ (೪) ಒಳ್ಳೆಯ ಜೀವನ (೫) ಒಳ್ಳೆಯ ಪ್ರಯತ್ನ (೬) ಒಳ್ಳೆಯ ಯೋಚನೆ. (೭) ಒಳ್ಳೆಯ ನುಡಿ (೮) ಒಳ್ಳೆಯ ಚಿಂತನೆ.

ಮುಂದಿನ ೪೫ ವರ್ಷಗಳವರೆಗೂ ಬುದ್ಧ ಪೂರ್ವೋತ್ತರ ಭಾರತದಲ್ಲಿ ಸಂಚರಿಸಿ ಬೋಧಿಸಿ, ಸಾವಿರಾರು ಜನರನ್ನು ಬೌದ್ಧ ಮತಕ್ಕೆ ಪರಿವರ್ತಿಸಿ ಜೀವಂತ ಬೆಳಕೆಂದು ಪರಿಗಣಿಸಲ್ಪಟ್ಟ. ಅತ ಮುಖ್ಯವಾಗಿ ನೀತಿ ಬೋಧಕ, ಕರ್ಮ, ಪುನರ್ಜನ್ಮಗಳ ತತ್ವವೆನ್ನುವವರೂ, ದೇವರ ಬಗ್ಗೆ ಪ್ರಶ್ನಿಸಿದಾಗ ಆಪರದಕ್ಕೆ ಉತ್ತರಿಸಲು ನಿರಾಕರಿಸುತ್ತಿದ್ದ. ಬದುಕಲು ನಮ್ಮ ಮೇಲೆ ನಾವು ಭರವಸೆ ಇಡಬೇಕು. ಪ್ರಯತ್ನ ಮಾಡಬೇಕಾಗಿರುವುದು ನಾವೇ" ಎಂದು ಮತ್ತೆ ಮತ್ತೆ ಒತ್ತಿ ಹೇಳಿದ.

"ನಾವು ಏನಾಗಿದ್ದೇವೋ, ಅದು ನಮ್ಮ ಆಲೋಚನೆಗಳ ಪರಿಣಾಮ. ಮನದಲ್ಲಿ ದುರಾಲೋಚಿಸಿ ಕೆಟ್ಟದ್ದಾಡಿ, ಕೆಟ್ಟದಾಗಿ ವರ್ತಿಸಿದರೆ ಅದರಿಂದ ನಮಗೆ ನೋವುಂಟಾಗುತ್ತದೆ. ಒಳ್ಳೆಯ ಹೃದಯದಿಂದ ಮಾತಾಡಿ, ಒಳ್ಳೆಯದಾಗಿ ವರ್ತಿಸಿದರೆ, ಉತ್ತಮ ಪರಿಣಾಮ ನಮ್ಮನ್ನು ನೆರಳಿನಂತೆ ಹಿಂಬಾಲಿಸುತ್ತದೆ. ಶ್ರೇಷ್ಠ ಸತ್ವಗಳನ್ನನು ಸರಿಸಿದಾಗ, ಒಳಿತು ಕೆಡಕಿನ ಮೇಲೆ ವಿಜಯ ಸಾಧಿಸುತ್ತದೆ. ದುರಾಸೆ, ಸುಳ್ಳುಗಳಿಂದ ದೂರಾಗಿ ಎಲ್ಲ ಪ್ರಾಣಿಗಳೊಂದಿಗೂ ತಾಳ್ಮೆ ಹಾಗೂ ದಯೆಯಿಂದ ವರ್ತಿಸಿ" ಎಂದು ಬೋಧಿಸಿದ.

ಹಿಂದು ನಂಬಿಕೆಯ ಪ್ರಕಾರ ಮನುಷ್ಯನಾಗಲೀ, ಪ್ರಾಣಿಯಾಗಲಿ, ಸತ್ತ ನಂತರ ಆತ್ಮ ಮತ್ತೊಂದು ದೇಹವನ್ನು ಪ್ರವೇಶಿಸುತ್ತವೆ. ಪುರಾಣಗಳ ಪ್ರಕಾರ ಜೀವನ ಚಕ್ರದ ಕಾಣ್ಕೆಯನ್ನು ಮೊದಲು ಗುರುತಿಸಿದವನು ಬುದ್ಧ. ಮರು ಹುಟ್ಟಿನ ಬಂಧನ ಹಾಗೂ ಅದರೊಂದಿಗಿನ ನೋವಿನಿಂದ ಸ್ವತಂತ್ರನಾಗಿ ಆಸೆ, ಭ್ರಾಂತಿ ಸಾವುಗಳನ್ನು ಮೀರಿದ ನಿರ್ವಾಣವನ್ನು ಹೊಂದುತ್ತಾನೆ: ಎಂದು ಬೋಧಿಸಿದ.

ಆಧ್ಯಾತ್ಮಿಕ ಜೀವನ ಮುಖ್ಯವಾಗಿ, ಅಷ್ಟು ಪ್ರೀತಿಸಲ್ಪಡುವ ಗುರುವಿನ ಮಾರ್ಗದರ್ಶನದಲ್ಲಿ, ಹೆಚ್ಚಿನವರಿಗೆ ಪ್ರಿಯವಾಯ್ತು. ಅನೇಕ ವೇಳೆ ಅವನ ಶಿಷ್ಯರು ತಮ್ಮ ಬೋಧನೆಯ ಪ್ರವಾಸದಿಂದ

ಹಿಂತಿರುಗಿದಾಗ ಆ ಧರ್ಮಕ್ಕೆ ಸೇರಲಿಚ್ಛಿಸುವ ಶಿಷ್ಯರು ಪ್ರವಾಹದೋಪಾದಿ ಅವರೊಂದಿಗೆ ಬರುತ್ತಿದ್ದರು. ತನ್ನೂರು ಕಪಿಲವಸ್ತುವಿಗೆ ಹೋಗಿ ರಸ್ತೆಗಳಲ್ಲಿ ಭಿಕ್ಷೆ ಬೇಡಿದಾಗ, ಅವನ ತಂದೆ ಬುದ್ಧನಿಗೆ ಗೌರವ ಸಲ್ಲಿಸಿದ. ಪ್ರತಿ ಮನೆಗೊಬ್ಬ ಸದಸ್ಯನಂತೆ, ಒಟ್ಟು ೮೦,೦೦೦ ಜನ ಬೌದ್ಧ ಧರ್ಮವನ್ನಪ್ಪಿದರು.

ಮುಂದೆ ತನ್ನ ಸಹಚರರ ಒತ್ತಡಕ್ಕೆ ಮಣಿದ ಬುದ್ಧ, ಸ್ತ್ರೀಯರು ತನ್ನ ಧರ್ಮ ಸೇರಲು ಅನುಮತಿ ನೀಡಿದ. ಪ್ರತಿಯೊಬ್ಬ ಅನುಯಾಯಿಯೂ ಬಡತನ ಹಾಗೂ ಪರಿಶುದ್ಧ ಜೀವನ ನಡೆಸಿ ಆದರ್ಶ ಮಾರ್ಗಗಳನ್ನನುಸರಿಸಿ, ನಿರ್ವಾಣಕ್ಕೆ ಅರ್ಹರಾಗಬೇಕೆಂದು ಬುದ್ಧನ ಅಪೇಕ್ಷೆ. ಅವನ ಪ್ರಕಾರ ಸೂಜಿ, ದಾರ, ಭಿಕ್ಷಾಪಾತ್ರೆ, ಜಪಸರ, ವಿನಯದ ದ್ಯೋತಕವಾಗಿ ತಲೆಯ ಕ್ಷೌರ ಮಾಡಿಕೊಳ್ಳಲು ಒಂದು ಕತ್ತಿ ಹೊರತು ಯಾವುದೇ ಪ್ರಾಪಂಚಿಕ ವಸ್ತುಗಳನ್ನು ಸನ್ಯಾಸಿಗಳು ಹೊಂದಿರಬಾರದು. ಕಳೆದುಳಿದ ಚಿಂದಿಯಿಂದ ಮಾಡಿದ ಹಳದಿ ವಸ್ತ್ರ ಇಟ್ಟುಕೊಳ್ಳಬಹುದಿತ್ತು. ಚಳಿಯ ರಾತ್ರಿ ಹೆಚ್ಚಿನ ವಸ್ತ್ರ ಉಪಯೋಗಿಸಬೇಕಾದ ಅನಿವಾರ್ಯತೆ ಒದಗಿದಾಗ ಒಂದು ವಸ್ತ್ರದ ಬದಲು ಮೂರು ವಸ್ತ್ರಗಳನ್ನು ಹೊಂದುವ ಅನುಮತಿ ಇತ್ತು.

ಬುದ್ಧನ ತತ್ವಗಳಲ್ಲಿ ಧಾರ್ಮಿಕತೆಗಿಂತ ಸಾಮಾಜಿಕತೆಗೆ ಹೆಚ್ಚಿನ ಮಹತ್ವವಿತ್ತು. ಅವು ಪ್ರಜಾಸತ್ತಾತ್ಮಕವಾಗಿ ಸಾಮಾಜಿಕ ಸಮಾನತೆಯ ತತ್ವಗಳಾಗಿದ್ದವು. ಭಾರತದ ನಾಲ್ಕು ಮುಖ್ಯ ರಾಜ್ಯಗಳಲ್ಲೊಂದನ್ನಾಳುತ್ತಿದ್ದ ದೊರೆ ಬಿಂಬಸಾರನೂ ಬುದ್ಧನ ಶಿಷ್ಯರಲ್ಲೊಬ್ಬ. ರಾಜ ಬುದ್ಧನಿಗೆ ಕೊಟ್ಟ ಬೊಂಬಿನ ಮೆಳೆಯ ಕಾಣಿಕೆ, ಮಳೆಗಾಲದಲ್ಲವನಿಗೆ ರಕ್ಷಣೆ ನೀಡಿತು. ಅದು ಇಂದಿನ ಬುದ್ಧಗಯೆಯ ಪೂರ್ವೋತ್ತರದಲ್ಲಿ ರಾಜಗಿರ್‌ನ ಸ್ಮಾರಕ ಉದ್ಯಾನವೆನಿಸಿದೆ.


ಮಳೆಗಾಲವನ್ನು ಬುದ್ಧ ಸಾಮಾನ್ಯವಾಗಿ ಮಠವೊಂದರಲ್ಲಿ ಕಳೆದರೂ ಹೊರಗಿನ ಕಾಡಿನಲ್ಲಿಯೇ ಆತ ಹೆಚ್ಚು ಸಂತೋಷವನ್ನನುಭವಿಸುತ್ತಿದ್ದ. ಗದ್ದಲದಿಂದ ದೂರವಾಗಿ ದೀರ್ಘಕಾಲ ಜನ ಸಂಚಾರವಿಲ್ಲದ ಸ್ಥಳದಲ್ಲಿ ನಿಲ್ಲುತ್ತಿದ್ದ. ಆಗ ಅವನಿಗೆ ಆಹಾರ ಒದಗಿಸುವ ಸನ್ಯಾಸಿಗೆ ಮಾತ್ರ ಅಲ್ಲಿಗೆ ಬರಲವಕಾಶವಿತ್ತು. ಅವನ ನಿರ್ವಿಕಾರ ಶಾಂತತೆ ಸದಾ ಧ್ಯಾನಭರಿತವಾಗಿರುತ್ತಿತ್ತು.

ಕ್ರೂರ ಪ್ರಾಣಿಗಳೊಂದಿಗೂ ಬದ್ಧನ ಬಾಂಧವ್ಯ ಗಾಢವಾಗಿತ್ತು. ಈ ಕುರಿತು ಜಾತಕ ಕಥೆಗಳಲ್ಲಿ ಉಲ್ಲೇಖವಿದೆ. ಸಸ್ಯಾಹಾರಿಯಲ್ಲವಾದರೂ ಪ್ರಾಣಿಗಳನ್ನು ಬಲಿ ಕೊಡುವ ಹಿಂದು ಪದ್ಧತಿಗಳನ್ನವನು ವಿರೋಧಿಸುತ್ತಿದ್ದ. ನೀರಿನ ಸಣ್ಣ ಕ್ರಿಮಿಗಳನ್ನು ನುಂಗಿಬಿಡಬಾರದೆಂದು ಚಿಲುಮೆ ನದಿಗಳ ನೀರನ್ನವನು ಸೋಸಿ ಕುಡಿಯುತ್ತಿದ್ದ. ಈರ್ಷ್ಯೆ ತಳೆದ ಬಂಧುವೊಬ್ಬ, ಬುದ್ಧನಮೇಲೆ ಕೆರಳಿದ ಆನೆಯನ್ನು ಬಿಟ್ಟಾಗ ಬುದ್ಧ ಆ ಆನೆಯನ್ನೆದುರಿಸಿ ತನ್ನ ನಯವಾದ ಪ್ರೀತಿ ತುಂಬಿದ ಸ್ವರದಿಂದಲೇ ಅದನ್ನು ಹತೋಟಿಗೆ ತಂದ. ಆತ ಸಮಕಾಲೀನರಿಗೇ ಮಾನವಾತೀತ ನೆನಿಸಿದ್ದು ಅಚ್ಚರಿಯ ವಿಷಯವಲ್ಲ.

ಬುದ್ಧ ತನ್ನ ಅಂತಿಮ ಪಯಣವನ್ನು, ತನ್ನ ೮೦ನೆಯ ವಯಸ್ಸಿನಲ್ಲಿ ಪ್ರಾರಂಭಿಸಿದ. ಬಯಲು ದಾರಿಗಳಲ್ಲಿ ನಡೆದು ಬೋಧನೆಗಾಗಿ ರಸ್ತೆಯಂಚಿನ ಹಳ್ಳಿಗಳಲ್ಲಿ ನಿಲ್ಲುತ್ತಿದ್ದ. ಭಿಕ್ಷಾಪಾತ್ರೆ ಹಿಡಿದರೂ ರಾಜಕುಮಾರನಂತೆಯೇ ಕಾಣುತ್ತಿದ್ದ. ಮಾವಿನ ತೋಪಿನಲ್ಲಿ ವಿಶ್ರಾಂತಿಗೆ ತಂಗಿದ ಬುದ್ಧನಿಗೆ ಕಮ್ಮಾರ ಆಹಾರ ಒದಗಿಸಿದ. ಕ್ರಮೇಣ ಅನಾರೋಗ್ಯಕ್ಕೊಳಗಾದ ಬುದ್ಧ, ತೀವ್ರ ನೋವು ಹಾಗೂ ರಕ್ತಸ್ರಾವಕ್ಕೊಳಗಾದ. ಅನಾರೋಗ್ಯದಿಂದಲೇ ಹೊರಟ ಬುದ್ಧ ಎರಡು ಮರಗಳ ನಡುವೆ ಶಯ್ಯೆ ಸಿದ್ಧಪಡಿಸುವಂತೆ ತನ್ನ ಶಿಷ್ಯ ಆನಂದನಿಗೆ ಹೇಳಿದ. ದಂತ ಕಥೆಯಂತೆ, ಬುದ್ಧ ಆ ಮರಕ್ಕೊರಗಿ ಮಲಗಿದಾಗ ಮರ ಅಕಾಲದಲ್ಲೂ ಚಿಗುರಿತು. ಅವನ ಶರೀರ ಚಿನ್ನದಂತೆ ಹೊಳೆಯಿತು. ತನ್ನನ್ನು ಸ್ವಾಗತಿಸಲು ಬಂದ ಅತಿಥೇಯನನ್ನು ದಿಟ್ಟಿಸಿ ನೋಡಲು ಸಾಧ್ಯವಾಗುವಂತೆ ತನ್ನ ಶಿಷ್ಯನನ್ನು ಅತ್ತಸರಿಸಿ "ಸತ್ಯದಿಂದ ಬಾಳಿ" ಎನ್ನುತ ನಿರ್ವಾಣಕ್ಕೆ ಸರಿದ.

ಹಸಿರು ಹುಲ್ಲು ಬಯಲು ನಡುವಿನ ಮಂದಿರವೊಂದರಲ್ಲಿ ಕತ್ತಿನವರೆಗೂ ಚಿನ್ನದ ವಸ್ತ್ರದಿಂದಲಂಕರಿಸಿದ ೬ ಮೀಟರ್ ಎತ್ತರದ ಬುದ್ಧನ ಮೂರ್ತಿಯೊಂದಿದೆ. ಯಾತ್ರಿಕರು ಹೊಸ ಹೂಗಳ ಗುಚ್ಛವೊಂವನ್ನಲ್ಲಿರಿಸುತ್ತಾರೆ. ಬುದ್ಧನ ಮಾರ್ಗದ ಕಡೆಯ ತಂಗುದಾಣವನ್ನು ಶಾಂತಿ ಆವರಿಸಿದೆ–ನಿರೀಕ್ಷೆ ಪೂರ್ಣಗೊಂಡಂಥ ಶಾಂತಿ!

---



ಸ್ನೇಹ ಮಾಡಿದರೆ ನಮಗಿಂತ ಶ್ರೇಷ್ಠರೊಡನೆ ಮಾಡಬೇಕು ಇಲ್ಲವೆ ಸಮಾನರೊಡನಾದರೂ ಮಾಡಬೇಕು. ಇವೆರಡೂ ಸಾಧ್ಯವಾಗದಿದ್ದಲ್ಲಿ ಒಂಟಿಯಾಗಿರುವುದೇ ಒಳ್ಳೆಯದು.

ಕೆಡುಕುಗಳಿಗೆ ಒಳಗಾಗದೆ, ಒಳ್ಳೆಯುದನ್ನೇ ರೂಢಿಸಿಕೊಂಡು, ಮನಸ್ಸನ್ನು ಶುದ್ಧವಾಗಿಟ್ಟುಕೊಂಡಿರಬೇಕು.

—ಬುದ್ಧ

# ಎಲ್ಲ ಕಾಲಕ್ಕೂ ಸಲ್ಲುವ ಬಸವ ತತ್ವ

**ಸಿ. ನಾಗಣ್ಣ**
ಇಂಗ್ಲಿಷ್ ಪ್ರಾಧ್ಯಾಪಕರು
ಮಹಾರಾಜ ಕಾಲೇಜು
ಮೈಸೂರು

ಈ ಲೇಖನ ಬರೆಯಲು ಕೂರುವ ಸಂದರ್ಭದಲ್ಲಿ ಬಿಬಿಸಿಯಿಂದ ಸುದ್ದಿ ಬಿತ್ತರವಾಗುತ್ತಿದೆ. "ಕೊಸೊವೊದಲ್ಲಿರುವ ಅಲ್ಬೇನಿಯಾ ಮೂಲದ ಎಲ್ಲ ಜನರನ್ನು ಕೊಲ್ಲಲು ಮತ್ತು ಅವರ ಆಸ್ತಿಪಾಸ್ತಿಯನ್ನು ಧ್ವಂಸ ಮಾಡಲು ಸರ್ಬಿಯನ್ನರು ಮುಂದಾಗಿದ್ದಾರೆ. ಈ ಉಪಟಳಕ್ಕೆ ಹೆದರಿ ಅಲ್ಬೇನಿಯಾ ಮೂಲದ ಜನರು ಕೆಟ್ಟೆವೊ ಬಿದ್ದೆವೊ ಅಂತ ಅಲ್ಬೇನಿಯಾದ ಕಡೆ ಓಡುತ್ತಿದ್ದಾರೆ. ಇಲ್ಲಿಯವರೆಗೆ ಐದುಲಕ್ಷ ಜನರು ನಿರಾಶ್ರಿತರಾಗಿದ್ದಾರೆ; ದಿನಂಪ್ರತಿ ೨೦ ರಿಂದ ೨೫ ಸಾವಿರ ಜನರು ಊರು ಬಿಡುತ್ತಿದ್ದಾರೆ. ಈ ಮಧ್ಯೆ ನೇಟೊ (ನಾರ್ತ್ ಅಟ್ಲಾಂಟಿಕ್ ಟ್ರೀಟಿ ಆರ್ಗನೈಸೇಷನ್) ಮಿತ್ರ ರಾಷ್ಟ್ರಗಳು ಯುಗೊಸ್ಲಾವಿಯಾದ ರಾಜಧಾನಿ ಬೆಲ್‌ಗ್ರೇಡ್‌ನ ಮೇಲೆ ಬಾಂಬ್ ದಾಳಿ ನಡೆಸಿವೆ. ಅಧ್ಯಕ್ಷ ಮಿಲಾಸವಿಚ್ ಇದಾವುದಕ್ಕೂ ಜಗ್ಗುತ್ತಿಲ್ಲ. ಶತ್ರುಗಳ ದಾಳಿಯಿಂದ ನಾವು ಭಯಭೀತರಾಗಿಲ್ಲ ಎಂಬುದನ್ನು ತೋರಿಸಿಕೊಳ್ಳಲು ಬೆಲ್‌ಗ್ರೇಡ್‌ನ ಒಂದು ಮೊಹಲ್ಲಾದ ಮೇಲೆ ಬಾಂಬ್‌ಗಳು ಬೀಳುತ್ತಿರುವಾಗಲೇ ಇನ್ನೊಂದು ಮೊಹಲ್ಲಾದಲ್ಲಿ ಸಹಸ್ರಾರು ಜನರು ಸೇರಿ ಪಾಪ್ ಸಂಗೀತಕ್ಕೆ ನೃತ್ಯ ಮಾಡುತ್ತಿದ್ದಾರೆ." ಇದು ಈ ಕ್ಷಣದ ಚಿತ್ರ.

ಇನ್ನೊಂದು ಚಿತ್ರವನ್ನು ನೆನೆದು ಬಸವಣ್ಣನವರಿಗೆ ಬರುತ್ತೇನೆ. ನಮ್ಮ ನೆರೆಹೊರಿಯಲ್ಲೊಂದು ಹೊಸಮನೆ ಏಳುತ್ತಿದೆ. ಸದ್ಯ ಈ ಮನೆ ಬೇಗ ಬಂತು ಇನ್ನು ಆ ಮನೆಯನ್ನು ನೋಡುವ ಗೋಜಿಲ್ಲ ಅಂದರು. ಯಾಕೆ ಸ್ವಾಮಿ ಅಂತ ಕೇಳಿದೆ. ಆ ಮನೆಯವನ ಮುಖ ನೋಡುವುದು ತಪ್ಪಿತಲ್ಲ ಎಂದರು ಮೇಲ್ಜಾತಿಯ ನನ್ನ ಸ್ನೇಹಿತರು. ವಾಸ್ತವವಾಗಿ ಆ ಮನೆಯ ಆಸಾಮಿ ಒಬ್ಬ ದಲಿತ ಇಂಜಿನಿಯರ್. ಬಡ್ತಿಯಲ್ಲಿ ಮೀಸಲಾತಿ ಕುರಿತು ನಡೆಯುತ್ತಿರುವ ವರ್ತಮಾನದ 'ಸಮುದ್ರ ಮಂಥನ' ದಲ್ಲಿ ನನ್ನ ಮೇಲ್ಜಾತಿ ಮಿತ್ರರ ಬಂಧುಗಳಿಗೆ ಲಾಭವಾಗಿತ್ತು; ಹಾಗಾಗಿ ದಲಿತ ಇಂಜಿನಿಯರ್ ಇವರಿಗೆ ವೈರಿ. ಬೆಳಗಾಗೆದ್ದು ಆತನ ಮುಖ ನೋಡುವುದು ತಪ್ಪಿತಲ್ಲ ಎಂದು ಇವರ ಸಮಾಧಾನ. ಆ ಎಂಜಿನಿಯರಾದರೊ ನಮ್ಮ ಆಜುಬಾಜುವಿನ ರಸ್ತೆ ದುರಸ್ತಿಗೆ ವ್ಯವಸ್ಥೆ ಮಾಡಿ, ಬೀದಿ ದೀಪಗಳನ್ನು ಸರಿ ಮಾಡಿಸಿ, ನಮ್ಮ ಬೇಕು ಬೇಡಗಳ ಬಗ್ಗೆ ಸ್ವಲ್ಪ ಗಮನಕೊಡಿ ಎಂದು ಕೇಳಿದರೆ ಆ

ಕ್ಷಣಕ್ಕೆ ಆಗಲಿ ಎನ್ನುತ್ತಾನೆ ಮರುಕ್ಷಣ ಸರ್ಕಾರಿ ಜೀಪು ಹತ್ತಿಕೊಂಡು ಪರಾರಿ ಯಾಗುತ್ತಾನೆ. ಎಲ್ಲರೊಡನೆ ಬೆರೆಯುಲ್ಲೊಲ್ಲ; ಸಮಾಜಕ್ಕೆ ಉಪಕಾರ ಮಾಡಬೇಕು ; ನನಗೆ ಅಧಿಕಾರವಿದೆ ಅದನ್ನು ಉತ್ತಮವಾಗಿ ಬಳಸಿಕೊಳ್ಳಬೇಕು ಎಂದು ಚಿಂತಿಸಲ್ಲೊಲ್ಲ. ಒಂದು ಕಡೆ ಅವನ ಬಗ್ಗೆ ಮೇಲ್ಜಾತಿಯವನ ತಾತ್ಸಾರ, ಇನ್ನೊಂದು ಕಡೆ ಈ ದಲಿತ ಇಂಜಿನಿಯರ್‌ನ ಸಂಕುಚಿತ ಬದುಕು— ಮಹಾನುಭಾವ ಬಸವಣ್ಣನವರ ಮಾತು ಗಳನ್ನು ಅರ್ಥಮಾಡಿಕೊಳ್ಳುವುದು ಹೇಗೆ?

ಎಲ್ಲರೂ ವಿಕಾಸವಾಗಬೇಕೆಂದು ಬಸವಣ್ಣನವರು ಅಪೇಕ್ಷಿಸಿದರು. 'ಇವನಾ ರವ ಇವನಾರವ ಎಂದೆನಿಸದಿರಯ್ಯ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ' ಎಂದು ಅವರು ಹೇಳಿದ ಮಾತಿಗೂ ಇಂದು 'ಸದ್ಯ ಅವನ ಮುಖ ನೋಡುವುದು ತಪ್ಪಿತಲ್ಲ' ಎಂದು ನಾವು ಹೇಳುವ ಹಂತ ಮುಟ್ಟಿರುವುದಕ್ಕೂ ಏನಾದರೂ ಸಂಬಂಧ ವಿದೆಯೇ. ಎಂಟುನೂರು ವರ್ಷಗಳಿಂದ ನಮ್ಮ ಸಮಾಜದ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ನಾವು ಮಾಡಿದ ಪ್ರಯತ್ನಗಳು ನಿರರ್ಥಕವೆ? ಪ್ರಜಾ ಪ್ರಭುತ್ವ ಹಾಗೂ ಸಂವಿಧಾನದ ನೆಲಗಟ್ಟಿನ ಮೇಲೆ ಬದುಕನ್ನು ನೇರ್ಪುಗೊಳಿಸಿ ಕೊಳ್ಳಲು ನೀವು ಇಟ್ಟ ಹೆಜ್ಜೆಯಿಂದ ಸಮಾಧಾನಕ್ಕಿಂತ ಅಸಮಾಧಾನ, ಸೌಹಾರ್ದಕ್ಕಿಂತ ದ್ವೇಷ, ಒಟ್ಟುಗೂಡು ವುದಕ್ಕಿಂತ ಬಿಟ್ಟುಹೋಗುವ ಪರಿಗೆಲ್ಲು ವಂತಾಯಿತಲ್ಲ!

ಹಾಗಾದರೆ ನಮ್ಮ ಸಂಸ್ಕೃತಿಯಲ್ಲಿ ಜನ್ಮ ತಳೆದು ನಮಗೆ ಸಂದೇಶ ನೀಡಿದ ಬಸವಣ್ಣ ನವರಂಥ ಸೀಮಾಪುರುಷರ ಪರುಷದಂಥ ನುಡಿಗಳ ಲೆಕ್ಕವೇನು? ಒಬ್ಬ ನಾನಕ್, ಒಬ್ಬ ಮಹಾವೀರ, ಒಬ್ಬ ಪೈಗಂಬರ್, ಒಬ್ಬ ಬಸವಣ್ಣ—ಇವರೆಲ್ಲ ನಮಗೆ ಸರ್ಕಾರಿ ರಜಗಳನ್ನು ಕೊಡಿಸಲು ಜನ್ಮವೆತ್ತಿದರೇನು? ಇಲ್ಲವಾದಲ್ಲಿ ಅವರ ಮಾತುಗಳು ಉರಿಯುವ ವರ್ತಮಾನದಲ್ಲಿ ಏಕೆ ಚಲಾವಣೆಯಾಗು ತ್ತಿಲ್ಲ? ಮನುಷ್ಯ ಮನುಷ್ಯರ ನಡುವಿನ ಅಡ್ಡಗೋಡೆಗಳು ಇನ್ನೂ ಗಟ್ಟಿಯಾಗು ತ್ತಿವೆಯಲ್ಲ? "ಗುಡ್ ಫೆನ್ಸಸ್ ಮೇಕ್ ಗುಡ್ ನೈಬರ್ಸ್" ಎಂದು ಅಮೆರಿಕದ ಕವಿ ರಾಬರ್ಟ್ ಫ್ರಾಸ್ಟ್ ಹೇಳಿದ. ನಾವು ಒಳ್ಳೆಯ ನೆರೆಹೊರೆಯವರಾಗಿರಲು ನಮ್ಮ ಮಧ್ಯೆ ದೃಢವಾದ ಬೇಲಿಯಿದ್ದರೆ ಲೇಸು; ಮನುಷ್ಯರ ಲಾಗಾಯ್ತಿನ ವರ್ತನೆಯನ್ನು ಗಮನಿಸಿರುವ ಕವಿ ಹೀಗೆ ಹೇಳಿದ್ದಾನೆ. ಅವನಿಗೆ ಗೊತ್ತು ಈ ಬೇಲಿಯಿಂದ ಆಗಿರುವ ಹಾನಿ ಅಷ್ಟಿಷ್ಟಲ್ಲ ಎಂದು. ಆದರೂ ಮನುಷ್ಯ ಬೇಲಿಯನ್ನು ಪ್ರೀತಿಸುತ್ತಾ ಬಂದಿದ್ದಾನೆ.

ಒಂದು ಕಡೆ ಎಲ್ಲ ಸರಹದ್ದುಗಳನ್ನು ಮೀರಿದ 'ವಿಶ್ವಗ್ರಾಮ' ಸೃಷ್ಟಿಯಾಗು ತ್ತಿದ್ದರೆ ಇನ್ನೊಂದು ಕಡೆ ಜನಾಂಗೀಯ ಅಲ್ಪಸಂಖ್ಯಾತರೆಂದು ಲಕ್ಷಾಂತರ ಜನರನ್ನು ಧ್ವಂಸ ಮಾಡುತ್ತಿದ್ದಾರೆ; ಗಡಿ ದಾಟಿಸುತ್ತಿ ದ್ದಾರೆ. ಈ ವಿಚಿತ್ರವನ್ನು ಹೇಗೆ ಜೀರ್ಣಿಸಿ ಕೊಳ್ಳುವುದು? ಕ್ರಿಸ್ತ, ಬುದ್ಧ, ಬಸವಣ್ಣ, ಮಹಾತ್ಮಾ ಗಾಂಧಿ—ಮುಂತಾದ ಮಹಾ ಮಾನವರು ಹುಟ್ಟಿ, ಉಪದೇಶ ಮಾಡಿ ಕಣ್ಮರೆಯಾದ ನಂತರವೂ ಲೋಕ ತನ್ನ ಎಂದಿನ ನಾಯಿಬಾಲದ ಬದುಕನ್ನು ಬಾಳು ತ್ತಿದೆ ಎನ್ನಿಸುತ್ತದೆ. 'ತೊಳ್ಬಲವೇ ಸರಿ'

ಎಂಬ ತತ್ವವನ್ನು ಅಮೇರಿಕಾ ಮುಂತಾದ ಮುಂದುವರಿದ ರಾಷ್ಟ್ರಗಳು ಅನುಸರಿಸುವಾಗ 'ತೋಳ್ಬಲ ದಿಗ್ಬಲ'ವೆಂದು ಸಾರಿದ ಮಹನೀಯರ ಸಂದೇಶವೇನಾಯಿತು?

ಸಕಲ ಶ್ರೀಮಂತಿಕೆಯ ಮಡಿಲಲ್ಲಿದ್ದೂ ರೋಗ, ವೃದ್ಧಾಪ್ಯ ಹಾಗೂ ಸಾವನ್ನು ಕಂಡ ಸಿದ್ಧಾರ್ಥ ಅಪ್ಪನ ಅರಮನೆಯಿಂದ ಹೊರಟು ದುಃಖದ ನೆಲೆಯನ್ನು ಹುಡುಕಲು ಹೊರಟ. ಕ್ಷತ್ರಿಯನಾಗಿದ್ದವ ಅದಕ್ಕೆ ವಿರುದ್ಧವಾದ ರೀತಿಯಲ್ಲಿ ಸಮರಶೂರತ್ವದ ಟೊಳ್ಳುತನವನ್ನು ಲೋಕಕ್ಕೆ ಅರುಹಿದ. ಮುಂದೆ ಬಂದ ಅಶೋಕ ಚಕ್ರವರ್ತಿಯ ಮನಃಪರಿವರ್ತನೆ ಕೂಡ ಇದನ್ನೇ ತಿಳಿಸುತ್ತದೆ. ಜನ್ಮತಾಳಿದ ಹತ್ತುವರ್ಷಕ್ಕೆ ತಂದೆ ತಾಯಿಗಳಾದ ಮಾದಿರಾಜ–ಮಾದಾಂಬಿಯರು ಕಾಲವಾಗಲು ಬಸವಣ್ಣನವರು ಲೋಕವ್ಯಾಪಾರದ ಒಳಸುಳಿಗಳನ್ನರಿತು ನಡತೆಯ ಲೋಪದೋಷಗಳಿಗೆ ಸಿದ್ಧೌಷಧವನ್ನು ಕಂಡುಹಿಡಿಯಲು ಮುಂದಾದರು. ಎಲ್ಲರಂತೆ ಸೂಟುಬೂಟು ಧರಿಸಿಕೊಂಡು ಬ್ಯಾರಿಸ್ಟರಾಗಿದ್ದ ಗಾಂಧಿಯವರು ದಾಸ್ಯ ಶೃಂಖಲೆಯಲ್ಲಿ ಬಂಧಿತರಾಗಿದ್ದ ಕೋಟಿ ಕೋಟಿ ದೇಶಿಗರ ಆರ್ತನಾದವನ್ನಡಗಿಸಿ ಸ್ವಾತಂತ್ರ್ಯದ ಬಯಲಿಗೆ ಅವರು ಬರುವಂತೆ ದೀಕ್ಷೆ ತೊಟ್ಟರು. "ಮಾನವನು ಬಯಸಬಹುದಾದ ಅಧಿಕಾರ, ಐಶ್ವರ್ಯ, ಕಾಮಿನಿ, ಕೀರ್ತಿ, ರೂಪು, ಯೌವನ, ವೈಭವ–ಎಲ್ಲವೂ ಬಸವಣ್ಣನವರಿಗೆ ಅಣಿಯಾಗಿದ್ದವು. ಆದರೆ ಬಸವಣ್ಣನವರ ಚೇತನ ಊರ್ಧ್ವಮುಖವಾದುದು. ರಾಜನ ಭಂಡಾರಿಯಾಗುವ ವೇಳೆಗೆ ಅವರು ಭಕ್ತಿಯ ಭಂಡಾರಿಯೂ ಆಗಿದ್ದರು." ರಾಜಕುಮಾರ ಸಿದ್ಧಾರ್ಥನಲ್ಲಿ ಹೊಳೆದ ಸತ್ಯದ ರೀತಿಯಲ್ಲಿಯೇ ಶ್ರೀಮಂತವರ್ಗದಿಂದ ಬಂದ ಮಹಾತ್ಮರೂ ಕೂಡ ತಮ್ಮ ನಿಜಪಥವನ್ನು ಕಂಡುಕೊಂಡರು.

'ಹರಳಯ್ಯ–ಮಧುವರಸ' ಎಂಬ ಎರಡು ದೂರ ಬಿಂದುಗಳನ್ನು ಸಮಾಗಮಗೊಳಿಸಿ ಆದಿ ಅಂತ್ಯ ಗೋಚರವಾಗದ ವೃತ್ತವನ್ನು ರಚಿಸಬೇಕೆಂದು ಬಸವಣ್ಣರು ಮಾಡಿದ ಧೀರಪ್ರಯತ್ನದ ಎದುರು ರಾಜ ಬಿಜ್ಜಳ ಬೆಚ್ಚಿದ. "ಅಸ್ಪೃಶ್ಯತೆ ಹಿಂದೂ ಧರ್ಮಕ್ಕಂಟಿದ ಕಳಂಕ ಎಂದು ಸಾರಿದರು ಗಾಂಧಿ ಮಹಾತ್ಮರು. ಭ್ರಾತೃತ್ವಕ್ಕೆ ಹಕ್ಕುದಾರರಾಗಿರುವ ಭಾರತದ ಮುಸ್ಲಿಮರನ್ನು ಎಂದೋ ನಮ್ಮ ಮೇಲೆ ದಂಡೆತ್ತಿ ಬಂದು ಕಾಡಿದವರೆಂದು ಇಂದೂ ಭಾವಿಸುವುದು ಸಲ್ಲದೆಂದು ಹೇಳಿದರು. ಸಂತ ಶ್ರೇಷ್ಠರಾದ ಬಸವಣ್ಣ ಮತ್ತು ಗಾಂಧಿ ತಮ್ಮ ಕಾಲದ ರಾಜಕೀಯ ವಿಪ್ಲವಗಳಿಗೆ ಎದೆಯೊಡ್ಡಿ ನಿಂತಂಥ ಧೀರ ಯೋಧರೂ ಆಗಿದ್ದಾರೆ. ಕಲ್ಯಾಣದ ಕ್ರಾಂತಿಯು ಬೇರೆ ದಿಕ್ಕನ್ನು ಹಿಡಿದಾಗ 'ಇನ್ನು ಇಲ್ಲಿಗೆ ಸಾಕು' ಎಂದು ತೀರ್ಮಾನಿಸಿ ಬಸವಣ್ಣನವರು ಸಂಗಮದಲ್ಲಿ ಒಂದಾದರೆಂದು ಶರಣ ಚರಿತ್ರೆ ತಿಳಿಸುತ್ತದೆ. ವರ್ತಮಾನದಲ್ಲಿ ಲೋಕವೆಲ್ಲ ಒಂದು, ಜನರೆಲ್ಲ ಒಂದು ಎಂಬ ತಮ್ಮ ತತ್ವವನ್ನು ಪ್ರತಿಪಾದಿಸಿದ ಮಹಾತ್ಮರನ್ನು ಅರ್ಥಮಾಡಿಕೊಳ್ಳಲಾಗದ ಅಲ್ಪಮಾನವರು ಹೊಡೆದ ಗುಂಡಿಗೆ ಎದೆಯೊಡ್ಡಿ ಅವರು ಪರಂಧಾಮವನ್ನೈದಿದರು.

ಗಾಂಧಿಯವರ ಬದುಕು ಬರೆಹ ಅನೇಕ ಸಂಪುಟಗಳಲ್ಲಿ ಹರಡಿಕೊಂಡಿದೆ. ತಮ್ಮೆಲ್ಲ ಚಟುವಟಿಕೆಗಳ ಮಧ್ಯೆ ಮಹಾತ್ಮರು ತಮ್ಮ

ಸಹಮಾನವರಿಗೆ ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಕಾಗದಗಳ ಸಂಖ್ಯೆ ಇಪ್ಪತ್ತು ಸಾವಿರ ಎಂಬ ಅಂದಾಜಿದೆ. ಇವು ಬರಿ ಅಂಚೆ ಕಾಗದಗಳಲ್ಲ; ಈ ಕರ್ತಾರನ ಕಮ್ಮಟದಲ್ಲಿ ಛಟ್ಟಿ ಇಳಿದ ಜ್ಞಾನ ಬಿಂದುಗಳು. ಬಸವಣ್ಣನವರ ವಚನಗಳಾದರೋ: "ಜ್ಞಾನ ಜ್ಯೋತಿಯ ಶುಭ್ರಕಾಂತಿಯಿಂದ ತೊಳಗಿ ಬೆಳಗುತ್ತಿವೆ. ಆತನು ಹೇಳುವ 'ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು, ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು' ಎಂಬ ಆದರ್ಶಕ್ಕೆ ಆತನ ನುಡಿಗಳೆ ಉದಾಹರಣೆಯಾಗಿವೆ. ಬಸವಣ್ಣನವರ ವಚನಗಳಲ್ಲಿ ಧರ್ಮ, ಕಾವ್ಯಧರ್ಮಗಳು ಸಮರಸವಾಗಿ ಬೆರೆತು ಹೃದಯಕ್ಕೆ ಆನಂದವನ್ನೂ, ಆತ್ಮಕ್ಕೆ ಶ್ರೇಯಸ್ಸನ್ನೂ ಒದಗಿಸುತ್ತವೆ." ಸಿಕ್ಕಿರುವ ವಚನಗಳು ಸಾವಿರವಾದರೆ ಲೆಕ್ಕವಿಲ್ಲದಷ್ಟು ವಚನಗಳು ಇನ್ನೂ ಗೋಚರವಾಗದಿವೆ. ಆದರೆ ದಕ್ಕಿರುವ ವಚನಗಳ ಘನ ಸಂದೇಶವೇ ಸಾಕು ಲೋಕೋದ್ಧಾರಕ್ಕೆ. ತನ್ನ ಇಹ ಲೋಕದ ಜೀವಿತ ಸುಗಮವಾಗಲೆಂದು ಲೋಕದ ಜನರು ಮಾಡಿಕೊಂಡಿರುವ ಸಂವಿಧಾನಗಳಿಗೆ ಬಸವಣ್ಣನವರ ವಚನಗಳು ಮಾತೃಸ್ಥಾನದಲ್ಲಿ ನಿಲ್ಲುತ್ತದೆ.


"ಸಾಮಾಜಿಕ ಮತ್ತು ಮತೀಯ ಸಂಕುಚಿತ ಗಣನೆಯ ದುಷ್ಪರಿಣಾಮವಾಗಿ ಮಾನವ ಕುಲದಲ್ಲಿ ತಲೆದೋರುವ ಮೇಲು-ಕೀಳೆಂಬ ಪಂಗಡತೆಯನ್ನು ಬಸವಣ್ಣನವರು ಮಾನ್ಯ ಮಾಡಲಿಲ್ಲ. ಸ್ವಾತಂತ್ರ-ಪ್ರದೇಶವಾಗಲಿ, ವಿದ್ಯೆ-ಪದವಿಯಾಗಲಿ, ಧನ-ಧಾನ್ಯವಾಗಲಿ, ಕೊನೆಗೆ ಪ್ರಕೃತಿಸಿದ್ಧವಾದ ಹೆಣ್ಣು-ಗಂಡೆಂಬ ಭೇದವಾಗಲಿ ಮಾನವರನ್ನು ವಿಭಜಿಸಿ, ಭಿನ್ನ-ಭಿನ್ನಗೊಳಿಸಿ, ಪ್ರತ್ಯೇಕಿಸುವುದನ್ನು ಅವರು ಸಹಿಸಲಿಲ್ಲ. ಅದಕ್ಕೆ ಬದಲಾಗಿ ಜನರಲ್ಲಿ ಒಗ್ಗಟ್ಟನ್ನೂ ಒಡನಾಟವನ್ನು ಇವನ್ನು ಅಭಿವೃದ್ಧಿಗೊಳಿಸುವಂಥ ಧರ್ಮವನ್ನು ಬೋಧಿಸಿದರು. ಈ ಕಾರಣದಿಂದಲೇ, ಬಸವಣ್ಣನವರು ಬೋಧಿಸಿದ ಧರ್ಮದ ಜೀವಾಳ ದಾನ-ದಯೆ-ನಿರಾಡಂಬರ-ವಿನಯ-ಭಕ್ತಿ-ದುಡಿಮೆ, ನಿಷ್ಕಾಮಕರ್ಮ ಮತ್ತು ಸರಳ ಜೀವನ. ಒಟ್ಟಿನಲ್ಲಿ ಮನುಕುಲವೆಲ್ಲ ಒಂದೆಂಬ ಭಾವದಿಂದ ಪರಸ್ಪರ ಹಿತ-ಅಭಿವೃದ್ಧಿಗಾಗಿ ಬಾಳಬೇಕೆಂಬುದೇ ಅವರ ದರ್ಶನ ಸಾರ."

ಈ ಲೇಖನ ಬರೆದು ಮುಗಿಸುವ ಹೊತ್ತಿಗೆ ಅದೇ ಬಿಬಿಸಿ ಹೇಳುತ್ತದೆ: "ಯುಗೋಸ್ಲಾವಿಯಾದ ಮೇಲೆ ನೇಟೊ ರಾಷ್ಟ್ರಗಳು ಮಾಡಿರುವ ದಾಳಿಯನ್ನು ರಷ್ಯಾ ವಿರೋಧಿಸಿರುವುದರಿಂದ ರಷ್ಯಾಕ್ಕೆ ಈ ಬಾರಿ ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಸಾಲ ದೊರಕುವುದೆಂಬ ಭರವಸೆ ಇಲ್ಲ. ತಾನು ಈಗಾಗಲೇ ಮಾಡಿರುವ ಸಾಲದ ಸ್ವಲ್ಪ ಭಾಗವನ್ನು ತೀರಿಸಲು ರಷ್ಯಾಕ್ಕೆ ಈ ಸಾಲದ ಅಗತ್ಯತೆ ಇದೆ. ವ್ಯಂಗ್ಯವೆಂದರೆ ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಯ ಸಾಲವನ್ನು ತೀರಿಸಲು ಮತ್ತೆ ರಷ್ಯಾಕ್ಕೆ ಈ ಸಾಲ ಬೇಕಾಗಿದೆ." ಎಂಥ ವಿಚಿತ್ರ ಜಗತ್ತಿನಲ್ಲಿ ನಾವು ಬದುಕುತ್ತಿದ್ದೇವೆ. ಸಾಲ ಕೊಡುವ ಆಟವೇನು? ಬಡ್ಡಿ ತೆಗೆದುಕೊಳ್ಳುವ ಪರಿಯೇನು? ಲೋಕದ ಹಸಿವು ಬಡತನಗಳೇನು? ಯುದ್ಧ ಸಾಮಗ್ರಿಗಳಿಗೆ ಆಗುತ್ತಿರುವ ಖರ್ಚೇನು?

ಸಂಪೂರ್ಣವಾಗಿ ಕ್ಷಯರೋಗದ ಮೇಲೆ ಹತೋಟಿ ಸಾಧಿಸಿಬಿಟ್ಟೆವು ಇನ್ನೇನಿದ್ದರೂ ನಮ್ಮ ಪ್ರಯೋಗ ಏಡ್ಸ್ ಕ್ಯಾನ್ಸರ್ ಮುಂತಾದ ಭೀಷಣ ಕಾಯಿಲೆಗಳ ನಿವಾರಣೆಗಾಗಿ ಎಂದು ಅಂದುಕೊಳ್ಳುವಾಗಲೇ ಚರಿತ್ರೆಯಲ್ಲೇ ಅತ್ಯಧಿಕ ಸಂಖ್ಯೆಯಲ್ಲಿ ಈವತ್ತು ಕ್ಷಯರೋಗದಿಂದ ಸಾಯುತ್ತಾರೆ ಎಂಬ ಅಂಕಿ ಅಂಶ ಬಿತ್ತರವಾಗುತ್ತಿದೆ. ಘಾನಾ ಮುಂತಾದ ದೇಶಗಳಲ್ಲಿ ಇದು 'ಗೋಸ್ಟ್ ಕಾಫ್'; ಇದು ಬಂದರೆ ಸಾವೇ ಹೊರತು, ಬೇರೆ ದಾರಿಯಿಲ್ಲ ಎಂಬ ಮೌಢ್ಯ. ಸತ್ತವರು ಬದುಕಿರುವವರನ್ನು ತಮ್ಮ ಬಳಿಗೆ ಕರೆದುಕೊಳ್ಳಲು ಈ 'ದೆವ್ವ ಗೆಮ್ಮಲಿ'ನ ರೂಪದಲ್ಲಿ ಬರುತ್ತಾರೆ ಎಂಬ ನಂಬಿಕೆ ಅವರಿಗೆ.

ಬೇಸಗೆಯು ಏರುತ್ತಿರುವ ಕಾವಿನಲ್ಲಿ ಗಿಡಮರಗಳೆಲ್ಲ ಕಂಗೆಟ್ಟು ಬಸವಳಿದಂತೆ ಕಾಣುವ ಈ ಕ್ಷಣ ಮಹಾನುಭಾವ ಬಸವಣ್ಣನವರಂಥ ಮುಕ್ತ ಚೇತನರನ್ನು ನೆನೆಯುವುದು ಜೀವಕ್ಕೆ ತಂಪೆನಿಸುತ್ತದೆ. ಜಗತ್ತಿನ ಮೌಢ್ಯವೆಂಬ ತಿಮಿರಕ್ಕೆ ಅರಿವಿನ ಬೆಳಕನ್ನು ತೋರಿದ ಭಕ್ತಿಭಂಡಾರಿಯವರು, ಅವರ ನಂತರದ ಸಂತರಿಗೆ ಸಾತ್ವಿಕ ಶಕ್ತಿಯೂಡಿದ ಕಾಮಧೇನು. ನಮ್ಮ ಇಂದಿನ ಸಮಸ್ಯೆಗಳ ಸುಳಿಯಲ್ಲಿ ಅವರ ಸೊಳ್ನುಡಿಗಳು ಚಲಾವಣೆ ಕಳೆದುಕೊಂಡಂತೆ ಭಾಸವಾಗುವುದು ನಮ್ಮ ದೃಷ್ಟಿದೌರ್ಬಲ್ಯದ ದ್ಯೋತಕವೆಂದು ತಿಳಿಯಬೇಕು. ಶತಮಾನಗಳೇ ಕಳೆದರೂ ಅಳಿಯದ ಕಾಂತಿಯಿಂದ ಮಿನುಗುವ ಅವರ ಮಾತುಗಳು ನಾವು ಮುಗ್ಗರಿಸಿದಾಗಲೆಲ್ಲ ನಮಗೆ ಸಾಂತ್ವನ ನೀಡುವ ಸತ್ವ ಹೊಂದಿವೆ. ಅಂಥ ದ್ರಷ್ಟಾರರ ಕನಸು ನನಸು ಮಾಡಲು ನಮ್ಮ ಕೈಲಾದದ್ದು ಮಾಡೋಣ.

---



ಮಡಿಕೆ ದೈವ ಮೊರ ದೈವ ಬೀದಿಯ ಕಲ್ಲು ದೈವ
ಹಣಿಗೆ ದೈವ ಬಿಲ್ಲನಾರಿ ದೈವ ಕಾಣಿರೋ
ಕೊಳಗ ದೈವ ಗಿಣ್ಣಿಲು ದೈವ ಕಾಣಿರೋ
ದೈವ ದೈವವೆಂದು ಕಾಲಿಡಲಿಂಬಿಲ್ಲ ದೈವನೊಬ್ಬನೆ ಕೂಡಲಸಂಗಮ ದೇವ

—ಬಸವಣ್ಣ

# ಡಾ|| ಬಿ. ಆರ್. ಅಂಬೇಡ್ಕರ್

**ಡಾ|| ಪ್ರಧಾನ್ ಗುರುದತ್ತ**
ನಿವೃತ್ತ ಪ್ರಾಧ್ಯಾಪಕರು
೭೩೪, ಇ ಮತ್ತು ಎಫ್ ಬ್ಲಾಕ್
೪ನೆಯ ತಿರುವು, ಮನುಜಪಥ
ಕುವೆಂಪುನಗರ, ಮೈಸೂರು-೨೩

ಮಾನವ ಜನಾಂಗದ ಇತಿಹಾಸದಲ್ಲಿ 'ಭಾರತದ ಅನ್ಮೃತ ಪುತ್ರ' ನೆಂಬ ಖ್ಯಾತಿಯನ್ನು ಗಳಿಸಿ, ಅಚ್ಚಳಿಯದ ಹೆಜ್ಜೆಯ ಗುರುತುಗಳನ್ನು ಬಿಟ್ಟುಹೋಗಿರುವ ಮಹಾಮಾನವ ಶ್ರೀ ಬಿ. ಆರ್. ಅಂಬೇಡ್ಕರ್ ಅವರು, ರಾಷ್ಟ್ರೀಯವಾದಿ, ರಾಜಕೀಯ ಚಿಂತಕ, ಬುದ್ಧಿಜೀವಿ, ಕ್ರಾಂತಿಕಾರಿ, ಸುಧಾರಕ, ಮಹಾಲೇಖಕ ಎಂಬ ಈ ಮಾತುಗಳು ಅವರ ವ್ಯಕ್ತಿತ್ವದ ವಿವಿಧ ಮುಖಗಳನ್ನು ಸೂಚಿಸುತ್ತವೆ. ದೇಶ-ವಿದೇಶಗಳ, ಮಹಾವ್ಯಕ್ತಿಗಳೆಲ್ಲ ಏಕಕಂಠದಿಂದ ಹಾಡಿ ಹೊಗಳಿರುವಂಥ ಮಹಾಚೇತನ ಅವರದು. ಅಂದು ಬಂಗಾಳದ ಗೌರ್ನರ್ ಆಗಿದ್ದ ಲಾರ್ಡ್‌ಕೇಸಿ ಅವರು "ವಿವೇಕ ಮತ್ತು ಜ್ಞಾನಗಳ ಚಿಲುಮೆ" (ಫೌಂಟೇನ್ ಹೆಡ್ ಆಫ್ ವಿಸ್ಡಮ್ ಅಂಡ್ ನಾಲೆಡ್ಜ್) ಎಂದು ಅಂಬೇಡ್ಕರ್ ಅವರನ್ನು ವರ್ಣಿಸಿದ್ದರೆ, ಗುನ್ನಾರ್ ಮಿರ್ಡಲ್ ಅವರು "ಸ್ವತಂತ್ರ ಭಾರತದ ದಿಕ್ಕು-ದೆಸೆಗಳನ್ನು ನಿರ್ಧರಿಸಿದ ಜನಾಂಗದ ನಿಜವಾದ ಮಹಾ ಭಾರತೀಯನೆಂಬುದಾಗಿ ಜಗತ್ತಿನಾದ್ಯಂತ ಬಿ. ಆರ್. ಅಂಬೇಡ್ಕರ್ ಅವರ ನೆನಪು ಶಾಶ್ವತವಾಗಿ ಉಳಿದುಕೊಳ್ಳುತ್ತದೆ" ("ಎ ಟ್ರೂಲಿ ಗ್ರೇಟ್ ಇಂಡಿಯನ್ ಇನ್ ದಿ ಜೆನರೇಶನ್ ವಿಚ್ ಲೆಡ್ ಡೌನ್ ದಿ ಡೈರೆಕ್ಷನ್ ಆಫ್ ಇಂಡಿಪೆಂಡೆಂಟ್ ಇಂಡಿಯ") ಎಂದು ಉದ್ಘೋಷಿಸಿದ್ದರು. ನಮ್ಮವರೇ ಆದ ಮಹಾತ್ಮಗಾಂಧಿಯವರಂತೂ ಮುಕ್ತಕಂಠದಿಂದ "ಸಮಾಜದಲ್ಲಿ ತನಗಾಗಿ ತಾನೇ ಒಂದು ವಿಶಿಷ್ಟ ಸ್ಥಾನಮಾನವನ್ನು ಸೃಷ್ಟಿಸಿಕೊಂಡ ವ್ಯಕ್ತಿ" ("ಎ ಮ್ಯಾನ್ ಹೂ ಹ್ಯಾಸ್ ಕಾರ್ವ್‌ಡ್ ಔಟ್ ಫಾರ್ ಹಿಮ್‌ಸೆಲ್ಫ್ ಎ ಯುನೀಕ್ ಪೊಸಿಷನ್ ಇನ್ ಸೊಸೈಟಿ") ಎಂದೂ "ತಮ್ಮನ್ನು ಮರೆಯಲು ಸಾಧ್ಯವಾಗದಂತೆ ಮಾಡಿಹೋಗಿರುವ" ಮಹಾವ್ಯಕ್ತಿ (ಡಾ. ಅಂಬೇಡ್ಕರ್ ಈಸ್ ನಾಟ್‌ದ ಮ್ಯಾನ್ ಟು ಅಲೊ ಹಿಮ್‌ಸೆಲ್ಫ್ ಟು ಬಿ ಫರ್ಗಾಟನ್") ಎಂದೂ ಹಾಡಿ ಹೊಗಳಿದ್ದರು. ಜವಾಹರ್‌ಲಾಲ್ ನೆಹರೂ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, "ಹಿಂದೂ ಸಮಾಜದ ದಮನಕಾರಿ ಲಕ್ಷಣಗಳಿಗೆ ವಿರುದ್ಧವಾಗಿ ಸೆಟೆದು ನಿಂತ ಪ್ರತಿಭಟನೆಯ ಪ್ರತೀಕ" ("....ಎ ಸಿಂಬಲ್ ಆಫ

ರಿವೋಲ್ಟ್ ಅಗೇನ್ಸ್ಟ ಆಲ್ ದಿ ಅಪ್ರೆಸ್ಸಿಂಗ್ ಫೀಚರ್ ಆಫ್ ಹಿಂದೂ ಸೊಸೈಟಿ.") ಎಂದು ಸಾರಿ ಹೇಳಿದ್ದರು. ಈ ಎಲ್ಲ ಕಾರಣಗಳಿಂದಾಗಿ ಹಾಗೂ ತಮ್ಮದೇ ಆದ ವಿಶಿಷ್ಟ ಸಾಧನೆಗಳಿಂದಾಗಿ ಅವರು "ಜಗತ್ತಿನ ಆರು ಅತ್ಯುತ್ತಮ ಬುದ್ಧಿ ಜೀವಿಗಳಲ್ಲಿ ಒಬ್ಬರು" ("ಒನ್ ಆಫ್ ದಿ ಸಿಕ್ಸ್ ಬೆಸ್ಟ್ ಬ್ರೈನ್ಸ್ ಇನ್ ದಿ ವರ್ಲ್ಡ್") ಎಂಬ ಖ್ಯಾತಿಯನ್ನು ಗಳಿಸಿದ್ದರು.

ಅವರ ಸಾಧನೆಯಾದರೂ ಎಂಥದು? ಅಸ್ಪೃಶ್ಯರಾಗಿ ಹುಟ್ಟಿ, ಅಸ್ಪೃಶ್ಯರಾಗಿಯೇ ಬಾಳಿ, ಅಸ್ಪೃಶ್ಯರಾಗಿಯೇ ಕೊನೆಯುಸಿರನ್ನೆಳೆಯುತ್ತಿದ್ದ" ಜನಾಂಗದಲ್ಲಿ ಇಂದಿಗೆ ೧೦೦ ವರ್ಷಗಳ ಹಿಂದೆ (೧೪ ಏಪ್ರಿಲ್ ೧೮೯೧) ಹುಟ್ಟಿದ ವ್ಯಕ್ತಿ ಜಗತ್ತು ಬೆರಗಾಗಿ ನಿಂತು ನೋಡುವಂಥ ಪವಾಡವನ್ನು ಸಾಧಿಸಿದ ಎಂಬುದು ನಂಬಲೂ ಸಾಧ್ಯವಾಗದ ಸಂಗತಿಯಾಗಿ ಮುಂದಿನ ತಲೆಮಾರುಗಳಿಗೆ ಕಾಣಿಸಿದರೆ, ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಹಿಂದುಳಿದ ಸಮುದಾಯದಲ್ಲಿ ಹುಟ್ಟಿ, ಸಮಾಜದ ವ್ಯಂಗ್ಯ ಮತ್ತು ನಿಂದನೆಗಳ ನಡುವೆಯೂ ಮೆಟ್ರಿಕ್ ಪರೀಕ್ಷೆ ಮತ್ತು ಅನಂತರದಲ್ಲಿ ಬಿ. ಎ. ಪರೀಕ್ಷೆ ಪಾಸು ಮಾಡಿದಾಗ ಅವರಿಗೆ ಅಭಿನಂದನ ಸಮಾರಂಭವನ್ನು ಏರ್ಪಡಿಸಲಾಗಿತ್ತು ಎಂದರೆ ಎಂಥ ಹೀನಾಯ ಪರಿಸ್ಥಿತಿಗಳಲ್ಲಿ ಅವರು ಬೆಳೆದು ಬಂದರು ಎಂಬುದನ್ನು ಸುಲಭವಾಗಿಯೇ ಊಹಿಸಿಕೊಳ್ಳಬಹುದು.

ಅವರ ಪ್ರತಿಭೆಯನ್ನು ಗುರುತಿಸಿದ ಕಲೂಸ್ಕರ' ಎಂಬ ಬಡಬ್ರಾಹ್ಮಣ ಅಧ್ಯಾಪಕರು ಅವರನ್ನು ಬರೋಡಾದ ಮಹಾರಾಜರ ಬಳಿಗೆ ಕರೆದೊಯ್ದು, ಅವರಿಗೆ ನೆರವು ದೊರೆಯುವಂತೆ ಮಾಡಿದರು. ಆ ಮಹಾರಾಜರ ನೆರವಿನಿಂದ ಕೊಲಂಬಿಯಾ ವಿಶ್ವವಿದ್ಯಾನಿಲಯಕ್ಕೆ ಪ್ರಯಾಣ ಮಾಡಿದ ಅಂಬೇಡ್ಕರ್ ಅವರು ೧೯೧೫ ರಲ್ಲಿ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು ಪಡೆದುಕೊಂಡರು. ಅಲ್ಲಿಂದ ಹಿಂದಿರುಗಿ ಬಂದ ಮೇಲೆ ಮುಂಬಯಿಯ ಸೈನ್ ಡನ್‌ಹ್ಯಾಮ್ ಕಾಲೇಜಿನಲ್ಲಿ ಎರಡು ವರ್ಷಗಳ ಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಮತ್ತೆ ಅಮೆರಿಕೆಗೆ ಪ್ರಯಾಣ ಮಾಡಿ,ಪಿ.ಎಚ್.ಡಿ. ಪದವಿಯನ್ನು ಪಡೆದರು. ಅಷ್ಟರಿಂದಲೇ ತೃಪ್ತರಾಗದೆ ಲಂಡನ್ನಿನ 'ಸ್ಕೂಲ್ ಆಫ್ ಎಕನಾಮಿಕ್ಸ್' ನಿಂದ ಡಿ.ಎಸ್.ಸಿ. ಪದವಿಯನ್ನು ಪಡೆದರು. ಅಲ್ಲಿಂದ ಹಿಂದಿರುಗಿ ಬಂದ ಮೇಲೆ ವಕೀಲ ವೃತ್ತಿಯನ್ನು ಆರಂಭಿಸಿ, ಬಡವರಿಗೆ ಮುಫತ್ ಸೇವೆ ನೀಡತೊಡಗಿದರು. ದಲಿತರ ದನಿಯಾಗಿ ನಿಲ್ಲುವಂತೆ" ಮೂಕನಾಯಕ ಎಂಬ ಪಾಕ್ಷಿಕ ಪತ್ರಿಕೆಯನ್ನು ಸ್ಥಾಪಿಸಿದರು; ಮುಂದೆ 'ಬಹಿಷ್ಕೃತ ಹಿತಕಾರಿಣೀ ಸಭಾ' ಎಂಬ ಸಂಘಟನೆಯ ಹುಟ್ಟಿಗೂ ಕಾರಣರಾದರು. ದಲಿತರಿಗೆ ಈ ಸಂದರ್ಭದಲ್ಲಿ ಅವರು ನೀಡಿದ ಹಿತವಚನ ಅರ್ಥಪೂರ್ಣವಾಗಿದೆ: ನಿಮ್ಮಷ್ಟು ಚೆನ್ನಾಗಿ ನಿಮ್ಮ ತೊಂದರೆಗಳನ್ನು ಬೇರೆ ಯಾರೂ ನಿವಾರಿಸಲಾರರು. ನಿಮ್ಮ ಕೈಗೆ ರಾಜಕೀಯ ಅಧಿಕಾರ ಬರದ ಹೊರತೂ ನೀವು ಅವುಗಳನ್ನು ನಿವಾರಿಸಲಾರಿರಿ".

ತಮ್ಮ ಈ ಬಗೆಯ ಚಟುವಟಿಕೆಗಳಿಂದ ಗಮನ ಸೆಳೆದ ಅವರನ್ನು ಮುಂಬಯಿಯ ಶಾಸನಸಭೆಗೆ ನಾಮಕರಣ ಮಾಡಲಾಯಿತು. (೧೯೨೬ ರಿಂದ ೩೪).ಮಹಾಡ

ಲ್ಲಿ ಸಾರ್ವಜನಿಕ ಕೊಳದಿಂದ ನೀರು ಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ೯೨೭ ಡಿಸೆಂಬರ್) ಮತ್ತು ನಾಸಿಕ್‌ನಲ್ಲಿ ೇವಾಲಯ ಪ್ರವೇಶಕ್ಕೆ ಸಂಬಂಧಿಸಿದಂತೆ ೯೩೦, ಮಾರ್ಚ್) ಅವರು ನಡೆಸಿದ ಸತ್ಯಾಗ್ರಹಗಳು ಗಮನಾರ್ಹವಾಗಿರುವಂಥವು. ಭಾರತದ ಸ್ವತಂತ್ರ ಕಾರ್ಮಿಕ ಪಕ್ಷ'ದ ಸ್ಥಾಪನೆ ಹಾಗೂ 'ಅನುಸೂಚಿತ ಜಾತಿಗಳ ಅಖಿಲಭಾರತ ಸಂಘಟನೆ' ಅವರ ಕಾರ್ಯಕುಶಲತೆಗೆ, ಸಾಕ್ಷಿಯಾಗಿದ್ದುವು. ಮುಂದೆ ೯೪೨ ರಲ್ಲಿ ಅವರನ್ನು ಗವರ್ನರ್ ಅವರ ಕಾರ್ಯಪಾಲಕ ಪರಿಷತ್ತಿನ ಸದಸ್ಯರನ್ನಾಗಿ ನೇಮಿಸಲಾಯಿತು. ಸಂವಿಧಾನ ರಚನಾ ಸದಸ್ಯರನ್ನಾಗಿಯೂ ಅವರನ್ನು ನೇಮಿಸಲಾಯಿತು. ನೆಹರೂ ಅವರ ಸಂಪುಟದಲ್ಲಿ ಕೆಲಕಾಲ ಕಾನೂನು ಸಚಿವರಾಗಿಯೂ ಅವರು ಸೇವೆ ಸಲ್ಲಿಸಿದರು. ಅವರು ಸೂಚಿಸಿದ ಸುಧಾರಣೆಗಳಿಗೆ ಸರ್ಕಾರ ಒಪ್ಪದೆ ಹೋದಾಗ ಅವರು ರಾಜೀನಾಮೆ ನೀಡಿ ಹೊರಬಂದರು. "ನಾನು ಹಿಂದುವಾಗಿ ಹುಟ್ಟಿದ್ದೇನೆ; ಹಿಂದುವಾಗಿ ಬಾಳಿದ್ದೇನೆ. ಆದರೆ ಹಿಂದುವಾಗಿ ಸಾಯುವುದಿಲ್ಲ" ಎಂಬ ತಮ್ಮ ಹೇಳಿಕೆಯಂತೆ, ಬಾಳಿನ ಸಂಜೆಯಲ್ಲಿ ಬೌದ್ಧ ಧರ್ಮವನ್ನು ಸ್ವೀಕಾರ ಮಾಡಿದ ಅವರು ೯೫೬ ರ ಡಿಸೆಂಬರ್ ೬ ರಂದು ಮಹಾಪಯಣವನ್ನು ಕೈಗೊಂಡರು.

ಮಹಾಪುರುಷರಾಗಿ ಬೆಳೆದ ಈ ವ್ಯಕ್ತಿ, ಮಹಾಪುರುಷರ ಬಗ್ಗೆ ತಾವೇ ಹೇಳಿದ ಲಕ್ಷಣಗಳಿಗೆ ತಾವೇ ಒಂದು ಉದಾಹರಣೆಯೂ ಆಗಿ ಪರಿಣಮಿಸಿದ್ದು ಒಂದು ವಿಶೇಷ ಸಿದ್ಧಾಂತ. ಅವರು ಹೇಳಿದ ಆ ಮಾತುಗಳು ಹೀಗಿವೆ: "ಮಹಾವ್ಯಕ್ತಿಯಾದವನು ಸಾಮಾಜಿಕ ಧ್ಯೇಯದ ಬಲ ಕ್ರಿಯಾಶಾಸ್ತ್ರದಿಂದ ಅಥವಾ ಆದರ್ಶಗಳಿಂದ ಪ್ರೇರಿತನಾಗಿರಬೇಕು; ಅವನು ಸಮಾಜಕ್ಕೆ ಚಾವಟಿಯಂತೆಯೂ ಇರಬೇಕು; ಜಲಗಾರನಾಗಿಯೂ ಇರಬೇಕು. ಇವು ಪ್ರಸಿದ್ಧ ವ್ಯಕ್ತಿಯಿಂದ ಮಹಾವ್ಯಕ್ತಿಯನ್ನು ಬೇರ್ಪಡಿಸಿ ತೋರುವ ಗುಣಗಳು ಹಾಗೂ ಅವನನ್ನು ಗೌರವಾರ್ಹನೂ, ಆದರಣೀಯನೂ ಆಗಿಸುವುದಕ್ಕೆ ಕಾರಣವಾಗುವ ಸಂಗತಿಗಳು." ಅಂಬೇಡ್ಕರ್ ಅವರ ಬಾಳಿನ ಘಟನೆಗಳನ್ನು ಪರಿಶೀಲಿಸಿದಾಗ ನಮಗೆ ಈ ಮಾತಿನ ಸತ ಅರ್ಥವಾಗುತ್ತದೆ. ಹಾಗೆ ಅವರು ನಡೆದುಕೊಂಡಿದ್ದರಿಂದಲೇ ಅವರು ಆದರಣೀಯರು ಮಾತ್ರವಲ್ಲ, ಆರಾಧ್ಯರೂ ಆದರು.

ದಲಿತ ಜನಾಂಗ ತನ್ನ ಹಕ್ಕುಗಳಿಗಾಗಿ ಹೋರಾಡುವಂತೆ ಮಾಡುವ ಸಲುವಾಗಿ ಅವರು ಹಳ್ಳಿ ಹಳ್ಳಿಗೆ ಹೋಗಿ ಜನರನ್ನು ಹೇಗೆ ಪ್ರಚೋದಿಸಿದರು, ಸೆಟೆದು ನಿಲ್ಲುವಂತೆ ಮಾಡಿದರು ಎಂಬುದನ್ನು ಅವರ ಜೀವನಚರಿತ್ರಕಾರರಾಗಿರುವ ಧನಂಜಯ ಕೀರ್ ಅವರು ಮಾರ್ಮಿಕವಾಗಿ ವರ್ಣಿಸಿದ್ದಾರೆ. "ಸ್ವಾತಂತ್ರ್ಯ ಎಂಬುದು ಉಡುಗೊರೆಯಾಗಿ ಎಂದೂ ಬರುವುದಿಲ್ಲ. ಅದಕ್ಕಾಗಿ ನಾವು ಹೋರಾಟವನ್ನೇ ನಡೆಸಬೇಕು" ಎಂದು ಅವರು ತಿಳಿಯಹೇಳಿದರು. ಇವಕ್ಕಾಗಿ ಅವರನ್ನು ಪ್ರಚೋದಿಸುವ ಬಗೆಯಾದರೂ ಯಾವುದು? ಅವರೆನ್ನುತ್ತಾರೆ: "ಗುಲಾಮನಿಗೆ ನೀನು ಗುಲಾಮ ಎಂದು ಹೇಳಿ, ಅವನು ಸೆಟೆದು ನಿಲ್ಲುತ್ತಾನೆ." ಸ್ವಸಹಾಯ, ಸ್ವೋದ್ಧಾರ ಮತ್ತು ಆತ್ಮಗೌರವ—ಈ ತತ್ತ್ವಗಳ ಆಧಾರದ ಮೇಲೆ ಹೋರಾಟ ನಡೆಸಬೇಕೆಂದೂ ಅವರು ತಿಳಿಸಿ

ದರು. ಅವರು ದಲಿತ ಜನಾಂಗದ ಪ್ರತಿನಿಧಿಯಾಗಿದ್ದುದರಿಂದ ಅವರನ್ನು 'ದಲಿತ ಜನಾಂಗದ ಹಕ್ಕುಗಳಿಗಾಗಿ ಹೋರಾಡಿದ ಮಹಾವೀರ' ಎಂದಷ್ಟೇ ಹಲವರು ಭಾವಿಸಿದ್ದಾರೆ. ಆದರೆ ಅವರು ಮಾನವತಾವಾದಿ ಹೋರಾಟಗಾರರೇ ಆಗಿದ್ದರು.

ಹೋರಾಟದ ರಾಜಕಾರಣದಲ್ಲಿ ಮುಂಚೂಣಿಗೆ ಬರುವ ನಾಯಕರು ನಾಡಿನ ಹಿತವನ್ನು ಮರೆತು ಸ್ವಾರ್ಥ ಸಾಧನೆಯಲ್ಲಿ ತೊಡಗುವುದು ಅವರಿಗೆಂದೂ ಇಷ್ಟವಾಗುತ್ತಿರಲಿಲ್ಲ. ತಮ್ಮ ಈ ನಿಲುವನ್ನು ಅವರು ಅಸಂದಿಗ್ಧ ರೂಪದಲ್ಲಿ ಸಾರಿ ಹೇಳಿದ್ದರು: "ವೈಯಕ್ತಿಕ ಹಿತಾಸಕ್ತಿ ಮತ್ತು ನಾಡಿನ ಒಟ್ಟಾರೆ ಹಿತಾಸಕ್ತಿಗಳ ನಡುವೆ ಸಂಘರ್ಷ ಉಂಟಾದಾಗಲೆಲ್ಲ, ನನ್ನ ವೈಯಕ್ತಿಕ ಹಿತಾಸಕ್ತಿಗಿಂತ ನಾಡಿನ ಹಿತಾಸಕ್ತಿಯನ್ನು ಮೇಲಿರಿಸಿದ್ದೇನೆ, ನಾನೆಂದೂ ಖಾಸಗಿ ಲಾಭದ ಹಾದಿಯನ್ನು ಹಿಡಿದಿಲ್ಲ." ಈ ಮಾತನ್ನು ಇಂದು ಎಷ್ಟು ಮಂದಿ ರಾಜಕಾರಣಿಗಳು ಹೇಳಬಲ್ಲವರಾಗಿದ್ದಾರೆ? ಈ ಸಂಗತಿಯೇ ಅವರನ್ನು ಇತರರಿಗಿಂತ ಬೇರೆಯಾಗಿಸುತ್ತದೆ.

ರಕ್ತಕ್ರಾಂತಿಯಿಂದಲ್ಲದೆ, ಸಂವಿಧಾನಾತ್ಮಕ ವಿಧಾನಗಳಿಂದಲೇ ಸಾಮಾಜಿಕ ಸುಧಾರಣೆಯನ್ನು ಸಾಧಿಸಬೇಕೆಂಬುದನ್ನು ಅವರು ಯಾವಾಗಲೂ ಒತ್ತಿಹೇಳುತ್ತಿದ್ದರು. ಕ್ರಾಂತಿ ಮತ್ತು ನಿಜವಾದ ಸಾಮಾಜಿಕ ಸುಧಾರಣೆಯ ನಡುವೆ ವ್ಯತ್ಯಾಸವನ್ನು ಅವರು ನಿಚ್ಚಳವಾಗಿ ಗುರುತಿಸಿದ್ದರು. ಅವರೇ ಒಂದೆಡೆಯಲ್ಲಿ ಹೀಗೆಂದಿದ್ದಾರೆ: ಕ್ರಾಂತಿ ಎಂಬುದು ಅಧಿಕಾರವನ್ನು "ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಅಥವಾ ಒಂದು ರಾಷ್ಟ್ರದಿಂದ ಇನ್ನೊಂದು ರಾಷ್ಟ್ರಕ್ಕೆ ವರ್ಗಾಯಿಸುತ್ತದೆ....ಆದರೆ ಅಧಿಕಾರದ ಹಂಚಿಕೆಯಾದಲ್ಲಿ ಮಾತ್ರ ನಿಜವಾದ ಸಾಮಾಜಿಕ ಬದಲಾವಣೆ ಸಾಧ್ಯವಾಗುತ್ತದೆ." ಆದ್ದರಿಂದಲೇ, ಅಧಿಕಾರ ವಿಕೇಂದ್ರೀಕರಣದ ವಿಚಾರವನ್ನು ಅವರು ಒತ್ತಿಹೇಳುತ್ತಿದ್ದರು.

ಅವರು ಸ್ತ್ರೀ-ವಿಮೋಚನೆಯ ಸಿದ್ಧಾಂತದ ಪ್ರತಿಪಾದಕರೂ, ಆಗಿದ್ದರು. ಆದರೆ ಈ ಚಳುವಳಿಯ ಅತಿರೇಕಗಳನ್ನೆಂದೂ ಅವರು ಸಮರ್ಥಿಸುತ್ತಿರಲಿಲ್ಲ. "ದಿ ರೈಸ್ ಅಂಡ್ ಫಾಲ್ ಆಫ್ ದಿ ಹಿಂದು ವುಮೆನ್" ಎಂಬ ತಮ್ಮ ಸುವಿಖ್ಯಾತ ಲೇಖನದಲ್ಲಿ ಅವರು ಹೀಗೆಂದು ಹೇಳಿದ್ದರು. "ಮದುವೆಯಾಗುವ ಪ್ರತಿಯೊಬ್ಬ ಹುಡುಗಿಯೂ ತನ್ನ ಗಂಡನಿಗೆ ಒತ್ತಾಸೆಯಾಗಿ ನಿಲ್ಲಲಿ; ಅವಳು ತನ್ನ ಗಂಡನ ಗೆಳತಿಯೂ, ಸಮಾನಸ್ಕಂಧಳೂ ಆಗಿರಲಿ, ಅವನ ಗುಲಾಮಳಾಗಿರುವುದನ್ನು ನಿರಾಕರಿಸಲಿ." ಅಷ್ಟೇ ಅಲ್ಲ, ದಲಿತವರ್ಗದ ಮಹಿಳೆಯರ ಸಮ್ಮೇಳನವನ್ನುದ್ದೇಶಿಸಿ ಮಾತನಾಡುವಾಗ, ನಾಡಿನ ಹಿತದೃಷ್ಟಿಯಿಂದ ಮುಖ್ಯವಾದ ಮಿತಸಂತಾನದ ವಿಚಾರವನ್ನು ಒತ್ತಿಹೇಳಿದ್ದರು: "ಮದುವೆಯಾಗಲು ಆತುರ ಪಡಬೇಡಿ, ಮದುವೆ ಎಂಬುದು ಸಾಲಸೋಲದ ಹೊರೆ ಇದ್ದಂತೆ....ಹೆಚ್ಚಿನ ಸಂಖ್ಯೆಯ ಮಕ್ಕಳನ್ನು ಹೊಂದುವುದು ಒಂದು ಅಪರಾಧವೇ ಸರಿ" ("ಮ್ಯಾರೇಜ್ ಈಸ್ ಲೈಅಬಿಲಿಟಿ.... ಟು ಹ್ಯಾವ್ ಟೂ ಮಚ್ ಚಿಲ್ಡ್ರನ್ಸ್ ಈಸ್ ಎ ಕ್ರೈಮ್").

ಶಿಕ್ಷಣದ ಮಹತ್ವವನ್ನು ಅವರು ಚೆನ್ನಾಗಿ ಅರಿತಿದ್ದರು: "ಶಿಕ್ಷಣಕ್ಕಿಂತಲೂ ಹೆಚ್ಚು ಪವಿತ್ರವಾದ ಸಂಗತಿ ಬೇರಾವುದು ಇಲ್ಲ"

ಎಂಬುದೂ ಅವರದೇ ಮಾತು. ಆದರೆ ಅದು ಎಲ್ಲರ ಕೈಗೆಟುಕುವಂತೆ ಇರಬೇಕೆಂದು ಅವರು ಬಯಸಿದ್ದರು. ಅಂತೆಯೇ ಶೀಲದ ಮಹತ್ವವನ್ನು ಅವರು ಒತ್ತಿ ಹೇಳುತ್ತ ಇದ್ದರು. ಒಂದೆಡೆ ಅವರು ಹೀಗೆಂದಿದ್ದಾರೆ: "ಶೀಲ ಮತ್ತು ವಿನಯಗಳಿಲ್ಲದ ವಿದ್ಯಾವಂತ ಕಾಡುಪ್ರಾಣಿಗಿಂತಲೂ ಅಪಾಯಕಾರಿಯಾದವನು. ವ್ಯಕ್ತಿಯ ಶಿಕ್ಷಣ ಬಡವರ ಹಿತಾಸಕ್ತಿಗಳಿಗೆ ಹಾನಿಯನ್ನುಂಟುಮಾಡುವಂತಿದ್ದರೆ, ಅವನು ಸಮಾಜಕ್ಕೆ ಶಾಪವೇ ಆಗಿಬಿಡುತ್ತಾನೆ....ಶಿಕ್ಷಣಕ್ಕಿಂತ ಶೀಲ ಹೆಚ್ಚು ಮುಖ್ಯವಾದುದು." (....ಕ್ಯಾರ-ಕ್ಟರ್ ಈಸ್ ಮೋರ್ ಇಂಪಾರ್ಟೆಂಟ್ ದ್ಯಾನ್ ಎಜುಕೇಶನ್.)

ಭಾಷಾವಾರು ಪ್ರಾಂತ್ಯಗಳ ವಿಭಜನೆಯ ಅಪಾಯಗಳನ್ನು ಅವರು ಅರಿತಿದ್ದರು. ನಮ್ಮಲ್ಲಿಯೇ ಪ್ರತ್ಯೇಕತೆಯ ದನಿ ಏಳತೊಡಗಿರುವುದನ್ನೂ ಉತ್ತರಭಾರತದಲ್ಲಿ ಹೊಸ ರಾಜ್ಯಗಳ ಬೇಡಿಕೆ ಮೂಡಿಬರುತ್ತಿರುವುದನ್ನೂ, ಇತರ ಬೆಳವಣಿಗೆಗಳನ್ನೂ ನಾವಿಂದು ಕಾಣುತ್ತಿದ್ದೇವಷ್ಟೆ. ಅಂಬೇಡ್ಕರ್ ಅವರು ಈ ಬೆಳವಳಿಗೆಗಳನ್ನು ಮುಂಗಾಣಬಲ್ಲವರಾಗಿದ್ದರು. "ಭಾಷಾವಾರು ಪ್ರಾಂತ್ಯಗಳ ರಚನೆ ನಮ್ಮಲ್ಲಿ ಎಷ್ಟು ಗುಂಪುಗಳಿವೆಯೋ ಅಷ್ಟು ರಾಜ್ಯಗಳಾಗಲು ಅವಕಾಶ ಮಾಡಿಕೊಡುತ್ತದೆ." ಅದು ಭಾರತದ ವಿಭಜನೆಗೆ ದಾರಿ ಮಾಡಿಕೊಡುತ್ತದೆ." ಎಂದು ಅವರು ಹೇಳಿದ್ದರು. ಭಾಷಾವಾರು ಪ್ರಾಂತ್ಯಗಳ ರಚನೆಯ ಹಿಂದಿನ ಧ್ಯೇಯೋದ್ದೇಶಗಳನ್ನು ಒಪ್ಪುವ ವ್ಯಕ್ತಿಗಳೂ ಈ ಅಪಾಯವನ್ನು ನಿರ್ಲಕ್ಷಿಸಲು ಸಾಧ್ಯವಾಗುವುದಿಲ್ಲ.

ಭವಿಷ್ಯದ ಆಶಾಕಿರಣವಾಗಿರುವ ಯುವ ಜನಾಂಗಕ್ಕೆ ಪ್ರೇರಕವೂ, ಪ್ರೋತ್ಸಾಹದಾಯಕವೂ ಆಗಿರುವಂಥ ಸಂದೇಶವನ್ನೂ ಅವರು ನೀಡಿದ್ದಾರೆ. "ನಿಮ್ಮ ಜೀವನೋದ್ದೇಶದ ಪವಿತ್ರತೆಯ ಬಗ್ಗೆ ನಿಮಗೆ ದೃಢವಾದ ನಂಬಿಕೆ ಇರಬೇಕು. ನಿಮ್ಮ ಗುರಿ ಉದಾತ್ತವಾಗಿರಬೇಕು. ನಿಮ್ಮ ಕಾರ್ಯೋದ್ದೇಶ ಮಹೋನ್ನತವಾಗಿರಬೇಕು. ಪ್ರತಿಷ್ಠೆಯನ್ನು ಹೆಚ್ಚಿಸುವಂಥದಾಗಿರಬೇಕು. ತಾವು ಯಾರ ನಡುವೆ ಹುಟ್ಟಿಬಂದಿರುತ್ತೀರೋ ಅವರ ಬಗೆಗಿನ ತಮ್ಮ ಕರ್ತವ್ಯದ ವಿಷಯದಲ್ಲಿ ಎಚ್ಚೆತ್ತುಕೊಂಡಿರುವಂಥವರೇ ಧನ್ಯರು."


ಇದು ಕೇವಲ ಒಣ ಉಪದೇಶವಾಗಿರದೆ, ಅಂಬೇಡ್ಕರ್ ಅವರು ತಮ್ಮ ಬಾಳಿನಲ್ಲಿ ಅಳವಡಿಸಿಕೊಂಡಿದ್ದಂಥ ಸಿದ್ಧಾಂತವೇ ಆಗಿತ್ತು. ಮೊದಲಿಗೆ ತಮ್ಮ ಸುತ್ತಮುತ್ತಲಿನ ಸಮುದಾಯಕ್ಕೆ, ಅನಂತರದಲ್ಲಿ ಇಡೀ ಮಾನವತೆಗೆ ಇಡೀ ರಾಷ್ಟ್ರಕ್ಕೆ ಉಪಕಾರಕವಾಗುವಂಥ ರೀತಿಯಲ್ಲಿ ತಮ್ಮ ಬಾಳನ್ನು ತೇಯ್ದ ಅಂಬೇಡ್ಕರ್ ಅವರು ನಿಜಕ್ಕೂ ಧನ್ಯರೇ ಆದರೂ ಅವರ ಸಮಗ್ರ ಸಾಧನೆಗಳು, ಸರ್ವತೋಮುಖವಾದ ಅವರ ಚಿಂತನೆಗಳು ಮತ್ತು ಕಾಳಜಿಗಳು ನಮ್ಮ ನಾಡಿನ ಅಮೂಲ್ಯ ನಿಧಿಗಳೇ ಆಗಿವೆ.

ಈ ಕಾರಣದಿಂದಾಗಿಯೇ ಮಹಾರಾಷ್ಟ್ರ ಸರ್ಕಾರ ಅವರ ಸಮಗ್ರ ಕೃತಿಗಳ ಸಂಪುಟವನ್ನು ಹೊರತಂದಿದೆ. ಕರ್ನಾಟಕ ಮತ್ತು ಇತರ ಕೆಲವು ರಾಜ್ಯಗಳು ಅವುಗಳ ತಮ್ಮ ಭಾಷೆಯ ಆವೃತ್ತಿಗಳನ್ನು ಹೊರತರುವ ಪ್ರಯತ್ನಗಳನ್ನು ನಡೆಸಿವೆ. ಇದರ ಜೊತೆಗೆ

ಅಂಬೇಡ್ಕರ್ ಅವರ ಸಾಧನೆಗಳನ್ನು ಅಲ್ಲ ಗಳೆಯುವ ಪೂರ್ವಾಗ್ರಹಪೂರ್ಣವಾದ ಹಾಗೂ ವಸ್ತುನಿಷ್ಠವಲ್ಲದಿರುವಂಥ ಕೆಲವು ಕೃತಿಗಳೂ (ಉದಾಹರಣೆಗೆ ಅರುಣ್‌ಶೌರಿಯವರ ವರ್‌ಷಿಪಿಂಗ್ ಫಾಲ್ಸ್ ಗಾಡ್ಸ್) ಹೊರಬಂದಿವೆ. ಅರೆಕೊರೆಗಳಿಲ್ಲದ ಯಾವುದೇ ಸಾಧನೆಯೂ ಇರುವುದಿಲ್ಲ. ಸಾಧನೆಗಳ ಹಿರಿಮೆ-ಗರಿಮೆಗಳನ್ನು ಮಹತ್ವ ಮತ್ತು ಔಚಿತ್ಯಗಳನ್ನು ಅರ್ಥಮಾಡಿಕೊಳ್ಳದೆ, ಅರೆಕೊರೆಗಳ ವಲಯದಲ್ಲಿಯೇ ಹೋರಾಡುವುದು ವಿವೇಕ ಸಮ್ಮತವಾಗುವುದಿಲ್ಲ.

ಮಾನವೀಯ ಸಾಧನೆಯ ಯಾವ ಮಾನದಂಡದಿಂದ ಅಳೆದರೂ ಅಂಬೇಡ್ಕರ್ ಅವರ ಸಾಧನೆ ಗಣನೀಯವಾದುದು. ಮಹತ್ತರವಾದುದು. ಆದರೆ ಇದನ್ನು ಅರ್ಥ ಮಾಡಿಕೊಳ್ಳುವುದಕ್ಕೂ ನಮ್ಮ ಸರ್ಕಾರಕ್ಕೆ ಅಷ್ಟೊಂದು ದೀರ್ಘ ಕಾಲ ಬೇಕಾಯಿತಲ್ಲ : ಈ ಅಮೃತಪುತ್ರನಿಗೆ 'ಭಾರತ ರತ್ನ' ಪ್ರಶಸ್ತಿಯನ್ನು ತಡವಾಗಿಯಾದರೂ ನೀಡಿ ತನ್ನ ತಪ್ಪನ್ನು ತಿದ್ದಿಕೊಂಡಿತಲ್ಲ ಎಂಬುದಷ್ಟೇ ಸಮಾಧಾನದ ವಿಷಯ.

---




"ನಿಮ್ಮ ಸಮೀಪದಲ್ಲಿರುವವರಿಗೆ
ಪರಿಚಿತರಿಗೆ ಶಿಕ್ಷಣದ ಮಹತ್ವದ
ಕುರಿತು ಬೋಧಿಸಿರಿ, ಅವರನ್ನು
ವಿದ್ಯಾವಂತರನ್ನಾಗಿ ತಯಾರು ಮಾಡಿ"

—ಡಾ. ಬಿ. ಆರ್. ಅಂಬೇಡ್ಕರ್

# ಬಳ್ಳಿಗೊಂದು ಹೂವು

**ಕೆ. ಸುಕನ್ಯಭಟ್**
'ಶ್ರೀ ಶಾಕಾಂಬರಿ' ಶಂಕರಮಠ ರಸ್ತೆ
ಧಾರವಾಡ–೫೮೦೦೦೪

ಅನ್ಯಮನಸ್ಕಳಾಗಿ ಹೂ ಗಿಡಗಳತ್ತ ನೆಟ್ಟ ದೃಷ್ಟಿಯಿಂದ ನೋಡುತ್ತಾ ಕುಳಿತಿದ್ದ ಶಾಲಿನಿಯನ್ನ ಕಂಡಾಗ ರಮೇಶನಿಗೆ ತಾನವಳಿಗೆ ಒಂದು ವಾರದಿಂದಲೂ ಹೇಳಬೇಕೆಂದು ಇರುವ ಮಾತುಗಳನ್ನು ಹೇಳಲು ತಕ್ಕ ಸಮಯ ಎನಿಸಿತು. ಪಕ್ಕದಲ್ಲೇ ಕುಳಿತುಕೊಳ್ಳುತ್ತಾ ಏನು ಯೋಚಿಸ್ತಿದ್ದಿಯಾ? ಎಂದ. "ಏನಿಲ್ಲ....ಹೀಗೇ ನೋಡ್ತಾ ಇದ್ದೆ. ಅಲ್ನೋಡಿ, ಆ ಗಿಡಗಳಲ್ಲಿ ಹೂಗಳೇ ಇಲ್ಲ. ಹೇಗೆ ಬೋಳಾಗಿ ಕಾಣಿಸ್ತಿದೆ. ಗಿಡಗಳಲ್ಲಿ ಹೂಗಳಿದ್ರೆ, ಚೆಂದ ಅಲ್ವಾ?" ಎಂದಳು ಶಾಲಿನಿ. ಉತ್ತರಿಸದಿದ್ದ ಪತಿಯತ್ತ ತಿರುಗಿ, ನಾಹೇಳಿದ್ದು ತಪ್ಪಾ ಹೇಳ್ರೀ? ಯಾಕೆ ಸುಮ್ನೆ ಆಗ್ಬಿಟ್ರಿ"....ಎಂದು ಒತ್ತಾಯಿಸತೊಡಗಿದಳು, ನಿನ್ನ ಮಾತಿನರ್ಥ ಏನೂಂತ ಯೋಚ್ಚಿಸ್ತಿದ್ದೆ ಅಷ್ಟೆ. ನಿನ್ಹತ್ರ ಒಂದ್ಮಾತು ಹೇಳೊದಕ್ಕಂತ ನಾನಿವತ್ತು ಬೇಗ ಬಂದದ್ದು. ಹೇಳಲಾ....ಎಂದು ಅವಳೊಪ್ಪಿಗೆಗೆ ಕಾಯತೊಡಗಿದ ರಮೇಶ. "ಹೇಳಿ; ಯಾವತ್ತಾದ್ರೂ ನಾನು ಏನಾದ್ರೂ ಹೇಳಿದ್ದೇನಾ....? ಇವತ್ಯಾಕೆ ಹೀಗೆ....ಎಂದವಳ ಕೈ ಹಿಡಿದು, ನಾವೂ ಒಂದು ಮಗುನ್ನ ತಂದು ಸಾಕಿದ್ರೆ, ಹೇಗೇಂತ?....ಅದೂ....ನಿನಗಿಷ್ಟವಾದ್ರೆ", ಎಂದು ಅರ್ಧಕ್ಕೆ ನಿಲ್ಲಿಸಿದ. "ನೀವೆನನ್ತೀರಾಂತ ನಾನೂ ಇಷ್ಟು ದಿನ ನನ್ನೊಳಗೇ ಆಸೆಯನ್ನ ಬಚ್ಚಿಟ್ಟದ್ದೆ....ರೀ....ಯಾವಾಗ ಪಾಪೂನ್ನ ತರೋಣ? ಯಾರು ಕೊಡ್ತಾರೆ? ಬೇಗ ಹೇಳ್ರಿ...." ಎಂದು ಒತ್ತಾಯಿಸ ತೊಡಗಿದಳು ಶಾಲಿನಿ. "ಯಾರ‍್ಯಾಕೆ ಕೊಡ್ತಾರೆ? ಮನೋಹರನ ಊರಿನಲ್ಲಿ ಒಂದು ಅನಾಥಾಶ್ರಮ ಇದ್ಯಂತೆ. ಆಲ್ಲಿ ಚಿಕ್ಕ ಚಿಕ್ಕ ಮಕ್ಕಳೂ ಇದ್ದಾರಂತೆ. ಬೇಕಿದ್ರೆ ವಿಚಾರಿಸ್ತೇನೆ ಎಂದಿದ್ದಾನೆ. ಏನ್ಮಾಡೋಣ. ಎಲ್ಲಾ ನೀನು ಹೇಳಿದ್ಹಾಗೆ...." ಎಂದು ಸುಮ್ಮನಾದ ರಮೇಶ. ಮನದ ಜಡತ್ವ ಇದ್ದಕ್ಕಿದ್ದಂತೆ ದೂರವಾದಹಾಗಾಯಿತು ಶಾಲಿನಿಗೆ. ಅಬ್ಬಾ, ಅಂತೂ ತಾನಿನ್ನು ಬೋಳು ಮರ ಎಂದು, ಎಲ್ಲರಿಂದ ಅನಿಸಿಕೊಳ್ಳುತ್ತಾ....ಜೀವ ಸವೆಸುತ್ತಿರಬೇಕಲ್ಲಾ ಎಂದು ಕೊರಗುತ್ತಿದ್ದವಳಿಗೆ ಅವನ ಮಾತುಗಳುಮರುಭೂಮಿಯಲ್ಲಿ ಸಿಹಿ ನೀರು ಸಿಕ್ಕಿದಂತಾಯಿತು. "ಒಳ್ಳೆ ಕೆಲ್ಸಕ್ಕೆ ತಡ ಯಾಕೆ? ನಾಳೆನೇ ಹೋಗಿ ತಂದ್ಬಿಡೋಣ

ಈಗ್ಲೇ ಹೋಗೋಣಾಂದ್ರೂ, ನಾನು ರೆಡೀನೆ...." ಎಂದು ಖುಷಿ ಪಟ್ಟಳು.

ಅನಾಥಾಶ್ರಮವನ್ನವರು ತಲುಪಿದಾಗ ಗಂಟೆ ಆರಾಗಿತ್ತು. ದುಂಡು ಮಲ್ಲಿಗೆಯ ಪರಿಮಳ ಸುತ್ತಲೂ ಪಸರಿಸಿತ್ತು. ಮೋಡಗಳಿಲ್ಲದ ನೀಲಾಕಾಶದಂತೆ ಶುಭ್ರವಾಗಿತ್ತು ಆವರಣ. ಪ್ರಸನ್ನಚಿತ್ತಳಾದ ಶಾಲಿನಿ, ರಮೇಶನನ್ನ ಹಿಂಬಾಲಿಸುತ್ತಾ...."ಎಷ್ಟು ಕ್ಲೀನಾಗಿದೆ ಅಲ್ವಾ? ಸದ್ಯ ಮಕ್ಕಳೂ ಇಲ್ಲಿ ಆರೋಗ್ಯವಂತರಾಗಿ, ಕ್ಲೀನಾಗಿ ಇರಬಹುದು. ಇಲ್ಲಿಯೇ ನಮಗೆ ಬೇಕಾಗಿರುವ ಮಗು ಸಿಕ್ಕಿದರೆ ಆಗ್ತಿತ್ತು. ನೋಡಿ, ನೋಡಿ, ಬೇಡಾಂತ ಬಿಟ್ಟು ಹೋದರೆ ಅವರ ಮನಸ್ಸಿಗೂ ನೋವಾದೀತು—" ಎಂದೆಲ್ಲಾ ತನ್ನಷ್ಟಕ್ಕೆ ಹೇಳಿಕೊಂಡಳು. ಮೇಲ್ವಿಚಾರಕಿ ರಾಜೇಶ್ವರಿಯವರು, ಕೊಠಡಿಯೊಳಗಿನಿಂದಲೇ ಇವರ ಬರುವಿಕೆಯನ್ನು ತಿಳಿದು "ಬನ್ನಿ....ಬನ್ನಿ....ನಿಮಗಾಗಿ, ಕಾಯ್ತಿದ್ದೇನೆ. "ಎಂದು ಸ್ವಾಗತಿಸಿದರು. ಸ್ವಲ್ಪ ಹೊತ್ತು ಮಾತನಾಡಿದ ನಂತರ ಕೆಲಸದ ಸಿದ್ದವ್ವನನ್ನ ಕರೆದು, "ಇವ್ರನ್ನ ಒಳಗೆ ಕರ್ಕೊಂಡ್ಹೋಗಿ ನಾನು ಆಗ ಹೇಳಿದ ಮಕ್ಕಳನ್ನೆಲ್ಲಾ ತೋರಿಸು"ಎಂದರು. ಒಳಗೆ ಮೂಲೆಯ ನೆಲದಲ್ಲಿ ಒಂಟಿಯಾಗಿ ಕುಳಿತು ಬೊಂಬೆಗಳೊಡನೆ ಆಡುತ್ತಿದ್ದ ಪುಟ್ಟ ಗೊಂಬೆಯಂಥ ಹೆಣ್ಣುಮಗು ಕಣ್ಣಿಗೆ ಬಿತ್ತು. ಅವಳೆಡೆ ಆಕರ್ಷಿತಳಾಗಿ ನಡೆದ ಶಾಲಿನಿಯ ಹಿಂದೆಯೇ ತಾನೂ ಹೋದ ರಮೇಶ. ಆ ಪುಟ್ಟ ಮಗುವನ್ನ ಕಂಡು, ಎಷ್ಟು ಕೆಂಪು, ಕೆಂಪಾಗಿ ಚೆನ್ನಾಗಿದ್ದಾಳಲ್ವಾ? ಎಂದು ಕೊಳ್ಳುತ್ತಾ ಏನು ಮಗೂ ನಿನ್ಹೆಸ್ರು?" ಎಂದ. "ಹೇಲಲ್ಲಾ...." ಎಂದು ರಾಗವೆಳೆದಿತ್ತು ಆ ಮಗು. ಶಾಲಿನಿಯೂ ಅವಳ ಕೆನ್ನೆ ಸವರಿ ಪರ್ಸಿನಿಂದ ಚಾಕೊಲೇಟ್ ತೆಗೆದು ಕೊಟ್ಟಾಗ "ಬೇಬಿ" ಎಂದಿತು. ಅವಳ ಸೀರೆಯ ತುದಿಗೆ ಕಟ್ಟಿದ್ದ ಕುಚ್ಚಿನಲ್ಲಿನ ಮಣಿಗಳನ್ನ ಕೀಳಲು ಪ್ರಯತ್ನಿಸತೊಡಗಿತು. "ಇವಳೇ ನಮಗಿರಲಿ, ಬೇರೆ ಯಾರನ್ನೂ ನೋಡುವುದೇ ಬೇಡ" ಕೂದಲು ನೋಡಿ ಎಷ್ಟು ನುಣುಪಾಗಿದೆ. ಒಳ್ಳೆ ರೇಶ್ಮೆಹಾಗೆ" ಎಂದಳು ಶಾಲಿನಿ. "ನಂದೂ ಏನೂ ಆಕ್ಷೇಪಣೆ ಇಲ್ಲ", ಎಂದವನು "ಬರ್ತೀಯಾ ಪುಟ್ಟ ನಮ್ಮನೆಗೆ" ಎಂದು ಚಪ್ಪಾಳೆ ತಟ್ಟಿ ಮಾತನಾಡಿಸಿದ. "ಕರ್ಕೊಂಡ್ಹೋದ್ರೆ ಬರ್ತೀನಿ, ಇಲ್ಲಾಂದ್ರೆ ಬಲಲ್ಲಾ"—ಎಂದು ಚಪ್ಪಾಳೆ ತಟ್ಟಿ ನಕ್ಕಿತು. ಅವರು ಒಳ ಹೋಗದೆ ಅಲ್ಲೇ ನಿಂತು ಬೇಬಿಯನ್ನ ಮಾತನಾಡಿಸುವುದನ್ನ ಕಂಡ ರಾಜೇಶ್ವರಿಯವರು "ಇಲ್ಯಾಕೆ ನಿಂತ್ಬಿಟ್ರಿ, ಒಳಗ್ಹೋಗಿ ಆರಿಸಿಕೊಳ್ಳಿ ಇವಳ್ಯಾಕೆ ನಿಮ್ಗೆ? ಒಳಗೆ ಎರಡು ಚೆನ್ನಾಗಿರುವ ಗಂಡು ಮಕ್ಕಳಿದ್ದಾರೆ...." ಎಂದಾಗ...."ನಮ್ಗೆ ಗಂಡುಮಗುವೇ. ಆಗ್ಬೇಕೂಂತ ಏನಿಲ್ಲ. ಹೆಣ್ಣು ಮಗು ಆದ್ರೂ ಸಾಕು. ಇವ್ಳು ನಮ್ಮಿಬ್ರಿಗೂ ಇಷ್ಟವಾಗಿದ್ದಾಳೆ. ಬೇರೆ ನೋಡುವ ಆವಶ್ಯಕತೆಯೇ ಇಲ್ಲ" ಎಂದು ಬಿಟ್ಟರು ದಂಪತಿಗಳು. ರಾಜೇಶ್ವರಿಯವರು ಕೂಡಲೇ—"ಇವಳಿಗೆ ಮರುಳಾಗಿ ಕರ್ಕೊಂಡ್ಹೋಗ್ತೀವೇಂತ ಎಷ್ಟೋ ಜನ ಹೇಳಿದರೂ ಕೊನೆಗೆ ಬೇಡಾಂತ ತಾವೇ ಬಿಟ್ಟು ಹೋಗಿದ್ದಾರೆ. ನಿಮ್ದೇನೂ ತಪ್ಪಿಲ್ಲ ಬಿಡಿ. ಮಗು ಅಷ್ಟು ಸುಂದರವಾಗಿದೆ. ನಿಜಸ್ಥಿತಿಯೇ ಬೇರೆ ಇದೆ.

"ಎಂದು ತನ್ನ ಮಾತನ್ನ ನಿಲ್ಲಿಸಿ, ಬೇಬಿ.... ಇಲ್ಲಿ ಬಾಮ್ಮ...." ಎಂದು ಕರೆದರು. ಮಗು ಬೊಂಬೆಯನ್ನು ಹಿಡಿದುಕೊಂಡೇ ಮೆಲ್ಲ ನೆದ್ದಿತು. ಕುರ್ಚಿಯನ್ನ ಗಟ್ಟಿಯಾಗಿ ಹಿಡಿದು ನಿಂತಾಗ ಅವಳ ಒಂದು ಕಾಲು ಸ್ವಲ್ಪ ತಿರುಚಿದಂತೆ ಕಂಡು ಶಾಲಿನಿಯ ಬಾಯಿಯಿಂದ ಅವಳಿಗರಿವಾಗದಂತೆಯೇ.... "ಅಯ್ಯೋ....ಪಾಪ...." ಎಂಬ ಉದ್ಗಾರ ಕೇಳಿಬಂದಿತು. ಅವಳ ಮನಸ್ಸಿನಲ್ಲಿ ದುಃಖದ ಕಾರ್ಮೋಡ ಕವಿಯಿತು. ಆಘಾತದ ಸಿಡಿಲು ಬಡಿಯಿತು. ರಮೇಶನೂ ಮರಗಟ್ಟಿ ಹೋದ. ಮರೆಯಲೆತ್ನಿಸುತ್ತಿದ್ದ, ಮನವೆಂಬ ಸಂದೂಕಿನೊಳಗೇ ಭದ್ರವಾಗಿದ್ದ ನೆನಪುಗಳು ಬೇಡ ಬೇಡವೆಂದರೂ ಮೇಲಕ್ಕೆದ್ದು ಬಂದವು. ಮದುವೆಯಾಗಿ ಆರು ವರ್ಷಗಳ ನಂತರ ಅಪರೂಪಕೆ ಹುಟ್ಟಿದ ಮಗುವಿನ ಬೆಳವಣಿಗೆ ಸರಿಯಿಲ್ಲದ್ದು, ಅನಂತರ ಕಷ್ಟದಿಂದ ಬದುಕಿ ಅರೆಹುಚ್ಚಿಯಂತಾಗಿದ್ದ ಶಾಲಿನಿಯ ಆರೋಗ್ಯ ಸುಧಾರಿಸಲು ಪಟ್ಟ ಶ್ರಮ, ಕೊನೆಗೆ ಗರ್ಭಕೋಶವನ್ನೇ ತೆಗೆದದ್ದು .... ಒಂದೇ .... ಎರಡೇ .... ಹೀಗೆ ಮೇಲಿಂದ ಮೇಲೆ ಆಘಾತಗಳು ಧಾಳಿ ಇಟ್ಟದ್ದು. ಛೆ....ಏನಾಗಿ ಹೋಯಿತು. ಸದಾ ಮಂಕಾಗಿರುವ ಶಾಲಿನಿಯ ಮನಸ್ಸಿನ ಆರೋಗ್ಯ ಸುಧಾರಿಸೀತೆಂಬ ಆಸೆಯಿಂದ ಬಂದರೆ ಇಲ್ಲಿಯೂ ಹೀಗಾಗಬೇಕೆ...." ಎಂದು ರಮೇಶ ಪರಿತಪಿಸತೊಡಗಿದನು ತಲೆ ಬಗ್ಗಿಯಾಗಿ ಕೈಗಳಿಂದ ಒತ್ತಿಹಿಡಿದು, ಮಗುವಿನ ಪಕ್ಕದಲ್ಲೇ ಕುಳಿತು ಅಳುವ ಶಾಲಿನಿಯನ್ನ...."ತಲೆನೋವಾ" ? ಎಂದು ಮಗುವೇ ಕೇಳಿತ್ತು.

"ಒಳಗೆ ಚೆಂದಚೆಂದದ ಮಕ್ಕಳಿದ್ದಾರೆ.... ಬನ್ನಿ ಹೋಗೋಣ" ಎಂದು ರಾಜೇಶ್ವರಿ ಪುನಃ ಕರೆದರು. "ಮಗು ಹುಟ್ಟುವಾಗ್ಲೇ ಹೀಗೇ ಇತ್ತಾ ? ಎಂದು ಚೇತರಿಸಿಕೊಂಡ ಶಾಲಿನಿ ಕೇಳಿದರೆ, "ಡಾಕ್ಟರಿಗೆ ಇವಳ ಕಾಲನ್ನ ತೋರಿಸಲಿಲ್ಲವಾ ?" ಎಂದು ರಮೇಶ ಕೇಳಿದ. "ಹುಟ್ಟುವಾಗ್ಲೇ ಹೀಗೆ ಇದ್ದಿರಬೇಕು. ಇನ್ನು ಡಾಕ್ಟರಿಗೆ ತೋರಿಸದೆ ಇರ್ತೇವೆಯೆ ? ಒಂದು ಸಣ್ಣ ಆಪರೇಶನ್ ಮಾಡಿದ್ರೆ ಕಾಲು ಸರಿಪಡಿಸಬಹುದು ಎಂದು ಡಾಕ್ಟರ್ ಹೇಳಿದ್ದಾರೆ. ಆದರೂ ಹಣ ಬೇಕಲ್ವಾ ? ಸರ್ಕಾರ ಕೊಡುವ ಹಣ ಮಕ್ಕಳ ಖರ್ಚಿಗೆ ಆಗುತ್ತದೆ" ಎಂದು ರಾಜೇಶ್ವರಿ ಸುಮ್ಮನಾದರು. "ನೀವು ಪರೀಕ್ಷೆ ಮಾಡಿಸಿದ ಡಾಕ್ಟರ ವಿಳಾಸ ಕೊಡಿ ನಾವೂ ವಿಚಾರಿಸ್ತೇವೆ. ಕಾಲು ಸರಿ ಆಗ್ತದೇಂತ ಅವ್ರು ಗ್ಯಾರಂಟಿ ಕೊಟ್ರೆ ನಾವು ಅವ್ರಿಗೆ ಹಣ ಕೊಡ್ತೇವೆ. ನಮಗಂತೂ ಮಕ್ಳನ್ನ ಸಾಕುವ ಯೋಗ ಕೂಡಾ ಕೊಟ್ಟಿಲ್ಲಾಂತ ಕಾಣ್ಸುತ್ತೆ. ಆದ್ರೆ ಈ ಮಗುವಿನ ಯೋಗಕ್ಷೇಮವನ್ನಾದ್ರು ನಾವು ನೋಡಿಕೊಳ್ಳೋಣ ಅದೀತಾ....ಶಾಲಿನಿ ಎಂದು ರಮೇಶ ಹೇಳಿ, ಅವಳ ಒಪ್ಪಿಗೆಗಾಗಿ ಕಾದ. ಅವನ ಮಾತುಗಳಿಂದ ಶಾಲಿನಿಗೆ ಯಾವ ರೀತಿಯ ಸಂತೋಷವೂ ಆಗಿಲ್ಲವೆಂಬುದು, ಅವಳ ಮುಖ ನೋಡಿಯೇ ಗ್ರಹಿಸಿದ. ಮೊದಲು ಆಪರೇಷನ್ ಮಾಡಿಸೋಣ....ನಮ್ಮ ಅದೃಷ್ಟ ಚೆನ್ನಾಗಿದ್ರೆ ಸರಿ ಆಗ್ತಾಳೆ. ಇಲ್ದೆಹೋದ್ರೆ ಇಲ್ಲ....ಅಷ್ಟೆ. ನಾನಂತೂ ಅವ್ಳನ್ನೆ ನನ್ನ ಮಗಳೂಂತ ಮಾಡಿಬಿಟ್ಟಿದ್ದೇನೆ. ಅವಳನ್ನಿಲ್ಲಿ ಬಿಟ್ಟು ಹೋದ್ರೆ ಇದ್ದಷ್ಟು ದಿನ ನಾನು ಮಾನಸಿಕ

ವಾಗಿ ವಿಕಲೆಯಾಗುವುದಂತೂ ನಿಜ.... ನಮ್ಮ ಮಗು ಸಾಯದೆ ಬದುಕಿದ್ದಿದ್ರೆ ನಾವು ಸಾಕ್ತಾ ಇರ್ಲಿಲ್ಲವಾ....ಯಾಕೆ ಸುಮ್ನಾದ್ರಿ....ಹೇಳ್ರಿ ?" ಎಂದು ಪತಿಯನ್ನೆ ಪ್ರಶ್ನಿಸಿದಳು.

ದತ್ತು ತೆಗೆದುಕೊಳ್ಳಲು ಬೇಕಾದ ಕ್ರಮಗಳೆಲ್ಲಾ ಮುಗಿದ ನಂತರವೇ ಮಗುವನ್ನು ಡಾಕ್ಟರಲ್ಲಿಗೆ ಅವರೇ ಕರೆದುಕೊಂಡು ಹೋಗಿ ತೋರಿಸಿದರು. ಆಪರೇಶನ್ ಮುಗಿದು ಪೂರ್ತಿ ಗಾಯ ಮಾಗುವವರೆಗೆ ಶಾಲಿನಿ ಅಲ್ಲಿಯೇ ಉಳಿದಳು. ಮಗುವಂತೂ ಅವಳನ್ನೆ "ಅಮ್ಮಾ...." ಎಂದು ಕರೆಯತೊಡಗಿತ್ತು, ರಾಜೇಶ್ವರಿಯೂ ತಮ್ಮ ಆಶ್ರಮದ ಕಂದಮ್ಮನ ಅದೃಷ್ಟಕ್ಕೆ ಸಂತಸಪಟ್ಟರು. ಶಾಲಿನಿ, ರಮೇಶರ ಮನ, ಮನೆಯನ್ನ ಮಗು ತುಂಬಿತು.

ಶಾಲಿನಿ, ರಮೇಶರೊಡನೆ, ಹೊಸ ಫ್ರಾಕ್ ತೊಟ್ಟು, ಕಾಲಿನ ಗಾಯ ಕಾಣದಂತೆ ಸಾಕ್ಸ್ ಹಾಕಿ ಒಳಬಂದ ಬೇಬಿಯನ್ನ ಕಂಡಾಗ ಡಾಕ್ಟರಿಗೂ ಸಂತೋಷವಾಯಿತು. ಪರೀಕ್ಷಿಸಿ, ಪ್ರತಿದಿನವೂ ವ್ಯಾಯಾಮ ಮಾಡಿಸಬೇಕೆಂದು ತಿಳಿಸಿದರು. "ನಾಳೆ ನಮ್ಮಲ್ಲಿ ಸತ್ಯನಾರಾಯಣನ ಪೂಜೆ ಇಟ್ಕೊಂಡಿದ್ದೇವೆ. ನಾಳೆಯಿಂದ ಈ ಬೇಬಿ ನಮ್ಮಜ್ಯೋತಿ"ಯಾಗ್ತಾಳೆ, ನೀವೂ ಬಂದು ಆಶೀರ್ವದಿಸಬೇಕು, ಎಂದು ಶಾಲಿನಿ ಕೇಳಿಕೊಂಡಳು. "ಖಂಡಿತ ಬರ್ತೇನೆ" ಹೊಸ ಬಾಳು ಇವಳಿಗೆ ಕೊಟ್ಟಿದ್ದು ನನಗಂತೂ ಬಹಳ ಸಂತೋಷವಾಗಿದೆ. ನಿಮಗೂ ಒಂದು ಸಂತಸದ ಸುದ್ಧಿ ಹೇಳಬೇಕೆಂದು ಮಾಡಿದ್ದೇನೆ. ನೀವು ಆಪರೇಶನ್‌ಗೆಂದು ಕೊಟ್ಟ ಹಣವನ್ನು ನಾನು ಅನಾಥಾಶ್ರಮ ಮಕ್ಕಳಿಗಾಗಿ ಕಳಿಸಿದ್ದೇನೆ, ಅಂಗವಿಕಲ ಮಕ್ಕಳು ಹುಟ್ಟಿದರೆ, ಕೆಲವು ಸಲ ಕಟುಕ ಹೃದಯಿಗಳಾದ ಹೆತ್ತವರೇ ಎಲ್ಲಿಯಾದರೂ ಬಿಟ್ಟು ಹೋಗುವುದನ್ನ ನಾನೇ ಕಂಡಿದ್ದೇನೆ ಅಂತಹದರಲ್ಲಿ ನೀವು ಕಾಲು ಸರಿಯಿಲ್ಲದವಳನ್ನೆ ಬಯಸಿ ಮಗಳನ್ನಾಗಿರಿಸಿಕೊಂಡಿರಿ. ಹೆಮ್ಮೆ ಪಡಬೇಕಾದವರು ನಾವು, ನಿಮ್ಮಂತಹ ವಿಶಾಲಹೃದಯಿಗಳಿಂದಾದರೂ ಉಳಿದವರೂ ಹೃದಯ ವೈಶಾಲ್ಯ ಹೊಂದಲಿ ಎಂಬುದೇ ನನ್ನಾಸೆ "ಎಂದು ಹೇಳಿ ಅವರನ್ನ ಬೀಳ್ಕೊಟ್ಟರು."

---

ಪುಣ್ಯ ಪಾಪಗಳೆಂಬುದು ತಮ್ಮಿಷ್ಟ ಕಂಡಿರೇ,
ಅಯ್ಯ ಎಂದೆಡೆ ಸ್ವರ್ಗ, ಎಲವೋ ಎಂದೆಡೆ ನರಕ,
ದೇವಾ, ಭಕ್ತ ಜೀಯಾ, ಜೀಯಾ ಎಂಬ ನುಡಿಯೊಳಗೆ ಕೈಲಾಸ.

—ಬಸವಣ್ಣ

# ಸರ್ವವ್ಯಾಪಿ ಪಟೇಲರುಗಳು

**ಗೋಪಾಲ ಆಶ್ರಿತ**
**೭-೫-೪೨, 'ರಮಾನಿಲಯ'**
**ಜವಾಹರನಗರ, ರಾಯಚೂರು–೫೮೪೧೦೧**

**ಈ** ಸಾಹಸಿ ಸಮುದಾಯ ಭಾರತದಿಂದ ಫಿಜಿ, ಇಂಗ್ಲೆಂಡಿನಂಥ ವಿವಿಧ ಸ್ಥಳಗಳಿಗೆ ನಿಜವಾಗಿಯೂ ಧಾವಿಸುತ್ತಿದೆ.

ಭಾರತದಲ್ಲಿ ಹುಟ್ಟಿದ ೬೨ ವರ್ಷದ ದುಲ್ಲಭಭಾಯಿ ಪಟೇಲ ಮೊದಲು ಕೆನ್ಯಾದಲ್ಲಿದ್ದು ಈಗ ಇಂಗ್ಲೆಂಡಿನಲ್ಲಿ ಲೆಕ್ಕಿಗನಾಗಿದ್ದಾನೆ. ಜನರನ್ನು ಸಾಮಾನ್ಯವಾಗಿ ಬಾಧಿಸುವ ಒಂಟಿತನವೇನಾದರೂ ಅವನನ್ನು ಕಾಡಿದೆಯೆ? ಎಂದು ಕೇಳಿದೆ. ಅವನು ಕಣ್ಣು ಮಿಟುಕಿಸುತ್ತಾ,ಶ್ಚ ಆರ್ಯಚಕಿತನಾಗಿ "ಇಲ್ಲ"ವೆಂದು ತಲೆ ಅಲ್ಲಾಡಿಸಿದ. "ಒಬ್ಬ ವ್ಯಕ್ತಿ ನಿಜವಾದ ಪಟೇಲನಾಗಿದ್ದರೆ ಅವನೆಂದೂ ಒಬ್ಬಂಟಿಗನಲ್ಲ. ವಿಶ್ವದ ಯಾವುದೇ ಭಾಗಕ್ಕೆ ಹೋದರೂ ಯಾವಾಗಲೂ ಅಲ್ಲೊಬ್ಬ ಪಟೇಲ ಸಿಗುತ್ತಾನೆ" ಎಂದನು.

ಈ ಅಂಶವನ್ನು ಪರೀಕ್ಷಿಸೋಣವೆಂದು ಅಂತರರಾಷ್ಟ್ರೀಯ ಮಾರ್ಗದರ್ಶಕ ವಿಚಾರಣಾ ವಿಭಾಗದವರನ್ನುದೂರವಾಣಿ ಮೂಲಕ ಸಂಪರ್ಕಿಸಿ "ಫಿಜಿಯಲ್ಲಿರುವ ಒಬ್ಬ ಪಟೇಲನ ದೂರವಾಣಿಯ ಸಂಖ್ಯೆ ಬೇಕು" ಎಂದೆ. "ನೀವು ಕೇಳುವ ವ್ಯಕ್ತಿಯ ಹೆಸರು ಸ್ಪಷ್ಟವಾಗಿ ಹೇಳಿರಿ. ಇಲ್ಲಿ ಪಟೇಲ ಎಂಬ ಹೆಸರು ಸಾಮಾನ್ಯ. ಮೊದಲಕ್ಷರಗಳನ್ನು ಹೇಳಿರಿ" ಎಂದು ಆ ಕಡೆಯಿಂದ ಮರುತ್ತರ ಬಂತು.

ಅನಂತರ ಉತ್ತರ ಆಟ್ಲಾಂಟಿಕದಲ್ಲಿ ವಿಚಾರಿಸಬೇಕೆಂದೆನಿಸಿತು. "ನ್ಯೂ ಫೌಂಡ್ ಲ್ಯಾಂಡಿನ ಸೇಂಟ್ ಜಾನನ್ನು ಇವರು ತಲುಪಿರಲಿಕ್ಕಿಲ್ಲ"ವೆಂದುಕೊಳ್ಳುತ್ತ, ಆಪರೇಟರ್‌ನನ್ನು ಸಂಪರ್ಕಿಸಿ "ನಾನು ಡಾ|| ಪಟೇಲನ ಜೊತೆ ಮಾತಾಡಬೇಕಾಗಿದೆ" ಎಂದೆ.

ಕೆಲಕ್ಷಣದ ಮೌನದ ಅನಂತರ ಆಪರೇಟರ್ "ನಿಮಗೆ ಬೇಕಾಗಿದ್ದು ಡಾ|| ಡಿ. ಪಿ. ಪಟೇಲರೋ ಅಥವಾ ಡಾ|| ಎ. ಪಿ. ಪಟೇಲರೋ?" ಎಂದು ಕೇಳಿದನು.

ಮೂಲತಃ ರೈತರಾಗಿ ಕೆಲಸ ಮಾಡುತ್ತಿದ್ದ ಗುಜರಾತಿನ ಪಟೇಲರು,ಸರ್ವವ್ಯಾಪಿ

---

ಮೂಲ: ೯೮ ಸೆಪ್ಟೆಂಬರ್ ರೀಡರ್ಸ್ ಡೈಜೆಸ್ಟ್ ಪತ್ರಿಕೆಯ 'ಜಾನ್ ಡೊಡ್' ಅವರ "ಕೀಪಿಂಗ್ ಅಪ್ ವಿತ್ ದಿ ಪಟೇಲ್ಸ್" ಲೇಖನ.

ವರ್ಗವೆನ್ನಿಸುವಷ್ಟರಮಟ್ಟಿಗೆ ಬ್ರಿಟನ್ನಿನಲ್ಲಿ ಬೆಳೆದದ್ದಲ್ಲದೆ, ಪಶ್ಚಿಮದ ಮೂಲೆ ಮೂಲೆಯಲ್ಲಿ ಪಸರಿಸಿದ್ದು ಹೇಗೆ?

ನಾನು ಬ್ರಿಟಿಷ್ ಜನರಲ್ ಮೆಡಿಕಲ್ ಕೌನ್ಸಿಲ್ಲಿನವರನ್ನು ಸಂಪರ್ಕಿಸಿ, ಅವರ ನೊಂದಣಿ ಪುಸ್ತಕದಲ್ಲಿ ಎಷ್ಟು ವೈದ್ಯರು ಪಟೇಲ ಹೆಸರಿನವರಿದ್ದಾರೆಂದು ಕೇಳಿದೆ. ಅವರು ಹೇಳಿದ ಸಂಖ್ಯೆ: ೫೨೧.

ಇನ್ನು ಔಷಧ ತಯಾರಕರೇನಾದರೂ ಇದ್ದಾರೆಯೆ? ಅದಕ್ಕೆ "ಅವರ ಹೆಸರುಗಳು ನಮ್ಮ ನೊಂದಣಿ ಪುಸ್ತಕದಲ್ಲಿ ೧೯ ಪುಟಗಳನ್ನಾವರಿಸಿವೆ. ಅತಿ ಹೆಚ್ಚು ಸಂಖ್ಯೆಯಲ್ಲಿರುವ ಹೆಸರುಗಳೆಂದರೆ ಪಟೇಲರದು" ಎಂದ ಔಷಧ ತಯಾರಿಕಾ ಸಂಘದ ಸದಸ್ಯನೊಬ್ಬ ಉತ್ತರಿಸಿದ. ಪ್ರತಿ ಪುಟದಲ್ಲಿ ೫೫ ಹೆಸರುಗಳಿದ್ದು, ೧೦೦೦ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಔಷಧ ತಯಾರಕರು ಪಟೇಲ ಹೆಸರಿನವರಿದ್ದಾರೆಂದು ತಿಳಿದು ಬಂತು.

ಲೆಕ್ಕ ಪರಿಶೋಧನಾ ಸಂಸ್ಥೆಯಲ್ಲೇನಾದರೂ ಪಟೇಲರು? ಅಲ್ಲಿ ಕೂಡಾ ೨೭೭ ಪಟೇಲ ನಾಮಾಂಕಿತರಿದ್ದು ಅವರ ಸಂಖ್ಯೆ ಬೆಳೆಯುತ್ತಲಿದೆ. ಕಾನೂನು ಕ್ಷೇತ್ರದಲ್ಲಿ ಅವರು ಪಾದಾರ್ಪಣೆ ಮಾಡಿರುವುದು ಮಂದಗತಿಯಲ್ಲಿರಬೇಕು. ಕೇವಲ ೭೧ ಪಟೇಲ ಎಂಬ ಹೆಸರಿನವರು ಕಾನೂನು ಸಲಹೆಗಾರರಾಗಿದ್ದಾರೆ. ಆದರೆ ಅವರಲ್ಲಿ ಈಗ ಏಳು ಜನರು ಬ್ಯಾರಿಸ್ಟರು ನ್ಯಾಯಾಂಗತಜ್ಞರಾಗಿದ್ದಾರೆ. ಈ ಏಳು ಜನರಲ್ಲಿ ಪ್ರಥಮ ಮಹಿಳಾ ಬ್ಯಾರಿಸ್ಟರ್ ಆಗಿರುವ ಗೀತಾ ಪಟೇಲ, ಕುಟುಂಬ ಮತ್ತು ಪೌರನ್ಯಾಯದಲ್ಲಿ ತಜ್ಞೆ.

ಲಂಡನ್ನಿನ ಪ್ರತಿಷ್ಠಿತ ಹಾಗೂ ದುಬಾರಿ ಶಾಲೆಯಾದ ಡಲವಿಚ್ ಕಾಲೇಜಿನ ಮುಖ್ಯ ಉಪಾಧ್ಯಾಯ ಕ್ರಿಸ್ಟೋಫರ್ ಫಿಲ್ಪ್ಸ್, ನೊಂದಣಿ ಪುಸ್ತಕದಲ್ಲಿ ಕಣ್ಣಾಡಿಸುತ್ತ ತನ್ನ ಶಾಲೆಯಲ್ಲಿ ೩೭ ಪಟೇಲ ಹೆಸರಿನ ವಿದ್ಯಾರ್ಥಿಗಳಿದ್ದಾರೆಂದು ಹೇಳುತ್ತಾನೆ. ಇವಕ್ಕೆ ವ್ಯತಿರಿಕ್ತವಾಗಿ ಕೇವಲ ೧೧ ವಿದ್ಯಾರ್ಥಿಗಳು ಸ್ಮಿಥ್ ಹೆಸರಿನವರಿದ್ದಾರೆ. ಲೆಸಿಸ್ಟರಿನ ಶಾಲೆಯಲ್ಲಿ ೧೫೨ ಪಟೇಲ ಹೆಸರಿನ ವಿದ್ಯಾರ್ಥಿಗಳಿದ್ದಾರೆಂದು ಮುಖ್ಯೋಪಾಧ್ಯಾಯ ಸ್ಟೀವ್ ವೈಟನ ಹೇಳಿಕೆ. ಈ ವಿದ್ಯಾರ್ಥಿಗಳು ಗುರಿಸಾಧನೆಗಾಗಿ ಶ್ರಮಿಸುವಂಥವರಾಗಿದ್ದಾರೆಂದು ಹೆಮ್ಮೆ ಪಡುತ್ತಾರೆ. ಇವರಲ್ಲಿ ಪ್ರತಿ ಹತ್ತು ವಿದ್ಯಾರ್ಥಿಗಳಲ್ಲಿ ೯ ವಿದ್ಯಾರ್ಥಿಗಳು ಏಶಿಯಾದವರಾಗಿದ್ದಾರೆ. "ಇವರಲ್ಲಿ ೯೫% ವಿದ್ಯಾರ್ಥಿಗಳಾದರೂ ಉನ್ನತ ಶಿಕ್ಷಣ ಪಡೆಯುವರು" ಎಂದು ವೈಟನ ಅಭಿಪ್ರಾಯ. ಈ ಮಾತಿನ ಅರ್ಥ ಸ್ಪಷ್ಟವಿದೆ. ಪಟೇಲರ ಮುಂದಿನ ಪೀಳಿಗೆಯವರು ಈಗಾಗಲೇ ಬ್ರಿಟಿಷರ ವೃತ್ತಿಯಲ್ಲಿ ತಮ್ಮ ಜಾಲ ಹರಡುತ್ತಿದ್ದಾರೆ.

ಬ್ರಿಟನ್ನಿನಲ್ಲಿ 'ಪಟೇಲ ಕಾರ್ನರ್ ಶಾಪ್' ಮನೆಮಾತಾಗಿದೆ. ಇದರ ಪ್ರಸಿದ್ಧಿಯ ಬಗ್ಗೆ ಹೆಚ್ಚಿಗೆ ತಿಳಿದುಕೊಳ್ಳಲು ನಾನು ರಿಟೇಲ್ ನ್ಯೂಸ್ ಏಜೆಂಟ್ ಎಂಬ ಪತ್ರಿಕೆಯ ಉಪಸಂಪಾದಕ ಕೆವಿನ್ ವ್ಹಿಟಲಾಕನ ಸಹಾಯ ಪಡೆದೆ. ೧೯೭೦ರಲ್ಲಿ ಪೂರ್ವ ಆಫ್ರಿಕಾದಿಂದ ಗಂಟುಮೂಟೆಯೊಂದಿಗೆ ಇಂಗ್ಲೆಂಡಿಗೆ ಬಂದ ಹಳೆಯ ಪೀಳಿಗೆಯ ಅನೇಕ ಹಿರಿಯ ಪಟೇಲರ ಜೊತೆ ಈತನ ಸಂಪರ್ಕವಿದೆ.

"ಇಲ್ಲಿ ಮೊದಲಿನಿಂದಲೂ ಸಮಾಚಾರ ಪತ್ರಿಕೆ ಮಾರುವ ಹೊರ ಅಂಗಡಿಗಳಿವೆ

ಅವುಗಳಲ್ಲಿ ಶೇ. ೬೦ಕ್ಕಿಂತ ಯೆಚ್ಚಿನವು ಏಶಿಯಾದವರವು" ಎಂದು ಅವನು ಹೇಳಿದ. "ಪಟೇಲ ಎಂಬ ಹೆಸರು ಸುಪರಿಚಿತ. ಮಧ್ಯಮ, ಸುಶಿಕ್ಷಿತ ಮತ್ತು ಸಾಹಸಿ ವರ್ಗಗಳಲ್ಲಿ ಪಟೇಲರನ್ನು ಕಾಣಬಹುದು. ಇವರುಗಳಿಂದಾಗಿ ಮೂಲೆಯ ಅಂಗಡಿಗೆ ಹೊಸ ಚೈತನ್ಯ ಬಂದಿದೆ. ಸಾಯಂಕಾಲದ ಸಮಯದಲ್ಲಿ ಹೊರಗೆ ತಿರುಗಾಡುವುದನ್ನು ಪ್ರಾರಂಭಿಸಿದವರಲ್ಲಿ ಅವರೇ ಮೊದಲಿಗರು."

ಪತಿದಾರ (ಪಟೇಲ ಎಂಬ ಹೆಸರು ಬಳಕೆಯಲ್ಲಿ ಬರುವ ಮೊದಲು ಅವರನ್ನು ಈ ಹೆಸರಿನಿಂದ ಕರೆಯಲಾಗುತ್ತಿತ್ತು.) ಸಂಘದ ಮಂಡಳಿಗೆ ೧೧ ಪಟೇಲ ಉಪಸಂಘಗಳು ಸದಸ್ಯತ್ವ ಹೊಂದಿವೆ. ಇದರಲ್ಲಿ ೨ ಲಕ್ಷ ಪಟೇಲರುಗಳು ಬ್ರಿಟನ್ನಿನಲ್ಲಿದ್ದಾರೆ. ಪ್ರತಿಯೊಂದು ಕುಟುಂಬದ ಮೂಲವನ್ನು ಗುಜರಾತಿನ ಹಳ್ಳಿಗಳಲ್ಲಿ ಹುಡುಕಬಹುದಾಗಿದೆ.

ಸಾವಿರಾರು ಪಟೇಲರು ನೂರು ವರ್ಷಗಳಷ್ಟು ಹಿಂದೆ ಬ್ರಿಟಿಷರ ಜೊತೆ ಪೂರ್ವ ಆಫ್ರಿಕಾಕ್ಕೆ ರೈಲುದಾರಿ ಮಾಡುವುದಕ್ಕಾಗಿ ಹೋದರು. ಹೀಗೆ ಹೋದವರು ಅಲ್ಲಿಯೇ ಉಳಿದುಕೊಂಡು ವ್ಯಾಪಾರ ಮತ್ತು ಆಡಳಿತ ವರ್ಗದಲ್ಲಿ ಸೇರಿಕೊಂಡರು. ಮುಂದೆ ೧೯೭೨ರಲ್ಲಿ ಇದಿ ಅಮೀನನ ಅಧಿಕಾರದ ಸಮಯದಲ್ಲಿ ಇವರನ್ನು ಉಗಾಂಡಾದಿಂದ ಓಡಿಸಲಾಯಿತು. ಅದಕ್ಕಿಂತ ಸ್ವಲ್ಪ ಮೊದಲು ಕಿನ್ಯಾದಿಂದಲೂ ಅವರನ್ನು ಹೊರಹಾಕಲಾಯಿತು. ಬ್ರಿಟಿಷ್ ಪಾಸ್‌ಪೋರ್ಟ್ ಹೊಂದಿದ್ದ ೧,೪೦,೦೦೦ಕ್ಕೂ ಹೆಚ್ಚು ಜನರು ಬ್ರಿಟನ್ನಿಗೆ ಬಂದು, ಈ ಮೊದಲು ೧೯೫೦ ಮತ್ತು ೧೯೬೦ರ ದಶಕದಲ್ಲಿ ಬ್ರಿಟನ್ನಿಗೆ ಬಂದು ನೆಲೆಸಿದ್ದ ಹಿಂದೂಗಳನ್ನು ಸೇರಿಕೊಂಡರು.

ಸುಮಾರು ೭೫೦೦೦ ಜನರು ಪ್ರಾರ್ಥನೆಗೆ ಬರುವ ಮಂದಿರದಲ್ಲಿರುವ ಸಮುದಾಯದ ಅಧ್ಯಕ್ಷ ದುಲ್ಲಾಭಾಯಿ ಪಟೇಲನಿಗೆ ನಾನು "ಹಾಗಾದರೆ ಆಫ್ರಿಕಾದ ಪಟೇಲರುಗಳಿಗೆ ಇಲ್ಲಿನ ಪಟೇಲರ ಪರಿಚಯವಿತ್ತೆ?" ಎಂದು ಕೇಳಿದೆ. "ನಮಗೆ ಯಾವಾಗಲೂ ಭಾರತದೊಡನೆ ಸಂಪರ್ಕವಿತ್ತು. ನನ್ನದೇ ಆದ ಕುಟುಂಬ ಇಲ್ಲಿರಲಿಲ್ಲ. ಆದರೆ ನನ್ನ ಅನೇಕ ಗೆಳೆಯರು ಇಲ್ಲಿದ್ದರು. ನಮ್ಮ ಗ್ರಾಮ ಪದ್ಧತಿ ಬಹಳ ಗಾಢವಾದದ್ದು. ಯಾಕೆಂದರೆ ರೈತರಾಗಿದ್ದೆವು" ಎಂದು ಉತ್ತರಿಸಿದ. ಪಟೇಲ ಎಂಬುದು ಮೊಘಲರಿತ್ತ ಬಿರುದು. ಗ್ರಾಮಸ್ಥರ ಮಧ್ಯದ ಜಗಳಗಳನ್ನು ಬಗೆಹರಿಸುವುದಕ್ಕಾಗಿ ಇಂಥ ಬಿರುದನ್ನು ನೀಡಲಾಗುತ್ತಿತ್ತು. ಆದ್ದರಿಂದ 'ಪಟೇಲ' ಎಂದರೆ ನ್ಯಾಯಾಧಿಪತಿ ಅಥವಾ ಆಡಳಿತಾಧಿಕಾರಿ ಹಾಗೂ ರೈತ ಎಂದು ಅವನು ಹೇಳಿದನು.

ಪಟೇಲರ ಸಹಜಪ್ರವೃತ್ತಿ, ನಿರ್ವಹಣೆ ಮತ್ತು ಸಂಧಾನ ಚಾತುರ್ಯದ ಬಗ್ಗೆ ಮೊಘಲರಿಗೆ ಚೆನ್ನಾಗಿ ತಿಳಿದಿತ್ತು. ಪಟೇಲರ ಬಗ್ಗೆ ವಿನೋದ ಪ್ರಸಂಗ ಕೂಡಾ ಇದೆ. ಒಬ್ಬ ಮಹಿಳೆಯ ಮೇಲೆ ಕೆಲವು ಮೊಸಳೆಗಳು ಧಾಳಿ ಮಾಡುತ್ತಿದ್ದುದನ್ನು ಒಬ್ಬ ಪಟೇಲ ಕಂಡ. ಕೂಡಲೇ ಅವನು ನೀರಿನಲ್ಲಿ ಹಾರಿ ಅವುಗಳೊಡನೆ ಹೋರಾಡಿ ಅವಳನ್ನು ಪಾರು ಮಾಡಿ ದಂಡೆಗೆ ತಂದು ಮಲಗಿಸುತ್ತಿದ್ದಂತೆ, ಆ ಮಹಿಳೆ ಎದ್ದು ಅವನಿಗೆ ಹೊಡೆದಳು. ಆಗ ಅವನು "ನಾನು ಒಬ್ಬ ಪಟೇಲ....

ನಿನ್ನನ್ನು ಪಾರು ಮಾಡಿದೆ" ಎಂದನು. ಕೂಡಲೇ ಅವರು "ನೀನೊಬ್ಬ ಮೋಸಗಾರ ....ನೀನೊಬ್ಬ ಪಟೇಲನಾಗಿದ್ದು ನಿಜವಿದ್ದಿದ್ದರೆ ನೀನೆಂದೂ ಹೋರಾಡುತ್ತಿರಲಿಲ್ಲ" ಎಂದು ಹೇಳಿದಳು.

೧೯೬೧ರಲ್ಲಿ ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿಯಾಗಿ ಇಂಗ್ಲೆಂಡಿಗೆ ಬಂದ ಅರವಿಂದ ಭಾಯಿ ಪಟೇಲನ ಪ್ರಕಾರ ೧೯೩೦ರಲ್ಲಿ ಲಂಡನ್ನಿನ ವಾಯುವ್ಯ ಭಾಗದಲ್ಲಿ ಆಸ್ತಿವ್ಯಾಪಾರದಲ್ಲಿ ತೊಡಗಿಸಿಕೊಂಡ ಡಾ॥ ಪಟೇಲ ಎಂಬ ವ್ಯಕ್ತಿಯೇ ಮೊದಲ ಪಟೇಲ ಎಂದು ತಿಳಿಯಿತು. ಆದರೆ ೭೧ ವರ್ಷದ ಜೀವನಜಿ ಪಟೇಲನೇ ಮೊದಲ ಆಧುನಿಕ ಪಟೇಲ ಎಂದು ನಂಬಲಾಗಿದೆ.

ಜೀವನಜಿ ಪಟೇಲ ತನ್ನ ತಂದೆ ಜೊತೆ ಜಗಳವಾಡಿ' ನೆರೆಯಲ್ಲಿದ್ದವರಿಂದ ೩೦೦೦ ರೂಪಾಯಿ ಸಾಲ ಪಡೆದು ೧೯೫೪ರಲ್ಲಿ ಇಂಗ್ಲೆಂಡಿಗೆ ಬಂದಾಗ ಆತನ ಜೇಬಿನಲ್ಲಿ £ ೩ನಷ್ಟು ಮಾತ್ರ ಹಣವಿತ್ತು. ಇಳಿದುಕೊಳ್ಳಲು ಸ್ಥಳವಿರಲಿಲ್ಲ. ಲಂಡನ್ನಿನ ಪೂರ್ವ ಭಾಗದಲ್ಲೊಬ್ಬರ ಮನೆಯ ಬಾಗಿಲು ತಟ್ಟಿದ. ಒಬ್ಬ ಮಹಿಳೆ ಬಾಗಿಲು ತೆರೆದಳು. ಪಟೇಲ ತನ್ನ ಎರಡೂ ಕೈ ಜೋಡಿಸಿ ಬಾಗಿ ತನಗೆ ತಿಳಿದಿದ್ದ ಕೆಲವೇ ಇಂಗ್ಲಿಷ್ ಶಬ್ದಗಳನ್ನು ಉಚ್ಚರಿಸಿದನು: "ರೂಮ್, ಬೆಡ್, ಸ್ಲೀಪ್." ಆ ಮಹಿಳೆ ತನ್ನ ಗಂಡನನ್ನು ಕರೆದಳು. ಆ ವ್ಯಕ್ತಿ ಪಟೇಲನನ್ನು ಒಳಗೆ ಕರೆದನು. ಅವನ ಹೆಸರು ಜಾರ್ಜ್ ಮತ್ತು ಬೆಟ್ಟಿ ಎಂದಿದ್ದುದು ಅವನಿಗೆ ನೆನಪಿದೆ. ಅವನಿಗೆ ಊಟ ಕೊಟ್ಟರು. ಸ್ಥಳೀಯ ಸಮಾಚಾರ ಪತ್ರಿಕೆಯನ್ನು ತೋರಿಸಿದರು. ಆ ಊರಲ್ಲಿ ಕೋಣೆಗಳು ಬಾಡಿಗೆಗೆ ದೊರೆಯುವವೆಂಬ ಜಾಹಿರಾತುಗಳನ್ನು ನೋಡಿ ಅವರನ್ನು ದೂರವಾಣಿಯ ಮೂಲಕ ಸಂಪರ್ಕಿಸಿದರು. ಆನಂತರ ತಮ್ಮ ಮೋಟಾರಿನಲ್ಲಿ ಕೂಡಿಸಿಕೊಂಡು ಕೋಣೆಗಳನ್ನು ನೋಡಿ ಬಂದರು. ವಾರಕ್ಕೆ ೧೫ ಶಿಲಿಂಗ್ ಬಾಡಿಗೆಯ ಒಂದು ಕೋಣೆ ಅವನಿಗೆ ಸಿಕ್ಕಿತು. ಮರುದಿನ ಪೀಠೋಪಕರಣ ತಯಾರಿಸುವ ಕಾರ್ಖಾನೆಯಲ್ಲಿ ಕೆಲಸ ಮಾಡಹತ್ತಿದ. ಆಗ ಅವನಿಗೆ ದೊರೆಯುತ್ತಿದ್ದ ಕೂಲಿ ಹಣ £ ೭.

ಈಗ ಪಟೇಲ ಉಪನಗರದ ಒಂದು ವಿಶಾಲ ಮನೆಯಲ್ಲಿ ತನ್ನ ಹೆಂಡತಿ, ಮಗ, ಸೊಸೆ ಮತ್ತು ಅವರ ಮಕ್ಕಳ ಜೊತೆ ವಾಸಿಸುತ್ತಿದ್ದಾನೆ. ಈ ಮನೆಯಲ್ಲಿ ನಾಲ್ಕು ಮಲಗುವ ಕೋಣೆಗಳಿವೆ. ಈ ಓಣಿಗೆ ಹಿಂದೆ ಗಾಂಧೀಜಿ ಬಂದಿದ್ದರೆಂಬ ಕಾರಣಕ್ಕಾಗಿ, ಈ ಮನೆಯ ವಾಸದ ಕೋಣೆ ಪವಿತ್ರಸ್ಥಳವೆನಿಸಿಕೊಂಡಿದೆ. (ಈತನು ಮಹಾತ್ಮಾ ಗಾಂಧೀ ಮೆಮೋರಿಯಲ್ ಟ್ರಸ್ಟಿನ ಅಧ್ಯಕ್ಷನಾಗಿರುವನು). ಪುಂಡರ ಕಾಟ, ಮಾದಕ ವಸ್ತುಗಳು ಮತ್ತು ಅಪರಾಧಗಳಿಂದ ಮುಕ್ತವಾದ ಸುಖೀ ರಾಜ್ಯದ ಕನಸು ಕಾಣುತ್ತಿದ್ದ ಆ ದಿನಗಳನ್ನು ನೆನೆಯುತ್ತಿದ್ದಂತೆ ಅವನ ಕಣ್ಣು ಮಂಜಾಗುತ್ತವೆ. "ನಾನು ಈ ದೇಶ ಮತ್ತು ಇಲ್ಲಿನ ಜನರನ್ನು ಪ್ರೀತಿಸುತ್ತೇನೆ." ಎಂದು ನಿಸ್ಸಂಕೋಚವಾಗಿ ಹೇಳಿ ತನ್ನ ಪ್ರೀತಿಯನ್ನು ವ್ಯಕ್ತಪಡಿಸುತ್ತಾನೆ.

ಇಂಗ್ಲೆಂಡಿಗೆ ಬಂದು ಆರು ತಿಂಗಳಾಗುವಷ್ಟರಲ್ಲಿ ಈ ಪಟೇಲನಿಗೆ ಏಶಿಯನ್ ದಾಯಿಯೊಬ್ಬಳ ಪರಿಚಯವಾಯಿತು. "ನನಗೆ

ಅನೇಕ ಗೆಳೆಯರಿದ್ದರೆಂಬುದು ಮುಖ್ಯವೆನಿಸ ಲಿಲ್ಲ. ಕ್ರಿಸ್‌ಮಸ್ ಹಬ್ಬಕ್ಕೆ ಜಾರ್ಜ್ ಮತ್ತು ಜೆಟ್ಟಿ ನನ್ನನ್ನು ಊಟಕ್ಕೆ ಆಹ್ವಾನಿಸಿದರು" ಎಂದೆನ್ನುತ್ತಾನೆ. ಕೊನೆಗೂ ಪಟೇಲ ತನ್ನ ಸ್ವಂತ ಮುದ್ರಣ ವ್ಯವಹಾರ ಪ್ರಾರಂಭಿಸಿದನು. ಇತ್ತೀಚೆಗೆ ಬಂದು ನೆಲೆಸಿದ ಪಟೇಲರುಗಳ ಬಗ್ಗೆ ಅವನಿಗೆ ಅತಿಯಾದ ತಿರಸ್ಕಾರ: "ಅವರೆಲ್ಲ ಐದು ನಿಮಿಷಗಳಲ್ಲಿ ಕೋಟ್ಯಾಧೀಶರಾಗಬೇಕು ಎನ್ನುತ್ತಾರೆ." "ಜನರು ಯಾವಾಗಲೂ ತಾವು ದೇಶಕ್ಕಾಗಿ ಏನು ಮಾಡಬಲ್ಲೆವೆಂಬುದನ್ನು ಕೇಳುವುದು ಬಿಟ್ಟು, ದೇಶ ತಮಗಾಗಿ ಏನು ಮಾಡುತ್ತದೆಂದು ಕೇಳಬಾರದು" ಎಂಬುದೇ ಅವನ ನಿಲುವು.

ಲೈಸಿಸ್ಟರಿನಲ್ಲಿ ವ್ಯಾಪಕವಾಗಿರುವ ಪಟೇಲ ಪ್ರಭಾವವನ್ನು ಆ ನಗರದಲ್ಲೆಲ್ಲಾ ಗುರುತಿಸಬಹುದಾಗಿದೆ. ರೀಟಾ ಪಟೇಲ "ಬೆಲ್ ಗ್ರೇವ್ ಬಹೆನೊ" ಎಂಬ ಏಶಿಯನ್ ಮಹಿಳಾ ಸಂಘ ನಡೆಸುತ್ತಾಳೆ. ಭಾವೇಶ ಪಟೇಲ ಒಂದು ಸಂಜೆ ಪತ್ರಿಕೆಯ ಏಶಿಯನ್ ಸಂಪುಟದ ಸಂಪಾದಕತ್ವ ನೋಡಿಕೊಳ್ಳುತ್ತಿದ್ದಾನೆ; ವಿಜಯ ಪಟೇಲ ಪುರಸಭೆಯ ಸದಸ್ಯನಾಗಿದ್ದಾನೆ.

ಚೈತನ್ಯದ ಚಿಲುಮೆಯಾಗಿರುವ ೨೬ ವರ್ಷದ ಜ್ಯೋತಿ ಪಟೇಲ ನಾಟಕ ಬರೆಯುತ್ತಾಳೆ. ಮೊದಲು ಅವಳು ದೂರದರ್ಶನಕ್ಕೂ ಸಾಹಿತ್ಯ ರಚಿಸಿದ್ದುಂಟು. ಇವಳು ಬ್ರಿಟನ್ನಿನಲ್ಲಿ ಹುಟ್ಟಿದ ಹೊಸ ಪೀಳಿಗೆಯ ಪ್ರತಿನಿಧಿಯಾಗಿದ್ದಾಳೆ. ಪಟೇಲ ಕುಟುಂಬಗಳಲ್ಲಿರುವ ಉಸಿರುಗಟ್ಟುವ ವಾತಾವರಣದಿಂದ ಹೊರಗೆ ಬಂದು ತಮ್ಮ ಸ್ವಾತಂತ್ರ್ಯ ಸ್ಥಾಪಿಸಬೇಕೆಂಬುದೇ ಈ ಹೊಸಬರ ನಿಲುವು. "ಪಟೇಲರಿಗೆ ಹಿಂದಿನಿಂದ ಚೆನ್ನಾಗಿ ಒದ್ದು ಮುಂದೆ ತಳ್ಳಬೇಕಾಗಿದೆ" ಎಂದು ಜ್ಯೋತಿ ಹೇಳುತ್ತಾಳೆ. "ಅವರು ಎಲ್ಲವನ್ನು ಸಹಜವಾಗಿ ಸ್ವೀಕರಿಸುತ್ತಾರೆ. ನಾನು ಲೈಸಿಸ್ಟರಿನ ನನ್ನ ಭಾಗಕ್ಕೆ ಮರಳಿಹೋಗಿ ಅಲ್ಲಿನ ಹುಡುಗಿಯರಿಗೆ 'ನೀವೆಲ್ಲಿ ಕೆಲಸ ಮಾಡುತ್ತೀರಿ?' ಎಂದು ಕೇಳಿದಾಗ ಅವರೆಲ್ಲರೂ 'ವಾಕರ ಕ್ರಿಸ್ಪ್ಸ' ಎನ್ನುತ್ತಾರೆ. ವಾಕರ್ಸನಲ್ಲಿ ಕೆಲಸ ಮಾಡುವವರಲ್ಲಿ ಶೇ. ೯೦ ಭಾಗ ಏಶಿಯನ್ನರಿದ್ದಾರೆ. ಅದರಲ್ಲಿ ಶೇ. ೬೦ ಪಟೇಲರುಗಳು."

ಬರವಣಿಗೆ ಮತ್ತು ಪ್ರದರ್ಶನ ಕಲೆಗಳಿಗೂ ಪಟೇಲರಿಗೂ ನಂಟು ಕಡಿಮೆ. ಅಲ್ಲಿನ ಗುಜರಾತಿ ನಾಟಕ ಸಂಘ ಇದಕ್ಕೆ ಅಪವಾದ. ಉತ್ತರ ಲಂಡನ್ನಿನ ಬ್ರಿಟಿಷ್ ಏಶಿಯನ್ ಥಿಯೇಟರಿನ ಸಂಸ್ಥಾಪಕ ಹಾಗೂ ನಟರಾಜಪಟೇಲ ತನಗೆ ನಾಟಕ ಶಾಲೆಯಲ್ಲೊಂದು ಅವಕಾಶ ಸಿಕ್ಕಾಗ ಮನೆಬಿಟ್ಟು ಓಡಿಹೋದನು. ನಾಟಕದ ಗೀಳು ಅವನಿಗೆ ಅಂಟಿಕೊಂಡಿದೆಯೆಂದು ಅವನ ತಾಯಿಗೆ ತಿಳಿದದ್ದು ಅವನು ಮನೆಯಿಂದ ಓಡಿಹೋದಾಗಲೇ. ನಟನೆಯನ್ನು ಪೂರ್ಣಾವಧಿಯ ವೃತ್ತಿಯಾಗಿ ಮಾಡಿಕೊಂಡ ಕೆಲವೇ ಅಲ್ಲಿನ ಪಟೇಲರುಗಳಲ್ಲಿ ರಾಜ ಒಬ್ಬನು. ಈತನ ಮಗ ಸರಫರಾಜ (೧೫) ಅನೇಕಸಲ ಟಿ ವಿ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಂಡದ್ದುಂಟು.

"ಪಟೇಲರು ಸಲಹೆ ವಕೀಲರು, ಡಾಕ್ಟರು ಮತ್ತು ಲೆಕ್ಕಪರಿಶೋಧಕರಾಗಬಯಸುತ್ತಾರೆ. ದೊಡ್ಡ ದೊಡ್ಡ ವ್ಯವಹಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಬಹಳಷ್ಟು


ಗಳಿಸಬೇಕೆನ್ನುತ್ತಾರೆ. ಒಂದು ಅಂಶ ಮಾತ್ರ ಸ್ಪಷ್ಟ : ಮುಂದಿನ ಪೀಳಿಗೆಯವರು ಹಣ್ಣಿನ ಬುಟ್ಟಿ ಹೊರುವುದಿಲ್ಲ"ವೆಂದು ಅವರು ಹೇಳುತ್ತಾರೆ.

ಅದೇನೆ ಇರಲಿ, ಆ ಮೂಲೆಯ ಅಂಗಡಿ ಸೂಪರ್ ಮಾರ್ಕೆಟ್ ಜೊತೆ ಸ್ಪರ್ಧಿಸಬೇಕಾಗಿದೆ. ಅನೇಕ ಪಟೇಲರುಗಳು ವಿದೇಶಗಳಲ್ಲಿ ವ್ಯಾಪಾರದ ಅವಕಾಶಗಳಿಗಾಗಿ ಕಾಯುತ್ತಿದ್ದಾರೆ. ಕೆಲವರು ಅಮೆರಿಕೆಗೆ (ಅಲ್ಲಿ ಈಗಾಗಲೇ ೫೦,೦೦೦ದಷ್ಟು ಪಟೇಲರಿದ್ದಾರೆ) ಮತ್ತೆ ಕೆಲವರು ಮರಳಿ ಉಗಾಂಡಾಕ್ಕೆ ಹೋಗಬೇಕೆಂದುಕೊಳ್ಳುತ್ತಿದ್ದಾರೆ. ಇನ್ನೂ ಕೆಲವರು ಯೂರೋಪಿನಲ್ಲಿಯೇ ದೊರೆಯುವ ಅವಕಾಶಗಳ ಬಗ್ಗೆ ಲೆಕ್ಕ ಹಾಕುತ್ತಿದ್ದಾರೆ.

ನಾನು ದೂರವಾಣಿಯ ಅಂತರ-ರಾಷ್ಟ್ರೀಯ ಮಾರ್ಗದರ್ಶಕನನ್ನು ಸಂಪರ್ಕಿಸಿ "ನನಗೆ ಫ್ರ್ಯಾಂಕ್‌ಫರ್ಟನಲ್ಲಿರುವ ಪಟೇಲನ ಜೊತೆ ಮಾತನಾಡಬೇಕಾಗಿದೆ" ಎಂದೆ.

"ಯಾವ ಪಟೇಲ?" ಎಂದು ಕೇಳಿದ ಮಾರ್ಗದರ್ಶಿ "ನನ್ನ ಪಟ್ಟಿಯಲ್ಲಿ ಅಂಥ ಏಳು ಹೆಸರಿವೆ" ಎಂದನು.

---



ಪ್ರಾಣಿಗಳನ್ನು ಹಿಂಸಿಸುವವನು ಪೂಜ್ಯನಲ್ಲ. ಎಲ್ಲಾ ಪ್ರಾಣಿಗಳನ್ನು ಪ್ರೀತಿಸಿ ಅಹಿಂಸೆಯನ್ನು ಆಚರಿಸುವವನೇ ಪೂಜ್ಯನು.

ಇತರರನ್ನು ನೋಯಿಸುವ ಕೆಲಸದಲ್ಲಿ ಎಂದಿಗೂ ತೊಡಗಬಾರದು. ಆ ನೋವಿನ ಅರಿವು ನಿನಗಿರುವಂತೆ ಅವರಿಗೂ ವೇದನೆಯನ್ನು ಉಂಟುಮಾಡುತ್ತದೆ ಎಂಬುದನ್ನು ಊಹಿಸಿಕೊ.

—ಬುದ್ಧ

# ವೈದ್ಯಕೀಯ ಉಪಚಾರದಲ್ಲಿ—ಜಿಗಣೆ

**ಡಾ|| ಸ. ಜ. ನಾಗಲೋಟಿಮಠ**

೨೫ 'ಶಾಂತಾ' ಬಸವ ಕಾಲನಿ
ಬೆಳಗಾವಿ-೫೯೦ ೦೧೦

**ಜಿಗಣೆಯೆಂಥ ಮನುಷ್ಯ**

ನಾವು ಯಾರನ್ನಾದರೂ ಬೈಯ್ಯ ಬೇಕಾದರೆ "ಅವನು ಒಂದು ಜಿಗಣೆ. ಎಚ್ಚರಿಕೆಯಿಂದ ಇರು" ಎಂದು ಹೇಳು ತ್ತೇವೆ. ಆಗ ಸಾಮಾನ್ಯವಾಗಿ ಆಗುವ ಅರ್ಥ ಎಂದರೆ ಕೆಟ್ಟ ಮನುಷ್ಯ ಎಂದಾಗುವುದು. ಜಿಗಣೆಯನ್ನು ಎಷ್ಟು ಜನ ನೋಡಿರುವರು? ಮಲೆನಾಡಿನಲ್ಲಿರುವವರಿಗೆ, ಕಾಡಿನ ಅಂಚಿ ನಲ್ಲಿ ಬದುಕುವವರಿಗೆ ಜಿಗಣೆ ಪರಿಚಿತ. ಬಿಜಾಪುರ, ಬಳ್ಳಾರಿ, ರಾಯಚೂರು ಗಳಂಥ ಒಣ ಪ್ರದೇಶದವರಿಗೆ ಜಿಗಣೆ ಭೇಟಿ ಯಾಗಿರುವುದಿಲ್ಲ. ಅದನ್ನು ದೂರದಿಂದ ಕಂಡರೆ, ಅದು ಚಲಿಸುವ ರೀತಿ ನೋಡಿ ದರೆ ಭಯ ಬರುತ್ತದೆ. ಅಕಸ್ಮಾತ್ತಾಗಿ ಅದರಿಂದ ಕಚ್ಚಿಸಿಕೊಳ್ಳುವ ಭಾಗ್ಯ ಸಿಕ್ಕರೆ ತಿಳಿಯಲು ಸೀಮೆಯುವರಿಗೆ ಅರ್ಧ ಜೀವ ಹೋದಂತೆಯೇ ಸರಿ.

**ಜಿಗಣೆ ಎಂದರೆ ಏನು?**

ಜಿಗಣೆ ಒಂದು ಜೀವಿ. ಆಂಗ್ಲ ಭಾಷೆ ಯಲ್ಲಿ ಇದನ್ನು 'ಲೀಚ್' ಎಂದು ಕರೆಯು ತ್ತಾರೆ. ಕಂದು ಬಣ್ಣ ಇರುತ್ತದೆ. ನೋಡಲು ಮೊದಲು ಚಿಕ್ಕ ದಾರದಂತೆ ಕಾಣುವುದು. ರಕ್ತ ಹೀರಿದಂತೆ ಅದರ ದೇಹ ದೊಡ್ಡ ದಾಗುತ್ತದೆ. ಉಬ್ಬುತ್ತದೆ. ರಕ್ತ ಹೀರಿದ ಮೇಲೆ ನೋಡಲು ಅದು ನಮ್ಮ ಬೆರಳಿನ ಗಾತ್ರಕ್ಕೆ ಬರುವುದು. ಮುಟ್ಟಲು ಬಹಳ ಮೃದುವಾಗಿರುತ್ತದೆ. ಅದು ಉಳಿದ ಹುಳು ಗಳಂತೆ ಹೊಟ್ಟೆ ಹೊಸೆಯುತ್ತ ಹೋಗುವು ದಿಲ್ಲ. ಆದರ ಚಲನೆಯನ್ನು ನೋಡುವುದೇ ಒಂದು ಮೋಜು. ಬಾಲದ ತುದಿಯ ಮೇಲೆ ನಿಂತು ತಲೆಯನ್ನು ಎತ್ತಿ ಅತ್ತಿತ್ತ ಹೊರಳಿ ಹೋಗಬೇಕಾದ ದಿಕ್ಕನ್ನು ನಿಶ್ಚಯಿಸಿ ಆ ಕಡೆಗೆ ವಾಲುತ್ತದೆ. ಈಗ ಬಾಯಿಂದ ನೆಲ ವನ್ನಾಗಲೀ ಅಥವಾ ಪ್ರಾಣಿಯ ಚರ್ಮ ವನ್ನಾಗಲೀ ಕಚ್ಚಿ ಬಾಲದ ಹಿಡಿತ ಸಡಿಲ ಗೊಳಿಸಿ, ಗಾಳಿಯಲ್ಲಿ ಅದನ್ನು ಮೇಲಕ್ಕೆ ಎತ್ತಿ ವಾಲಿಕೊಂಡು ಮಣಿದು ಮುಂದಿನ ಹೆಜ್ಜೆಯನ್ನು ಇಡುವುದು. ಅದು ರಕ್ತ ಹೀರುವುದು ಬಾಯಿಯ ಮೂಲಕ. ಅದರ ಬಾಯಿ ಬಟ್ಟಲಿನಂತಿರುವುದು. ಬಾಯಿ ಯಲ್ಲಿ ಶಕ್ತಿಯುತವಾದ ಹಲ್ಲುಗಳಿವೆ. ಜೋರಿನಿಂದ ಹೀರುವ ಶಕ್ತಿ ಪಡೆದ ಒಂದು ಹೀರಿತ-ಇರುತ್ತದೆ. ಹಲ್ಲುಗಳಿಂದ ಕಚ್ಚಿ ನಮ್ಮ ಅಥವಾ ಪ್ರಾಣಿಗಳ ತ್ವಚೆಯಲ್ಲಿ ಗಾಯ ಮಾಡುತ್ತದೆ. ಆ ಗಾಯದಲ್ಲಿ ಮೊದಲು ತನ್ನ ಜೊಲ್ಲನ್ನು ಉಗುಳುತ್ತದೆ.

ಈ ಜೊಲ್ಲಿನಲ್ಲಿ ಮರಗಟ್ಟಿಸುವಂಥ ರಾಸಾಯನಿಕ ಇರುತ್ತದೆ. ಅಲ್ಲದೆ ರಕ್ತವನ್ನು ಹೆಪ್ಪುಗಟ್ಟಿಸದಂಥ ಪದಾರ್ಥ ಇರುತ್ತದೆ. ಕಾರಣವೇ ಜಿಗಣೆ ನಮಗೆ ನೋವಾಗದಂತೆ ರಕ್ತ ಹೀರುತ್ತದೆ. ಅದು ತನ್ನ ಹೊಟ್ಟೆ ತುಂಬಿದ ಮೇಲೆ ಕಳಚಿ–ಬೀಳುತ್ತದೆ. ತನ್ನ ವಾಸ ಸ್ಥಾನಕ್ಕೆ ಮರಳುತ್ತದೆ. ಆದರೆ ಅದು ಕಚ್ಚಿದ ಸ್ಥಳದಿಂದ ರಕ್ತ ಸೋರುತ್ತಲೇ ಹೋಗುವುದು. ಆ ಭಾಗದಲ್ಲಿ ಏನೋ ಹಸಿ-ಹಸಿ ಎನಿಸುವುದು. ನೋಡಿದರೆ ನಮಗೆ ಅರಿವಾಗದಂತೆ ರಕ್ತ ಒಸರುತ್ತಲೇ ಇರುವುದು. ಆ ಕಚ್ಚಿದ ಭಾಗದ ಮೇಲೆ ಹಸಿ ಸುಣ್ಣವನ್ನು ಒರೆಸಿದರೆ ರಕ್ತ ಸೋರುವಿಕೆ ನಿಲ್ಲುವುದು. ಜಿಗಣೆ ರಕ್ತ ಹೀರುವಾಗ ಅದನ್ನು ಬಿಡಿಸಲು ಜಾಣತನ ಬೇಕು. ಹೆದರಿ ಜೋರಾಗಿ ಜಗ್ಗಿದರೆ ಅದು ಹರಿದು ತುಂಡಾಗಬಹುದು ಆದರೆ ಕಚ್ಚಿದ ಭಾಗವನ್ನು ಬಿಡುವುದಿಲ್ಲ. ಅದನ್ನು ಬಿಡಿಸಲು ಅದಕ್ಕೆ ಬೆಂಕಿಯ ಬಿಸಿ ಕೊಡಬೇಕು. ಕೆಂಡದಿಂದ ಸುಡಬೇಕು. ಬಿಸಿಗೆ ಬಾಯಿಬಿಟ್ಟು ಕಳಚಿಕೊಳ್ಳುವುದು.

ತಂಬಾಕದ ಕೆಡಕು ಜಿಗಣೆಗೂ ಗೊತ್ತು. ತಂಬಾಕದ ನೀರನ್ನು ಅದರ ಮೇಲೆ ಬಿಟ್ಟರೆ ಅಲ್ಲಿಂದ ಅದು ಬಿಟ್ಟು ಬೇರೆ ಕಡೆಗೆ ಹೋಗುವುದು. ಮಾನವರಾದ ನಾವೋ ಅಂಥ ತಂಬಾಕನ್ನು ಅಪ್ಪಿಕೊಂಡು. ಖುಷಿ ಪಡುತ್ತೇವೆ. ಮೊದಲು ನಗುತ್ತೇವೆ. ಅನಂತರ ಕೆಮ್ಮುತ್ತೇವೆ. ಆ ಮೇಲೆ ರಕ್ತಕಾರಿ, ಕ್ಯಾನ್ಸರ್ ಹುಣ್ಣಿನಿಂದ ಸಾಯುತ್ತೇವೆ. ತಂಬಾಕು ಜಗಿಯುತ್ತ ಅದರ ವಿಷವನ್ನು ಸವಿಯುತ್ತೇವೆ. ಅನಂತರ ಬಾಯಿಯ, ಅನ್ನನಾಳದ, ಒಳಾಂಗಗಳ ಕ್ಯಾನ್ಸರ್ ಹುಟ್ಟಿ ಜಗಿದವನನ್ನೇ ಜಗಿದು ಕೊಲ್ಲುತ್ತದೆ. ಇದು ಎಲ್ಲರಿಗೂ ಗೊತ್ತಿದ್ದ ಸಂಗತಿಯೇ ಆದರೆ ನಾವೇನು ತಂಬಾಕಕ್ಕೆ ಹೆದರುವಂಥ ಜಿಗಣೆಗಳೇ? ನಾವು ಧೈರ್ಯವಂತ ಮಾನವರು ಸತ್ತರೂ ಚಿಂತೆಯಿಲ್ಲ ತಂಬಾಕನ್ನು ಬಿಡಲಾರೆವು.

## ಜಿಗೆಣೆ ಬುದ್ಧಿವಂತ ವೈದ್ಯ :

ಇದನ್ನು ಎರಡು ಅರ್ಥದಲ್ಲಿ ಹೇಳಿದರೂ ಸರಿ. ಮೊದಲನೆಯ ಅರ್ಥ ಎಂದರೆ ವೈದ್ಯನು ರೋಗಿಯ ಹಣವನ್ನು ನೋವಾಗದಂತೆ ಹೀರುತ್ತಾನೆ ಎಂದು. ಎರಡನೆಯದು ತನ್ನ ಬುದ್ಧಿಶಕ್ತಿಯಿಂದ-ಕುಶಲತೆಯಿಂದ ಉಪಚರಿಸಿ ರೋಗಿಯ ರೋಗವನ್ನು ಗುಣಪಡಿಸುತ್ತಾನೆಂದು. ನಮಗೆ ಪ್ರಸ್ತುತ-ಇರುವುದು ಚಿಕಿತ್ಸಕ ವೈದ್ಯ. ಅದು ಹೇಗೆ? ಎನ್ನಬಹುದು. ಸಂಕ್ಷಿಪ್ತ ವಿವರವನ್ನು ಕೆಳಗಿನಂತೆ ಕೊಡಬಹುದು.

## ಜಿಗಣೆ–ಚಿಕಿತ್ಸೆ :

ನಮ್ಮ ಪೂರ್ವಜರಿಗೆ ಇದರ ಮಹತ್ವ ತಿಳಿದಿತ್ತು. ಆಯುರ್ವೇದದಲ್ಲಿ ಜಿಗಣೆಯ ಚಿಕಿತ್ಸೆಯೇ ಒಂದು ದೊಡ್ಡ ವಿಷಯ. ತೋರಿಕೆಗೆ ಜಿಗಣೆ ರಕ್ತ ಹೀರುತ್ತದೆ. ಆದರೆ ಅದು ಕೇವಲ ರಕ್ತವನ್ನು ರಕ್ತವಾಹಿನಿಗಳಿಂದ ನೇರವಾಗಿ ಹೀರದೆ ಅಂಗಾಂಶದಲ್ಲಿಯ ದ್ರವವನ್ನೂ ಹೀರುತ್ತದೆ. ಕಾರಣ ಈ ದ್ರವದಲ್ಲಿ ಇದ್ದ ವಿಷಕಾರಿ ಪದಾರ್ಥಗಳು ಜಿಗಣೆಯ ಹೊಟ್ಟೆ ಸೇರುತ್ತವೆ. ಆ ಭಾಗದಲ್ಲಿ ಮರೆತು ನಿಂತ-ಅಂಗಾಂಶ ದ್ರವವೂ ಕಡಿಮೆಯಾಗಿ ಜೀವಕೋಶಗಳಿಗೆ ಉಸಿರಾಡಲು, ತಮ್ಮ ಕಾರ್ಯವನ್ನು ನಿರ್ವಹಿಸಲು ಅನುವು ದೊರೆಯುತ್ತದೆ.

ಮಾಯದೇ ದೀರ್ಘಕಾಲದವರೆಗೆ ಉಳಿದಿದ್ದ ಹುಣ್ಣುಗಳು. ಮಾಯುತ್ತವೆ.

ಜಿಗಣೆಯು ಮಾನವರ ದೇಹದಲ್ಲಿ ಕೆಲವು ಹನಿ ಜೊಲ್ಲು ಬಿಡುತ್ತದೆ ಎಂದು ಈ ಮೊದಲು ಹೇಳಿದ್ದೆನು. ಈ ಜೊಲ್ಲು ಜಿಗಣೆಗೆ ರಕ್ತ ಹೀರಲು ಅನುಕೂಲ ಮಾಡಿ ಕೊಡುವುದೇನೋ ನಿಜ. ಆದರೆ ಆ ಜೊಲ್ಲಿನಲ್ಲಿ ಬೇರೆ ಮಾನವ ಉಪಕಾರಿ ಪದಾರ್ಥಗಳೂ ಇರುವುದು ಸಾಧ್ಯವಿದೆ. ಇದನ್ನು ಪತ್ತೆ ಹಚ್ಚಲು ಮುಂಬೈ ನಗರದ ಕೆ. ಇ. ಎಮ್. ಆಸ್ಪತ್ರೆಯ ವೈದ್ಯರು ಹಾಗೂ ಕೆಲವು ಆಯುರ್ವೇದ ಪಂಡಿತರು ಕೂಡಿ ಪ್ರಯೋಗ ನಡೆಸಿದರು. ಅದು ಹೀಗಿದೆ.

**ಪ್ರಯೋಗ ವಿವರ :**

ಈ ಸಂಶೋಧನೆಗೆಂದು ಇಪ್ಪತ್ತು ರೋಗಿಗಳನ್ನು ಆರಿಸಿಕೊಂಡರು. ಈ ರೋಗಿಗಳಿಗೆ ಕಾಲಿನ ನೀಲೆಗಳ ತೊಂದರೆ ಹಲವಾರು ವರ್ಷಗಳಿಂದ ಇತ್ತು. ಕಾಲಿನಲ್ಲಿಯ ನೀಲೆಗಳು ಉಬ್ಬಿಕೊಂಡು, ಹಾವಿನಂತೆ ಅಂಕುಡೊಂಕಾಗಿದ್ದವು. ಅಲ್ಲಲ್ಲಿ ಗಂಟು ಗಂಟಾಗಿದ್ದವು. ಈ ತೊಂದರೆಯನ್ನು ಆಂಗ್ಲ ಭಾಷೆಯಲ್ಲಿ 'ವ್ಹೆರಿ-ಕೋಸಿಟಿ' ಎಂದು ಹೇಳುವರು. ಅನೇಕರು ಈ ತೊಂದರೆಯಿಂದ ಬಳಲುತ್ತಾರೆ. ಬರಬರುತ್ತ ವರ್ಷಗಳು ಕಳೆದಂತೆ ಕಣಕಾಲದ ಸುತ್ತಲೂ ಊದು ಕಾಣಿಸುತ್ತದೆ. ಕಾಲು ನೀಲಿಯಾಗುತ್ತದೆ. ಕಣಕಾಲದ ಒಳಭಾಗದಲ್ಲಿ ಒಂದು ಹುಣ್ಣು ಮಾಡುತ್ತದೆ. ಇದು ಏನು ಮಾಡಿದರೂ ಮಾಯದೇ ಉಳಿಯುತ್ತದೆ. ಕೊನೆಗೊಮ್ಮೆ ಹುಣ್ಣು ಕ್ಯಾನ್ಸರ್ ರೂಪವನ್ನೂ ಪಡೆಯಬಹುದು. ಈ ಹುಣ್ಣು 'ವ್ಹೆರಿಕೋಸ ಹುಣ್ಣು' ಎಂದೇ ಪ್ರಸಿದ್ಧಿ ಪಡೆದಿದೆ.

ವ್ಹೆರಿಕೋಸ ವ್ಹೆನ ಹಾಗು ಹುಣ್ಣು ಉಪಚರಿಸಲು ಆಂಗ್ಲ ಪದ್ಧತಿಯಲ್ಲಿ ಕೆಲವು ಉಪಾಯಗಳಿವೆ. ಅವು ಭಯಾನಕವಾಗಿವೆ. ಆದರೂ ತೊಂದರೆ ಕಡಿಮೆಯಾಗುವುದು ಸಂಶಯವೇ. ಕೆಲವು ಸಲ ಕಾಲಿಗೆ ಪಟ್ಟಿ ಸುತ್ತುವ ಉಪಚಾರ ಮಾಡಿಕೊಂಡರೂ ತೊಂದರೆ ಕಡಿಮೆಯಾಗದು.

ಇಂಥ ರೋಗಿಗಳಿಗೆ ಜಿಗಣೆ ಉಪಚಾರ ಮಾಡಿಸಿದರು. ರೋಗಿಗಳನ್ನು ಮಲಗಿಸಿ ಕಣಕಾಲದ ಹುಣ್ಣಿನ ಸಮೀಪದಲ್ಲಿ ವಿಶಿಷ್ಟ ಜಾತಿಯ ಜಿಗಣೆಯನ್ನು ಅಂಟಿಸಿದರು. ಜಿಗಣೆ ರಕ್ತ ಹೀರಲು ಬಿಟ್ಟರು. ಈ ಉಪಚಾರವನ್ನು ಪ್ರತಿದಿನ ನಡೆಸಿದರು. ಮತ್ತಾವ ಮದ್ದನ್ನೂ ರೋಗಿಗಳಿಗೆ ಕೊಡಲಿಲ್ಲ. ಅಂದಾಜು ಎರಡು ತಿಂಗಳಲ್ಲಿ ಹುಣ್ಣುಗಳೆಲ್ಲ ಮಾಯ್ದವು. ಕಾಲಿನ ಬಾವು ಕರಗಿತು. ದೊಡ್ಡ ಆಶ್ಚರ್ಯ ಎಂದರೆ ತುಂಬಿಕೊಂಡು ಬಿರಿತು ನಿಂತ ನೀಲೆಗಳೆಲ್ಲ ಕುಸಿದು ಸಾಮಾನ್ಯ ನೀಲೆಗಳಂತೆ ಆಗಿದ್ದವು. ಜಿಗಣೆಗೂ ಈ ನೀಲೆಗಳಿಗೂ ಎಂಥ ಸಬಂಧ ಎನಿಸುವುದು.

ಬಹುಶಃ ಜಿಗಣೆಯು ಜೊಲ್ಲು ನೀಲೆಗಳ ಭಿತ್ತಿಯ ಮೇಲೆ ತನ್ನ ಕಾರ್ಯ ನಡೆಸಿರಬೇಕು. ಅದರಿಂದ ಸಡಿಲುಗೊಂಡ, ಜೋಲುಬಿದ್ದ ಭಿತ್ತಿಗಳು ಆರೋಗ್ಯವನ್ನು ಪಡೆದುಕೊಂಡಿರಲು ಸಾಕು. ಮಾಯದ ಗಾಯದಲ್ಲಿಯ ವಿಷಕಾರಕ ದ್ರವಗಳು ಹೊರಹೋಗುವುದರಿಂದ ಗಾಯಗಳು ಗದ್ದಲ ಮಾಡದೆ ಮಾಯ್ದು ಹೋಗಿರಬಹುದು.

ಪಾಶ್ಚಾತ್ಯ ವೈದ್ಯ ವಿಜ್ಞಾನ ಸೋತು ನಿಂತ ಸ್ಥಳದಲ್ಲಿ ಜಿಗಣೆ, ವೈದ್ಯಕೀಯ ನಡೆಸಿತು. ಅದನ್ನು ಯಶಸ್ವಿಯಾಗುವಂ ಮಾಡಿತು.

ಇಷ್ಟು ಒಳ್ಳೆಯ ರಾಸಾಯನಿ ಯಾವುದು? ಇದನ್ನು ಭಾರತೀಯ ವಿಜ್ಞಾನಿಗಳು ಪತ್ತೆ ಹಚ್ಚಬೇಕಲ್ಲವೆ ತಡವಾಗಿದೆ. ಇನ್ನೂ ಜಾಸ್ತಿ ತಡಮಾಡಿದ ಜರ್ಮನಿಯವರೋ ಬೇರೆಯವರೋ ಅದನ್ನು ಗುರುತಿಸಿ ನಮಗೇ ಮಾ ನಮ್ಮ ಸಂಪತ್ತು ಹೊತ್ತೊಯ್ಯುವುದರಲ್ಲಿ ಸಂಶಯವಿಲ್ಲ.

———



"ಬೌದ್ಧ ಧರ್ಮ ಭಾರತೀಯ ಧರ್ಮ ಆ ಧರ್ಮದಲ್ಲಿ ಇರುವ ವೈಶಿಷ್ಟ್ಯತೆಯನ್ನು ನಾವು ಕಂಡುಕೊಳ್ಳಲಿಲ್ಲ. ಅದನ್ನು ಇತರೆ ದೇಶಗಳು ಅರಿತು ಮುನ್ನಡೆದಿವೆ.

—ಅಂಬೇಡ್ಕರ್

# ನಾನಾನೆಂಬುದು ನಾನಲ್ಲ

**ಮುಳಿಯ ಸರಸ್ವತಿ**
೯೨೬/೪, "ಸ್ವರ್ಣವಿಲಾಸ"
೧ನೇ ಮುಖ್ಯ ರಸ್ತೆ, ಲಕ್ಷ್ಮೀಪುರಂ
ಮೈಸೂರು–೫೭೦ ೦೦೪

ಸಂತ ಶಿಶುನಾಳ ಷರೀಫರು ಹಾಡಿದರು "ನಾನಾ ಎಂಬುದು ನಾನಲ್ಲಾ ಈ ಮಾನುಷ ಜನ್ಮವು ನಾನಲ್ಲಾ ನಾ ಅಳಿಯದೆ ನಾ ತಿಳಿಯಲಾರದು ನೀ ಎನಿಸುವ ಗುಣ ನಾನಲ್ಲಾ" ಹಾಗಾದರೆ ನಾನು ಎಂದರೇನು ?

ಹಿಂದೂ ಧರ್ಮ ಸನಾತನ ಧರ್ಮ. ಅದಕ್ಕೆ ಆದಿ, ಅಂತ್ಯ ಎಂಬುದಿಲ್ಲ. ಇದಕ್ಕೆ "ಅಹಂ ಬ್ರಹ್ಮಾಸ್ಮಿ", ನಾನೇ ಬ್ರಹ್ಮ, ಎಂಬುದೇ ಮೂಲ ತತ್ವ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನೂ ಇದೇ ಮಾತನ್ನು ಪರ್ಯಾಯವಾಗಿ ಹೇಳಿದ್ದಾನೆ. ನನಗೆ ಆದಿ ಅಂತ್ಯಗಳಿಲ್ಲ. "ಪರಿತ್ರಾಣಾಯ ಸಾಧೂನಾಂ, ವಿನಾಶಾಯ ಚ ದುಷ್ಕೃತಾಂ; ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ". ಜಗತ್ತಿನಲ್ಲಿ ದುಷ್ಟ ಶಕ್ತಿಗಳು ಹೆಚ್ಚಿದಾಗಲೆಲ್ಲಾ, ಧರ್ಮವನ್ನು ಪುನರು-ಜ್ಜೀವನಗೊಳಿಸಲು ನಾನು ಮರಳಿ ಮರಳಿ ಜನ್ಮ ತಾಳುತ್ತೇನೆ, ಎಂಬುದಿದರ ಅರ್ಥ. ದೇವರನ್ನು ಅರಿತುಕೊಳ್ಳಲು ಸುಲಭವಾದ ಮಾರ್ಗವಿದೆ. ಅದೆಂದರೆ ನಮ್ಮನ್ನು ನಾವೇ ಅರಿತುಕೊಳ್ಳುವುದು. ನಾನೇ ಬ್ರಹ್ಮನಲ್ಲವೇ ? ಇದನ್ನೇ ಅನೇಕ ಸಂತರು ಬೇರೆ ಬೇರೆ ರೀತಿಯಲ್ಲಿ ಹೇಳಿದ್ದಾರೆ. ಅಥರ್ವ ವೇದದಲ್ಲಿ ಯಾರು ತನ್ನನ್ನು ಅರಿತಿದ್ದಾನೋ, ಅವನು ದೇವರನ್ನು ಅರಿಯುತ್ತಾನೆ ಹಾಗೂ ಅವನಿಗೆ ಸಾವಿನ ಭಯವಿಲ್ಲ ಎಂದು ಹೇಳಿದೆ. ಕ್ರೈಸ್ತ ಧರ್ಮದಲ್ಲೂ ಇದೇ ಮಾತನ್ನು "ನೊ ಮ್ಯಾನ್ ನೋಸ್ ಗಾಡ್ ಹೂ ನೋಸ್ ನಾಟ್ ಹಿಮ್‌ಸೆಲ್ಫ್" ಎಂಬುದಾಗಿ ಪ್ರತಿಪಾದಿಸಲಾಗಿದೆ. ಯಾವನು ತನ್ನನ್ನು ಅರಿಯನೋ, ಆತನು ದೇವರನ್ನೂ ಅರಿಯ ಎಂಬುದಿದರ ತಾತ್ಪರ್ಯ. ಇತ್ತೀಚಿನ ಪ್ರಸಿದ್ಧ ಸಂತ ಕವಿ ಶಿಶುನಾಳ ಷರೀಫರು ಇದೇ ತಥ್ಯವನ್ನು "ನಾನಾನೆಂಬುದು ನಾನೇಸಲ್ಲ" ಎಂಬ ಕೃತಿಯಲ್ಲಿ ತುಂಬಾ ಮಾರ್ಮಿಕವಾಗಿ ತಿಳಿಯಪಡಿಸಿದ್ದಾರೆ.

ಭಗವಾನ್ ರಮಣ ಮಹರ್ಷಿಗಳ ತತ್ವಸಾರವೇ "ನಾನು" ಎಂಬುದರ ವ್ಯಾಖ್ಯಾನ. ಮನದಲ್ಲಿಯೇ "ನಾನು ಯಾರು" ಎಂದು ಸತತ ಪ್ರಶ್ನಿಸುತ್ತಾ ಇರಿ. ಪ್ರಶ್ನೆಗೆ ಉತ್ತರ

ದೊರಕಿದಂದೇ ನಿನಗೆ ಮುಕ್ತಿ ಎನ್ನುತ್ತಿದ್ದರವರು. ಇಲ್ಲಿ "ನಾನು" ಎಂಬ ಪದದ ಅರ್ಥ ಭೌತಿಕವಾದ ನಾನಲ್ಲ. "ನನ್ನತನ" ಎನ್ನುವ ಭಾವನೆ. ಅಂತೆಯೇ "ನನ್ನತನ" ಅಳಿಯಬೇಕು ಎಂದೇ ಅವರು ತಿಳಿಯಪಡಿಸಿದ್ದು. ಎಲ್ಲಿಯವರೆಗೆ, "ನಾನು", "ನನ್ನದು", ಎಂಬ "ನನ್ನ ತನ"ದ ಗರ್ವ ಇರುವುದೋ, ಅಲ್ಲಿಯವರೆಗೆ ನಿಜವಾದ ಜ್ಞಾನ ಅಥವಾ ಮುಕ್ತಿ ದೊರೆಯಲಾರದು. ನಾನು ಎನ್ನುವ ಭ್ರಮೆ, ಅಹಂಕಾರ ಇದ್ದರೆ ಮುಕ್ತಿಯಿಲ್ಲ.

ಒಮ್ಮೆ ಕನಕದಾಸರ ಗುರುಗಳಾದ ವ್ಯಾಸರಾಯರು ತಮ್ಮ ಎಲ್ಲಾ ಶಿಷ್ಯರನ್ನು ಕರೆದು ಸ್ವರ್ಗಕ್ಕೆ ಹೋಗಲು ಯಾರು ಅರ್ಹರು ಎಂದು ಕೇಳಿದರಂತೆ. ಅದಕ್ಕೆ ಒಬ್ಬನು ಸರ್ವಸಂಗಪರಿತ್ಯಾಗಿಯಾದವನು ಸ್ವರ್ಗಕ್ಕೆ ಹೋಗಬಹುದು ಎಂದರೆ ಇನ್ನೊಬ್ಬನು ದೈವಭಕ್ತನಾದವನು ಮರಣಕಾಲದಲ್ಲಿ ಭಗವನ್ನಾಮಸ್ಮರಣೆ ಮಾಡುತ್ತಾ ಪ್ರಾಣವನ್ನು ತ್ಯಜಿಸಿದರೆ ಅಂತಹವನು ಮಾತ್ರ ಸ್ವರ್ಗಕ್ಕೆ ಹೋಗುತ್ತಾನೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದನಂತೆ. ಮಗುದೊಬ್ಬನು ಜೀವಮಾನವಿಡೀ ವ್ರತಾನುಷ್ಠಾನಗಳಲ್ಲಿ ಕಾಲ ಕಳೆದವನೇ ಸ್ವರ್ಗಕ್ಕೆ ಅರ್ಹನು ಎನ್ನುತ್ತಾನೆ. ಹೀಗೆ ಒಬ್ಬೊಬ್ಬನು ಒಂದೊಂದು ತರಹ ಉತ್ತರ ಕೊಡಲು, ವ್ಯಾಸರಾಯರು ಕೊನೆಗೆ ಕನಕದಾಸರನ್ನು ಕರೆದು "ನೀನೇನು ಹೇಳುತ್ತಿ ಕನಕ, ನಾನು ಸ್ವರ್ಗಕ್ಕೆ ಹೋಗಬಹುದೇ?" ಎಂದು ಪ್ರಶ್ನಿಸಿದರಂತೆ. ಅದಕ್ಕೆ, ಕನಕದಾಸರು ಸ್ವಲ್ಪವೂ ಹಿಂದೆ ಮುಂದೆ ನೋಡದೆ, "ಇಲ್ಲ ಗುರುಗಳೇ, ನಾನು ಹೋದರೆ, ಹೋಗಬಹುದು" ಎಂದು ಉತ್ತರವಿತ್ತರಂತೆ. ಇದನ್ನು ಕೇಳಿದ ಉಳಿದ ಶಿಷ್ಯರಲ್ಲಿ ಕೆಲವರು ನಕ್ಕು ಕನಕರನ್ನು ಗೇಲಿ ಮಾಡಿದರೆ, ಇನ್ನು ಕೆಲವರು ಕನಕನ ಧಾರ್ಷ್ಟ್ಯಕ್ಕೆ ಕೋಪಿಸಿ ನಿಂದಿಸಿದರಂತೆ. ಆದರೆ ಗುರುಗಳು ವಿಚಲಿತರಾಗದೆ ನಕ್ಕು, "ಅಯ್ಯೋ ಮಂಕುಗಳೇ, ಕನಕನು ಹೇಳಿದ್ದೇ ಸರಿ. ಅವನು ಹೇಳಿದ್ದು, ನಾನು ಎಂದರೆ, ತಾನು ಕನಕ, ಎಂಬ ಅರ್ಥವಲ್ಲಲ್ಲ. ನಾನು ಎಂದರೆ ಪ್ರತಿಯೊಬ್ಬರಲ್ಲೂ ಇರುವ ಅಹಂಭಾವ. ಅಹಂಕಾರ ಹೋದರೆ, ಅಂದರೆ, ಅಳಿದರೆ ಯಾರೂ ಸ್ವರ್ಗಕ್ಕೆ ಹೋಗಬಹುದು ಎನ್ನುವುದೇ ಕನಕನ ಅಂಬೋಣ" ಎಂದು ಸ್ಪಷ್ಟೀಕರಿಸಿದರಂತೆ. ಹಾಗಾಗಿ, ಏನೇ ಕೆಲಸ ಮಾಡಿದರೂ ಅದನ್ನು "ನಾನು" ಮಾಡಿದೆ ಎಂಬ ಅಹಂಕಾರವಿರಬಾರದು. ತೇನ ವಿನಾ ತೃಣಮಪಿ ನ ಚಲತಿ. ಎಲ್ಲವೂ ಆ ಪರಮಾತ್ಮನ ಲೀಲೆ.

ನಾವೆಲ್ಲರೂ ಹುಟ್ಟಿನಿಂದ ಸಾಯುವವರೆಗೂ ಸುಖ ಕೊಡುವ ವಸ್ತುಗಳನ್ನೇ ಬಯಸುತ್ತೇವೆ. ಅಂದರೆ ಎಲ್ಲರೂ ಬಯಸುವುದು ಸುಖವನ್ನು ಎಂಬುದು ಬೆಳಕಿನಷ್ಟೇ ನಿಚ್ಚಳ. ಸಂಸಾರಿಯಾದವನಿಗೆ ಸುಖದ ವ್ಯಾಮೋಹ ಎಷ್ಟಿದೆಯೋ ಅಷ್ಟೇ ಏಕೆ, ಅದರಿಂದ ಹೆಚ್ಚೇ ಸಂಸಾರ ತ್ಯಜಿಸಿದವನಿಗೆ ಸುಖದ ವ್ಯಾಮೋಹ ಇರುತ್ತದೆ. ಸನ್ಯಾಸಿ ಪರಮಸುಖವಾದ ಮುಕ್ತಿಯನ್ನು ತಾನೆ ಬಯಸುತ್ತಾನೆ? ಈ ಮುಕ್ತಿ ಪಡೆಯಲೇ ಅವನು ಸರ್ವಸ್ವವನ್ನೂ ತ್ಯಜಿಸುತ್ತಾನೆ ಆದರೆ ಎಲ್ಲರಿಗೂ ಸುಖ ಕೊಡುವ ವಸ್ತುವೇ

ಈ "ನಾನು" ಎಂಬುದು. "ನಾನು" ಯಾವಾಗಲೂ ಇರಬೇಕು ಎಂಬ ಇಚ್ಛೆ ಎಲ್ಲರಲ್ಲೂ ಇರುತ್ತದೆ.

ನಾನು ಎನ್ನುವುದರೊಡನೆ ಹುಟ್ಟುತ್ತವೆ—ನಾನು, ನನ್ನದು, ನನ್ನ ಅಪ್ಪ, ನನ್ನ ಅಮ್ಮ, ನನ್ನ ಅಕ್ಕ, ನನ್ನ ಅಣ್ಣ, ತಮ್ಮ, ನನ್ನ ಮನೆ, ನನ್ನ ಆಸ್ತಿ, ನನ್ನ ಅಧಿಕಾರ ಇತ್ಯಾದಿ ಭಾವನೆಗಳು. ಎಲ್ಲಿವೂ ನನ್ನದು ಎನ್ನುತ್ತೇವೆ. "ನಾನ"ನ್ನು ಕಟ್ಟಿಕೊಂಡೇ ನಮ್ಮ ವಾಸ. ಸುಖ, ಸಂತೋಷ ಎಲ್ಲಾ ನನಗೆ ಬೇಕು ಎನ್ನುವ ಆಸೆ. ಆದುದರಿಂದಲೇ ರಮಣ ಮಹರ್ಷಿಗಳು ಪ್ರಶ್ನಿಸಿದ್ದು, ಈ "ನಾನು" ಎಂದರೆ ಯಾರು? ಎಂದು. ಇದನ್ನು ಮನನಮಾಡು ಎಂದು ಬೋಧಿಸಿದ್ದು. ಭಗವಾನರು ಕೂಡ ಜ್ಞಾನೋದಯವಾಗಿ ಮನೆಬಿಟ್ಟು ಹೊರಟಾಗ ಮೊದಲು ಮಾಡಿದ ಕೆಲಸ "ನಾನು" ಎಂಬುದನ್ನು ತ್ಯಜಿಸಿದ್ದು. ಆಗ ಅವರು ತಮ್ಮ ಅಣ್ಣನಿಗೆ ಬರೆದಿಟ್ಟ ಪತ್ರದಲ್ಲಿ ತಮ್ಮನ್ನು "ಇದು" ಎಂದು ಸಂಬೋಧಿಸಿಕೊಂಡಿದ್ದರು. "ಇದನ್ನು ಹುಡುಕುವ ಪ್ರಯತ್ನ ಬೇಡ" ಎಂದು ಬರೆದಿದ್ದರಂತೆ.

ನಮ್ಮೆಲ್ಲರಲ್ಲಿರುವ ಈ "ನಾನು" ಎನ್ನುವ ತತ್ವವನ್ನು, ಅಂದರೆ ಪರಮಾತ್ಮಸ್ವರೂಪವನ್ನು ಹುಡುಕಿ ಗೆಲ್ಲುವವನೇ ನಿಜವಾದ ಜ್ಞಾನಿ.

---



ಕಳಬೇಡ, ಕೊಲಬೇಡ, ಹುಸಿಯನುಡಿಯಲು ಬೇಡ  
ಮುನಿಯ ಬೇಡ. ಅನ್ಯರಿಗೆ ಅಸಹ್ಯ ಪಡಬೇಡ.  
ತನ್ನ ಬಣ್ಣಿಸಬೇಡ. ಇದಿರು ಹಳಿಯಲು ಬೇಡ  
ಇದೇ ಅಂತರಂಗ ಶುದ್ಧಿ ; ಇದೇ ಬಹಿರಂಗ ಶುದ್ಧಿ

—ಬಸವಣ್ಣ

# ಕತ್ತೆ ಕಳುಕುತಿದೆ ಕೇಳಿದಿರಾ ?

ಎಂ. ವಿ. ಚಕ್ರಪಾಣಿ
ರಾಷ್ಟ್ರೋತ್ಥಾನ ವಿದ್ಯಾಕೇಂದ್ರ
ಹಗರಿಬೊಮ್ಮನಹಳ್ಳಿ-೫೮೩ ೨೧೨
ಬಳ್ಳಾರಿ ಜಿಲ್ಲೆ

ಶಾರದೆ ಕರಗಳ ವೀಣಾ ತಾನ
ತುಂಬುರು ನಾರದ ಪಾಡಿದ ಗಾನಾ
ತ್ಯಾಗರಾಜರೇ ಮಾಡಿದ ಪಾನಾ
ಬ್ರಹ್ಮಾಂಡವನೇ ಸೀಳುವ ಗಾನಾ
ಕತ್ತೆ ಕಳುಕುತಿದೆ ಕೇಳಿದಿರಾ ?

ಬಾಲ್ಯದ ದಿನಗಳಲ್ಲಿ ನಾನು ಕತ್ತೆಯನ್ನು ನೋಡಿಯೆ ಇರಲಿಲ್ಲವೆಂದು ಹೇಳಿದರೆ ನೀವು ನಂಬುತ್ತೀರೊ ಇಲ್ಲವೊ. ಆದರೆ ಅದು ನಿಜ. ಕತ್ತೆಯೆಂಬ ಒಂದು ಪ್ರಾಣಿ ಇದೆ ಎಂದು ಕೇಳಿದ್ದೆ, ಅಷ್ಟೆ. "ನೆಲದ ಮರೆಯ ನಿಧಾನದಂತೆ" ಕಣ್ಣಿಗೆ ಬೀಳದಿದ್ದರೂ ಆಗಾಗ ಕಿವಿಯ ಮೇಲೆ ಬಿದ್ದು ಕತ್ತೆ ತನ್ನ ಇರುವಿಕೆಯನ್ನು ಸಾಬೀತುಪಡಿಸುತ್ತಿತ್ತು. ನಾವು ಹುಡುಗರು ಹುಚ್ಚು ಹುಚ್ಚಾಗಿ ನಗುತ್ತಿದ್ದರೆ, "ಎನ್ರೋ ಕತ್ತೆ ನೋಡಿ ಬಂದಿದೀರಾ? ಎಂದು ಹಿರಿಯರು ಗದರಿಸುತ್ತಿದ್ದುದಿತ್ತು. ಕತ್ತೆಯೆಂದರೆ ನೋಡಿ ನಗಬೇಕಾದ ಒಂದು ಪ್ರಾಣಿಯೆಂಬ ಒಂದು ಕಲ್ಪನೆ ನನ್ನ ಎಳೆಯ ಮನಸ್ಸಿನಲ್ಲಿ ಕೂತಿತು.

ಆಗ ಪ್ರಾಥಮಿಕ ಶಾಲಾ ಪುಸ್ತಕದಲ್ಲಿ ಕಯ್ಯಾರರ ಒಂದು ಕವನವಿತ್ತು.

ಸಂತೆಗೆ ಹೋದನು ಭೀಮಣ್ಣ
ಹಿಂಡಿಯ ಕೊಂಡನು ಹತ್ತು ಮಣ
ಕತ್ತೆಯ ಬೆನ್ನಿಗೆ ಹೇರಿಸಿದ
ಕುದುರೆಯ ಜತೆಯಲಿ ಸಾಗಿಸಿದ–ಎಂದು

ಆರಂಭವಾಗುತ್ತದೆ ಆ ಕವನ. ಅಲ್ಲಿ ಒಂದು ಕತ್ತೆಯ ಚಿತ್ರವಿತ್ತು. ಕತ್ತೆ ಹೇಗಿರುತ್ತದೆ ಎಂದು ನಾನು ಮೊದಲು ತಿಳಿದ ಕೊಂಡದ್ದು ಆ ಚಿತ್ರದಲ್ಲಿ ನೋಡಿ, ಕತ್ತೆ ಯಲ್ಲಿ ಹಾಸ್ಯಾಸ್ಪದವಾದದ್ದು ಏನೊಂದೂ ಕಾಣಿಸಲಿಲ್ಲ ನನಗೆ.

ಕತ್ತೆಯನ್ನು ಪ್ರತ್ಯಕ್ಷವಾಗಿ ಕಂಡಾಗಲೂ ಅದೊಂದು ವ್ಯಂಗ್ಯದ ವಸ್ತು ಎಂದು ನನ ಅನ್ನಿಸಲಿಲ್ಲ. ಆದರೆ ಅದು ನಡೆದದ್ದು ಅ ವರ್ಷಗಳ ಬಳಿಕ. ನಾನು ಕರ್ನಾಟಕ

ಉತ್ತರ ಭಾಗಕ್ಕೆ ಬಂದ ನಂತರ. ಇಲ್ಲಿ ಒಂದು ಮಾತನ್ನು ನಾನು ಒಪ್ಪಿಕೊಳ್ಳಬೇಕು. ಕತ್ತೆಯನ್ನು ಮೊತ್ತ ಮೊದಲು ನಾನು ಕಂಡಾಗ ನನಗೆ ಬಂದದ್ದು ನಗು ನಲ್ಲ, ನನ್ನ ಪೂರ್ವಜನ್ಮದ ಸ್ಮರಣೆ. ಯಾವುದೊ ಜನ್ಮದ ಬಂಧುವನ್ನು ಕಂಡ ಹಾಗೆ ನನ್ನ ಹೃದಯ ಆನಂದದಿಂದ "ತುಂ ತುಂ ತುಂ ತುಂ ತುಂ ತುಂ ತುಂ ತುಂ ತುಂಬಿ ಬಂದಿತ್ತ" ಈ ಆನಂದವನ್ನು ನಾನು ಇಂದಿಗೂ ನನ್ನ ಹೆಂಡತಿಗೆ ಹೇಳಿಲ್ಲ. ನೀವೂ ದಯಮಾಡಿ ಹೇಳಬೇಡಿ! ಕತ್ತೆಯ ಬಗ್ಗೆ ನನ್ನಲ್ಲಿ ಕುತೂಹಲ ಬೆಳೆದದ್ದು ಹೀಗೆ-ಬಾಲ್ಯದಿಂದಲೂ ನನ್ನ ಒಳಗಿನ ಒಳಗೆ ಮನೆ ಮಾಡಿಕೊಂಡಿದ್ದೂ ಕಣ್ಣಿಗೆ ಬೀಳದೆ ಇದ್ದ ಆ ಪ್ರಾಣಿ ಇದ್ದಕ್ಕಿದ್ದ ಹಾಗೆ ಒಂದು ದಿನ ಮನೆಯ ಮುಂದೆನೆ ವಕ್ಕರಿಸಿದರೆ ಯಾರಿಗೆ ಕುತೂಹಲ ಕೆರಳಲಿಕ್ಕಿಲ್ಲ, ಹೇಳಿ?

## ಹಿತ್ತಲ ಗಿಡ ಮದ್ದಲ್ಲ

ಕನ್ನಡ ಸಾಹಿತ್ಯದಲ್ಲಿ ಕತ್ತೆ ಎಂಬ ವಿಷಯದ ಮೇಲೆ ಸಂಶೋಧನಾ ಪ್ರಬಂಧ ಬರೆಯಲು ಹೊರಟಿದ್ದು ನಾನು ಮಾಡಿದ ಮೊದಲ ಕೆಲಸ. ದುರದೃಷ್ಟಕ್ಕೆ ಕತ್ತೆಯ ಬಗ್ಗೆ ಆಸ್ಥೆಯನ್ನು ಬೆಳೆಸಿಕೊಂಡ ಒಬ್ಬ ಬರಹಗಾರನಾದರೂ ನನ್ನ ಕಣ್ಣಿಗೆ ಬೀಳಬಾರದೆ? ನನ್ನ ಈ ಮಾತಿಗೆ ಬೀchi ಯವರೊಬ್ಬರೇ ಅಪವಾದ. ಬೀchiಯವರಿಗೆ ಕತ್ತೆಯ ಅಚ್ಚುಮೆಚ್ಚಿನ ಪ್ರಾಣಿಯಾಗಿತ್ತು. ಅವರು ತಮ್ಮ ಶತ್ರುವನ್ನು ಸಹ ಕತ್ತೆಗೆ ಹೋಲಿಸುತ್ತಿರಲಿಲ್ಲ. ಕತ್ತೆಗೆ ಅಪಮಾನವಾದೀತು ಎಂಬ ಭೀತಿಗಾಗಿ! ಅಂಬಿಕಾತನಯದತ್ತರಂಥ ಅಂಬಿಕಾತನಯ ದತ್ತರೇ ಕತ್ತೆಯ ಬಗ್ಗೆ ಅಲಕ್ಷ್ಯ ತಾಳಿದ್ದರೆಂದ ಮೇಲೆ ಕತ್ತೆಯ ದುರದೃಷ್ಟಕ್ಕೆ ಏನು ಹೇಳಬೇಕು? ಇಲ್ಲವೆನ್ನದ ಹಾಗೆ ಅವರು ಕತ್ತೆಯ ಮೇಲೆ ಒಂದೇ ಒಂದು ಕವನ ಬರೆದರು. ಅದೂ ಅಣಕವಾಡು. "ಏ ಕತ್ತೆ! ಏ ಕತ್ತೆ ಹಸಿದು ಹಸಿರಿದ್ದೂ?" ಎಂದು ಆರಂಭವಾಗುತ್ತದೆ ಆ ಕವನ.

ಹಿತ್ತಲಗಿಡ ಮದ್ದಲ್ಲ ಎನ್ನುತ್ತಾರೆ. ಮಲಯ ಪರ್ವತದ ತಪ್ಪಲಿನ ಪುಳಿಂದಿಯರು ಗಂಧದ ಕಟ್ಟಿಗೆಯನ್ನು ಒಲೆಗಿಡುತ್ತಾರಂತೆ. ಅತಿಪರಿಚಯದಿಂದ ಅವಜ್ಞೆ ಎಂದರೆ ಇದೇ ಅಲ್ಲವೆ? ಕತ್ತೆಗೂ ಈ ಮಾತು ಅನ್ವಯಿಸುತ್ತದೆ. ಬೀದಿ ಬದಿಯಲ್ಲಿ ಸಿಗುವ ರದ್ದಿ ಹಾಳೆ, ಹಾಳು ಮೂಳು ತಿಂದು ಬದುಕುವ ಈ ದೈನೇಸಿ ಯಾವ ಕವಿಯ ಸಂಚಾರೀ ಭಾವಕ್ಕೂ ಗೋಚರಿಸದೆ ಇದ್ದದ್ದಕ್ಕೆ ಇನ್ನಾವ ಸಮರ್ಥನೆ ಇದೆ?

ಕತ್ತೆಯ ಬಗ್ಗೆ ಸಂಶೋಧನಾ ಪ್ರಬಂಧ ಬರೆಯಬೇಕೆಂಬ ಹುಮ್ಮಸ್ಸು 'ಪ್ರಥಮ ಚುಂಬನೇ ದಂತಭಗ್ನಂ' ಎಂದಂತಾಯಿತು. ಹೋಗಲಿ. ಭಾಷೆಯ ಇತರ ಆಕರಗಳಲ್ಲಾದರೂ ಕತ್ತೆಯ ಉಲ್ಲೇಖಗಳಿವೆಯೆ? ಎಂದು ಹುಡುಕತೊಡಗಿದೆ. ಪುರಾಣಗಳನ್ನು ಜಾಲಾಡಿದ್ದಾಯಿತು. ಇತಿಹಾಸದಲ್ಲಿ ಇಣುಕಿ ನೋಡಿದ್ದಾಯಿತು. ಊಹುಂ. ಕತ್ತೆಯ ಹೆಸರ ಸುಳಿವಿಲ್ಲ. ಕಟ್ಟಕಡೆಗೆ ನಾನು ಆಶ್ರಯಿಸಿದ್ದು ಜಾನಪದ ಆಕರವನ್ನು. ಹಿತ್ತಲಗಿಡದಲ್ಲಿ ಮದ್ದಿರುವುದನ್ನು ಕಂಡುಕೊಂಡ ಪ್ರಾಜ್ಞರಲ್ಲವೆ ನಮ್ಮ ಜಾನಪದರು.

**ಯುರೇಕಾ ! ಯುರೇಕಾ !**

ನನ್ನ ನಿರೀಕ್ಷೆ ಹುಸಿಯಾಗಲಿಲ್ಲ. ಗಾದೆಗಳ ಪ್ರಪಂಚವನ್ನು ಹೊಕ್ಕ ನನಗೆ ಯುರೇಕಾ ! ಯುರೇಕಾ ! ಎಂದು ಕೂಗುವಂತಾಯಿತು. ಕನ್ನಡ ಗಾದೆಗಳಲ್ಲಿ ಕತ್ತೆಯೆ ಹ್ಯಾಟ್ರಿಕ್ ಹೀರೊ ! ಕತ್ತೆಯ ಮೇಲೆ ಎಷ್ಟೊಂದು ಗಾದೆಗಳನ್ನು ಮಾಡಿಟ್ಟಿದ್ದಾರಲ್ಲ ನಮ್ಮ ಹಿರಿಯರು ! ಎಂದು ನನ್ನ ಬೆರಳನ್ನು ನಾನೇ ಕಚ್ಚಿಕೊಂಡೆ.

"ಕಾರ್ಯವಾಸಿ ಕತ್ತೆ ಕಾಲು ಕಟ್ಟು"

"ಕತ್ತೆ ಹೋದಲ್ಲಿ ಮತ್ತೆ ಮೇವಿಲ್ಲ"

"ಕತ್ತೆಗೇನು ಗೊತ್ತು ಕಸ್ತೂರಿ ಪರಿಮಳ ?"

"ಕತ್ತೆಗೆ ಲತ್ತೆ ಪೆಟ್ಟು"

"ಹಳೆ ಕತ್ತೆಗೆ ಹಾಳು ಗೋಡೆಯೆ ಆಧಾರ !"

"ರಾಯರ ಕುದುರೆ ಬರ್‍ತಾ ಬರ್‍ತಾ ಕತ್ತೆಯಾಯ್ತು"

ನನಗೆ ಬೇಸರವಾದದ್ದು ಇನ್ಯಾತಕ್ಕೂ ಅಲ್ಲ. ಈ ಗಾದೆಗಳಲ್ಲಿ ಕತ್ತೆಯನ್ನು ಅವರು ಕಂಡ ದೃಷ್ಟಿಗಾಗಿ. ಒಂದು ಗಾದೆಯಲ್ಲಾದರೂ ಕತ್ತೆಯ ಬಗ್ಗೆ ಮೆಚ್ಚುಗೆ ಇರಬೇಡವೆ ? ಅನಿಷ್ಟಕ್ಕೆಲ್ಲ ಅಂಗಾರಕ ಗುರಿ ಎಂದ ಹಾಗೆ ಕೀಳಾಗಿ ಕಾಣಲು ಕತ್ತೆಯೆ ಸಿಗಬೇಕೆ ಇವರಿಗೆ ? ದಡ್ಡ ಪ್ರಾಣಿ ಎಂದು ತಳ್ಳಿ ಹಾಕಲು ಕತ್ತೆಯೆ ಬೇಕಾಯ್ತೆ ?

ಕತ್ತೆಯನ್ನು ದಡ್ಡ ಪ್ರಾಣಿ ಎಂದು ಹೆಸರಿಸಿರುವುದು ಕನ್ನಡಕ್ಕಷ್ಟೆ ಮೀಸಲಲ್ಲ. ಇಂಗ್ಲಿಷರೂ ಇದರಲ್ಲಿ ಹಿಂದೆ ಬಿದ್ದಿಲ್ಲ. ಮುಗ್ಧತನದ ಮಾತು ಬಂದಾಗ ಇಂಗ್ಲಿಷರಿಗೆ ನೆನಪಿಗೆ ಬರುವುದು ಕುರಿಮರಿ. 'ಆ್ಯಸ್ ಇನ್ನೊಸೆಂಟ್ ಆ್ಯಸ್ ಎ ಲ್ಯಾಂಬ್' ಆದರೆ ದಡ್ಡತನದ ಮಾತು ಬಂದಾಗ ನೆನಪಾಗುವುದು–ಕತ್ತೆ. ಆ್ಯಸ್ ಸ್ಟುಪಿಡ್ ಆ್ಯಸ್ ಆ್ಯನ್ ಆ್ಯಸ್ ! ಏನು ಹೇಳಬೇಕು ?

ಕತ್ತೆಯ ಬಗ್ಗೆ ಈ ಪಕ್ಷಪಾತ ದೃಷ್ಟಿಗೆ ಕಾರಣವೇನಿದ್ದೀತು? ಎಂದು ಹಲವು ಬಾರಿ ಯೋಚಿಸಿದ್ದೇನೆ. ಕತ್ತೆಯ ದುರದೃಷ್ಟವನ್ನು ಬಿಟ್ಟು ಇನ್ಯಾವ ಕಾರಣವೂ ನನಗೆ ಹೊಳೆದಿಲ್ಲ. ಕತ್ತೆ ನತದೃಷ್ಟ ಪ್ರಾಣಿ ಎನ್ನುವುದರಲ್ಲಿ ಎರಡು ಮಾತೇ ಇಲ್ಲ. ಬೆಕ್ಕು, ಮೊಲ, ಗಿಣಿಯಂಥ ಯಃಕಶ್ಚಿತ್ ಜೀವಿಗಳನ್ನೂ ಪ್ರೀತಿಯಿಂದ ಸಾಕುವವರು ಇರುತ್ತಾರೆ. ಆದರೆ ಕತ್ತೆಗೆ ಆ ಭಾಗ್ಯವಿಲ್ಲ. ಹುಟ್ಟುತ್ತಲೇ ದುರದೃಷ್ಟ ಅದರ ಬೆನ್ನು ಹತ್ತಿರುತ್ತದೆ. ಬೆಕ್ಕು-ಮೊಲ-ಗಿಣಿಗಳು ತಮ್ಮ ಒಡೆಯರಿಗೆ ಯಾವ ಮಹಾ ಉಪಕಾರ ಮಾಡುತ್ತವೆ ? ಇಲಿಗಳನ್ನು ತಿನ್ನುವುದು ಬಿಟ್ಟು ಬೆಕ್ಕು ಇನ್ನೇನು ಮಾಡುತ್ತದೆ ? ಕತ್ತೆಯ ಹಾಗೆ ಒಡೆಯನ ಹೊರೆಯನ್ನು ತಾನು ಹೊತ್ತುಕೊಂಡು ಒಡೆಯನ ಭಾರವನ್ನು ಬೆಕ್ಕು-ಮೊಲ-ಗಿಣಿಗಳು ಹಗುರು ಮಾಡಬಲ್ಲುವೆ ? ಆದರೂ ಆ ಜೀವಿಗಳಿಗಿರುವ ಮೃಷ್ಟಾನ್ನದ ಸುಖ ಕತ್ತೆಗಿಲ್ಲ !

ಜಾತಿಯಲ್ಲಿ ಕುದುರೆಯ ತಮ್ಮನಾದರೂ ತನ್ನ ದುರದೃಷ್ಟದಿಂದಾಗಿ ಕತ್ತೆ ರಾಜಭೋಗದಿಂದ ವಂಚಿತವಾಗಿದೆ. ಕುದುರೆ ರಾಜರನ್ನು ಹೊತ್ತುಕೊಂಡು ತಿರುಗಿದರೆ

ಕತ್ತೆ ಕೊಳೆಬಟ್ಟೆಗಳ ಹೊರೆ ಹೊತ್ತು ಕೊಂಡು ತಿರುಗಬೇಕಾಯಿತು. ಕುದುರೆ ರಾಜರ ವಾಹನವಾದರೆ ಕತ್ತೆ ಬಡ ಅಗಸನ ವಾಹನವಾಯಿತು. ಈಗ ರಾಜರಿಲ್ಲ ನಿಜ. ಆದರೂ ಕುದುರೆಗಳಿಗೆ ರಾಜಭೋಗ ತಪ್ಪ ಲಿಲ್ಲ. ಟರ್ಫ್ ಕ್ಲಬ್ಬುಗಳಲ್ಲಿ ಕುದುರೆ ಗಳನ್ನು ಸಾಕುವವರಿಲ್ಲವೆ ? ಅವುಗಳ ಮೈ ತಿಕ್ಕಿ ತಿಕ್ಕಿ ಮಾಲೀಸು ಮಾಡುವವರಿಲ್ಲವೆ ? ಕುದುರೆಗಿರುವ ಉದ್ದ ಕಾಲುಗಳಿಲ್ಲ ಎಂಬ ಮಾತ್ರಕ್ಕೆ ಕತ್ತೆ ರಾಜಭೋಗದಿಂದ ವಂಚಿತ ವಾಗಬೇಕೆ ? ಕಾಲುಗಳು ಗಿಡ್ಡವಾಗಿದ್ದ ತಪ್ಪಿಗೆ ಸ್ಥಾನಭ್ರಷ್ಟವಾಯಿತೆಂದು ನನಗೆ ಬಹಳ ಸಲ ಅನಿಸಿದೆ.

**ಸಂತೃಪ್ತ, ಸ್ಥಿತಪ್ರಜ್ಞ :**

ಹಾಗಾದರೆ ಕತ್ತೆಯಲ್ಲಿ ನಾನು ಕಂಡ ದ್ದೇನು ? ಎಂದು ನೀವು ಕೇಳುತ್ತೀರಿ. ಹಿರಿಯರಿಗಿಲ್ಲದ ಅದ್ಯಾವ ದಿವ್ಯದೃಷ್ಟಿ ನನಗೆ ಸಿದ್ಧಿಸಿದೆ ? ಎಂದು ತಾನೆ ನಿಮ್ಮ ಪ್ರಶ್ನೆ ?

ಸುಮಾರು ಎರಡು ದಶಕಗಳ ಒಡನಾಟ ದಿಂದಾಗಿ ಕತ್ತೆಯಲ್ಲಿ ನಾನೇನು ಕಂಡೆನೆಂದು ಖಚಿತವಾಗಿ ಹೇಳಬಲ್ಲೆ. "ನನ್ನ ಕಾಲುಗಳು ಇನ್ನಷ್ಟು ಉದ್ದವಾಗಿದ್ದರೆ ನಾನು ಕುದುರೆಯು ಅನ್ನಿಸಿಕೊಳ್ಳುತ್ತಿದ್ದೆ" ಎಂದು ಯಾವ ಕತ್ತೆಯೂ ಈವರೆಗೆ ನನ್ನ ಮುಂದೆ ಹೇಳಿಲ್ಲ. ನನ್ನ ಮುಂದೆ ಎಂದೇನು ? ಪ್ರಪಂಚದಲ್ಲಿ ಯಾರ ಮುಂದೂ ಹೇಳಿರ ಲಿಕ್ಕಿಲ್ಲ. ಹಾಗೆ ದೂರಿಕೊಳ್ಳುವ ಸ್ವಭಾವ ವಿದ್ದರೆ ಅದು ಕತ್ತೆಯೇ ಅಲ್ಲ !

ಕತ್ತೆಯನ್ನು ಸಾಕುವ ಟರ್ಫ್ ಕ್ಲಬ್ಬು ಗಳು ಇರಲಿಕ್ಕಿಲ್ಲ, ಕತ್ತೆಯ ಮೈಯನ್ನು ಪ್ರೂಸಿ ಮಾಲಿಶ್ ಮಾಡುವವರೂ ಇರ ಲಿಕ್ಕಿಲ್ಲ. ಕಡ್ಲೆ-ಹುರುಳಿಗಳನ್ನು ಕೊಡು ವವರೂ ಇರಲಿಕ್ಕಿಲ್ಲ. ಆದರೆ ಕತ್ತೆ ಇದ ನ್ನೆಲ್ಲ ಮನಸ್ಸಿಗೆ ಹಚ್ಚಿಕೊಂಡದ್ದೇ ಇಲ್ಲ. ರಸ್ತೆಯ ಬದಿಯಲ್ಲಿ ಸಿಗುವ ರದ್ದಿ ಕಾಗದ, ಬಾಳೆಹಣ್ಣಿನ ಸಿಪ್ಪೆ, ಹುಲ್ಲಿನ ಕುಡಿ ತಿಂದು ಸಿಕ್ಕ ಹಾಳುಗೋಡೆಯ ನೆರಳಲ್ಲಿ ವಿಶ್ರಮಿ ಸುವ ಸಂತೃಪ್ತ ಜೀವಿ ಅದು. ಒಡೆಯ ಬಯಸಿದಾಗೆಲ್ಲ ತನ್ನ ಸೇವೆಯನ್ನು ಒದಗಿ ಸಲು ಕತ್ತೆ ಯಾವಾಗಲೂ ಸಿದ್ಧ. ಸಂಚು ಸೇಡು-ಮುಯ್ಯಿ ಪದಗಳು ಕತ್ತೆಗೆ ತಿಳಿದೇ ಇಲ್ಲ.

ವ್ಯಾಸರು ಹೇಳಿದ್ದನ್ನು ನೆನಪು ಮಾಡಿ ಕೊಳ್ಳಿ.

"ಗತಶೋಕಂ ನ ಕುರ್ವೀತ
ಭವಿಷ್ಯಂ ನೈವ ಚಿಂತಯೇತ್
ವರ್ತಮಾನೇಷು ಕಾಲೇಷು
ವರ್ತಯಂತಿ ವಿಚಕ್ಷಣಾಃ"

ವಿಚಕ್ಷಣರು ಕಳೆದು ಹೋದ ಕಾಲದ ದುಃಖವನ್ನು ನೆನಪಿಟ್ಟುಕೊಳ್ಳುವುದಿಲ್ಲ ವಂತೆ. ನಾಳೆ ಏನಾದೀತು ? ಎಂದೂ ಯೋಚಿಸುವುದಿಲ್ಲವಂತೆ. ಅವರು ಇಂದಿನ ಬದುಕನ್ನು ಹಸನು ಮಾಡಿಕೊಳ್ಳುವುದ ನ್ನಷ್ಟೆ ಚಿಂತಿಸುತ್ತಾರಂತೆ. ಈ ಸೂಕ್ತಿಯ ನೆಲೆಯಲ್ಲಿ ಯೋಚಿಸುವುದಿದ್ದರೆ ಕತ್ತೆಗಿಂತ ವಿಚಕ್ಷಣ ಪ್ರಾಣಿ ಇನ್ನೊಂದಿಲ್ಲ. "ಪಾಲಿಗೆ ಬಂದದ್ದು ಪಂಚಾಮೃತ"—ಇದು ಕತ್ತೆಯ ಬದುಕಿನ ಧ್ಯೇಯ.

ವ್ಯಾಸರ ಈ ಮಾತು ಭಗವದ್ಗೀತೆಯಲ್ಲಿ ಹೇಳಿದ ಸ್ಥಿತಪ್ರಜ್ಞನ ಲಕ್ಷಣಗಳಿಗೆ ತೀರ ಸಮೀಪದಲ್ಲಿದೆ. ಭೌತಿಕವಾದ ಮತ್ತು ಮಾನಸಿಕವಾದ ಒತ್ತಡಗಳಿಂದ ತಳಮಳ

ಗೊಳ್ಳದೆ ಇರುವುದು ಸ್ಥಿತಪ್ರಜ್ಞನ ಲಕ್ಷಣ ಎಂದಲ್ಲವೆ ಗೀತೆಯಲ್ಲಿ ಹೇಳಿದ್ದು ; ತಳಮಳ ಗೊಳ್ಳದ ಸಂತೃಪ್ತಿ ಕತ್ತೆಯ ಜನ್ಮಜಾತ ಗುಣ. ರಸ್ತೆಯ ಬದಿಯಲ್ಲಿ ತಾಸುಗಟ್ಟಲೆ ಸುಮ್ಮನೆ ನಿಂತಿರುವ ಕತ್ತೆಗಳನ್ನು ನಾನು ನೋಡಿದ್ದೇನೆ. 'ಸುಮ್ಮನೆ ನಿಂತಿರುವ' ಎಂದು ಹೇಳಿದರೆ ಏನೂ ಹೇಳಿದ ಹಾಗೆ ಆಗಲಿಲ್ಲ. ಆ ಹೊತ್ತಿನಲ್ಲಿ ಕತ್ತೆಯ ಮೈಯ ಒಂದು ಕೂದಲೂ ಅಲುಗುವುದಿಲ್ಲ ; ಅಷ್ಟು ದೊಡ್ಡ ಕಿವಿಯಿದ್ದೂ ರವೆಯಷ್ಟೂ ಚಲಿಸುವುದಿಲ್ಲ. ಕತ್ತೆ ಹಾಗೆ ನಿಂತಿರುವಾಗ ರಸ್ತೆಯ ಮೇಲೆ ಬಸ್ಸು-ಲಾರಿ-ಕಾರುಗಳು ಓಡಾಡುವುದು ಹಾಗಿರಲಿ, ಭೂಕಂಪವೇ ಆದರೂ ಕತ್ತೆ ಕದಲುವುದಿಲ್ಲ. ಮಳೆಯೇನು, ಬೆಂಕಿಯೆ ಸುರಿಯುತ್ತಿದ್ದರೂ ನಿಂತ ಕತ್ತೆ ಕದಲದು. ಅಧಿಭೌತಿಕ, ಅಧಿದೈವಿಕ, ಅಧಿ ಆತ್ಮಿಕವಾದ ಯಾವೊಂದು ಒತ್ತಡಕ್ಕೂ ಕತ್ತೆ ಮಣಿಯದು !

ಕುದುರೆಗಿರದ ಒಂದು ಸೌಲಭ್ಯವೂ ಇದೆ ಕತ್ತೆಗೆ. ಅದೆಂದರೆ-ಇಚ್ಛಾಮರಣ. ಕತ್ತೆಯು ತಾನಾಗಿ ಇಷ್ಟಪಡುವವರೆಗೂ ಅದಕ್ಕೆ ಸಾವು ಬಾರದು. ಇಲ್ಲ ನಿರಶನ ಕೈಗೊಳ್ಳಬೇಕು, ಇಲ್ಲ ವಾಹನಗಳ ಗಾಲಿಗೆ ತಲೆಯೊಡ್ಡಬೇಕು. ಅದು ವಿನಾ ಸಾಯದು. ಕುದುರೆಯನ್ನು ರಾಜರು ಯಜ್ಞಕ್ಕೆ ಬಲಿಕೊಡುತ್ತಿದ್ದರಂತೆ. 'ಅಶ್ವಮೇಧ' ಎಂದರೆ ಮತ್ತಿನ್ನೇನು? ಕುದುರೆಯ ಬಲಿ, ಅಲ್ಲವೆ? ರಾಜನನ್ನು ಹೊತ್ತು ತಿರುಗುತ್ತೇನೆನ್ನುವ ಕುದುರೆ ಹುಚ್ಚುನಾಯಿಯ ಹಾಗೆ ಸಾಯಿಸಿಕೊಳ್ಳುವುದು ತಪ್ಪಲಿಲ್ಲ. ಕತ್ತೆಗೆ ರಾಜರ ಸಂಪರ್ಕವೂ ಇಲ್ಲ ; ಸಾಯಿಸಿಕೊಳ್ಳುವ ಕಷ್ಟವೂ ಇಲ್ಲ. ದೊಡ್ಡವರ ಜತೆಗಿರುವ ಕುದುರೆ ಸಾಯಿಸಿಕೊಳ್ಳಲು ಸಿದ್ಧವಾಗಿಯೆ ಇರಬೇಕು ; ಬಡವನ ಜತೆಗಿರುವ ಕತ್ತೆಗೆ ಆ ಕಷ್ಟವಿಲ್ಲ!

ಸಂತೃಪ್ತಿ ಬಹಳ ದೊಡ್ಡ ಗುಣ.

ಆ ಗುಣ ಕತ್ತೆಗಿದೆ. ಆದರೆ ಇದನ್ನು ದಡ್ಡತನ ಎಂದು ಮನುಷ್ಯರು ತಿಳಿದುಕೊಂಡಿದ್ದಾರೆ.

---

ಸತ್ಯವನ್ನೇ ಹೇಳಬೇಕು. ಕೋಪ ಮಾಡಿಕೊಳ್ಳಬಾರದು. ಯಾರಾದರೂ ಸ್ವಲ್ಪ ಕೇಳಿದರೂ ಹೆಚ್ಚಾಗಿಯೇ ಕೊಡಬೇಕು. ಈ ಮೂರನ್ನು ಮಾಡಿದರೆ ದೇವತೆಗಳ ಸಮೀಪಕ್ಕೆ ಹೋಗಬಹುದು.

ಪಾಪದಿಂದ ದುಃಖ ಹುಟ್ಟುತ್ತದೆ ; ಪುಣ್ಯದಿಂದ ಸುಖ ಹುಟ್ಟುತ್ತದೆ.

—ಬುದ್ಧ

# ...ಾಗದದ ದೋಣಿ

**ಡಾ|| ಬಿ. ಜಿ. ಕನಕೇಶಮೂರ್ತಿ**
ಕನ್ನಡ ಉಪನ್ಯಾಸಕ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಹಗರಿಬೊಮ್ಮನಹಳ್ಳಿ, ಬಳ್ಳಾರಿ–೫೮೩೨೧೨

...ವಿ ಜೀವ್ರೊ, ನನ್ನ ಜೊತೆ ಸಗಣಿ ಎತ್ತುವ ...ಕ್ಕೆ ಬರ್ತೀಯಾ?" ತಾನಿಯೋ ಜೀವ್ರೊ ...ನ್ನು ಕೇಳಿದ.

ಜೀವ್ರೊ ಬಂಡೆಯ ಮೇಲೆ ಕುಳಿತು ...ಂಡು ಕಾಗದದ ದೋಣಿಗಳನ್ನು ...ಮಾಡುತ್ತಾ, ಹರಿಯುತ್ತಿರುವ ತೊರೆಯ ...ೀರಿನಲ್ಲಿ ಅವುಗಳನ್ನು ತೇಲಿ ಬಿಡುತ್ತಿದ್ದ. ...ಸ್ವಲ್ಪ ದೂರ ತೇಲುತ್ತಾ ಹೋಗುತ್ತಿದ್ದ ...ೋಣಿ ಹರಿಯುವ ನೀರಿನ ರಭಸಕ್ಕೆ ಅಲ್ಲಾಡ ...ೊಡಗುತ್ತಿತ್ತು.

"ಈ ಹೊತ್ನಲ್ಲಿ ನಿನಗೆಲ್ಲೂ ಸಗಣಿ ಸಿಗೋ ...ಲ್ಲ ಮಳೆ ನೀರು ಎಲ್ಲವನ್ನೂ ಕೊಚ್ಚ ...ೊಂಡು ಹೋಗಿಲ್ವೇನು?" ಕತ್ತೆತ್ತಿಯೂ ...ೋಡದೆ ಉತ್ತರಿಸಿದ ಜೀವ್ರೊ ದೋಣಿ ...ಳನ್ನು ಮಾಡುವುದನ್ನು ಮುಂದುವರಿಸಿದ.

"ಇರಬಹುದು, ಆದರೆ ಇಷ್ಟೊತ್ತಿಗೆಲ್ಲಾ ...ಣಗಿರುತ್ತೆ. ಎಲ್ಲಾದರೂ ಸ್ವಲ್ಪ ಸಗಣಿ ...ಬಿದ್ದಿರಬಹುದು. ಬಾರೋ, ಬೇಗ ಬರೋಣ. ...ನಮ್ಮ ಗೂಡೆ ತೂತು ಬಿದ್ದಿದೆ. ಅದನ್ನು ...ಮುಚ್ಚಬೇಕು."

ಜೀವ್ರೊ ಇನ್ನೊಂದು ದೋಣಿ ಮಾಡಿದ. ಅದನ್ನು ನೀರಿನಲ್ಲಿ ತೇಲಿಬಿಟ್ಟ. ಸ್ವಲ್ಪದೂರ ತೇಲಿಹೋದ ಅದೂ ಕೂಡ ಮುಳುಗಿ ಹೋಯಿತು.

"ದಯವಿಟ್ಟು ಬಾರೊ!"

"ಆಕಾಶವೆಲ್ಲಾ ಮಳೆಯ ಮೋಡಗಳಿಂದ ತುಂಬಿಹೋಗಿದೆ. ಈಗ ತಾನೆ ಒಣಗಿದೆ ಆದರೆ ಇನ್ನೇನು ಸ್ವಲ್ಪ ಹೊತ್ತಲ್ಲೇ ಸುರಿಯುವುದಕ್ಕೆ ಶುರುವಾಗುತ್ತೆ."

"ಅದು ಬರೋದಕ್ಕೆ ಮೊದಲೇ ವಾಪಸ್ಸು ಬಂದುಬಿಡೋಣ."

"ಸರಿ, ಬಾ." ಜೀವ್ರೊ ಮೇಲೆದ್ದ. ಅವನು ಮತ್ತು ತಾನಿಯೋ ಇಬ್ಬರೂ ಕಾಡಿನ ಕಡೆ ಹೆಜ್ಜೆ ಹಾಕಿದರು. ತಾನಿಯೋ ತನ್ನ ತಲೆಯ ಮೇಲೆ ಹ್ಯಾಟಿನ ಹಾಗೆ ಮಂಕರಿಯನ್ನು ಹಾಕಿಕೊಂಡು ನಗತೊಡಗಿದ. "ಜೀವ್ರೊ ಇದರ ತೂತುಗಳಿಂದ ಎಷ್ಟು ಚೆನ್ನಾಗಿ ನಾನು ನೋಡಬಹುದು ಗೊತ್ತಾ. ನೋಡು, ಅಲ್ಲೊಂದು ಮಿಂಚುಳ್ಳಿ ಆ ಕೊಂಬೆಯ ಮೇಲೆ ಕುಳಿತಿದೆ."

---

ಮೂಲ : ಕುಂದನಿಕಾ ಕಪಾಡಿಯಾ ಅವರ ಗುಜರಾತಿ ಕಥೆ.

"ಎಲ್ಲೋ? ನನಗೆಲ್ಲೂ ಕಾಣ್ತಾನೆ ಇಲ್ಲಾ."

"ಈ ಮಂಕರಿ ಹಾಕಿಕೋ, ಆಗ ನೀನೂ ನೋಡಬಹುದು."

ಜೀವೊ ಮಂಕರಿಯನ್ನು ತನ್ನ ತಲೆಯ ಮೇಲೆ ಹಾಕಿಕೊಂಡು ನಗಲಾರಂಭಿಸಿದ. "ನಾವು ಹೀಗೆ ನಮ್ಮನ್ನು ಮುಚ್ಚಿಕೊಂಡರೇ ಯಾರೂ ನಮ್ಮನ್ನು ಗುರುತಿಸೋದಕ್ಕೆ ಆಗಲ್ಲ, ಹೌದಲ್ಲವೇನೋ?"

"ಏ, ನೋಡು, ಅದು ಅಲ್ಲಿದೆ," ತಾನಿಯೋ ಓಡಿಹೋಗಿ ಅಲ್ಲಿ ಬಿದ್ದಿರುವ ಸಗಣಿಯನ್ನು ಎತ್ತಿಕೊಂಡ.

ಜೀವೊ ಮಂಕರಿಯನ್ನು ಅವನಿಗೆ ವಾಪಸ್ಸು ಕೊಟ್ಟ. ಇಬ್ಬರೂ ಎಚ್ಚರಗಣ್ಣುಗಳಿಂದ ಸಗಣಿಯನ್ನು ಹುಡುಕುತ್ತಾ ಹೊರಟರು. ಮಳೆ ಬಿದ್ದಿದ್ದರಿಂದ ಎಲ್ಲ ಕಡೆ ಹುಲ್ಲು ಬೆಳೆದಿತ್ತು. ಹುಲ್ಲಿನ ಮೇಲೆ ಹೆಜ್ಜೆ ಹಾಕಿದಂತೆ ಕೆಸರು ಅವರ ಪಾದಗಳಿಗೆ ಮೆತ್ತಿಕೊಳ್ಳುತ್ತಿತ್ತು. ಮೃದುವಾದ ಮಣ್ಣಿನ ಮೇಲೆ ಹೆಜ್ಜೆ ಇಟ್ಟಾಗ ಕೂಡಲೇ ಅದು ನೀರಿನಿಂದ ತುಂಬಿ ಹೋಗುತ್ತಿತ್ತು. ಜೀವೊ ನಗಲಾರಂಭಿಸಿದ. ಇಷ್ಟು ಸ್ವಲ್ಪ ನೀರಿನಲ್ಲಿ ಹೋಗೋದಕ್ಕೆ ಇನ್ನೊಂದು ಚಿಕ್ಕ ದೋಣಿ ಬೇಕಾಗ್ತದೆ. ಆಗಲೂ ಅದೇನು ತೇಲುವುದಿಲ್ಲ ಅಥವಾ ಮುಳುಗುವುದೂ ಇಲ್ಲ. ಹಾಗಾದರೆ, ಆ ದೋಣಿಗೆ ಏನಾಗ್ತದೆ? "ಏ, ತಾನಿಯೋ ತೇಲಲಾಗದ ಅಥವಾ ಮುಳುಗಲೂ ಆಗದ ದೋಣಿಗೆ ಏನಾಗ್ತದೆ?"

'ನನಗೇನು ಗೊತ್ತು? ನಾನು ನಿಜವಾದ ದೋಣಿಯನ್ನು ನೋಡಿಯೇ ಇಲ್ಲ."

"ಇರಲಿ, ಅದನ್ನೇ ಹೇಳೋ."

"ಆಮೇಲೆ—ಆಮೇಲೆ ಅದು ನೀರಿನಲ್ಲಿ ನೆನೆಯುತ್ತೆ, ನೆನೆದು ಭಾರವಾಗುತ್ತೆ, ಭಾರವಾಗುತ್ತ ಬರುತ್ತೆ. ಕಡೆಗೆ ಅದರ ಉಸಿರು ಹಿಂಗಿ ಹೋಗುತ್ತೆ."

"ಯಾರ ಉಸಿರು?"

"ದೋಣೀದು."

"ಬಾರೊ, ಬಾರೊ, ಎಲ್ಲಾದರೂ ದೋಣಿ ಉಸಿರಾಡುತ್ತಾ?"

"ಹಾಗಿದ್ದರೆ ನನ್ನನ್ನು ಯಾಕೆ ಕೇಳಿದೆ?" ತಾನಿಯೋ ನಕ್ಕು, ಸಗಣಿ ಬಿದ್ದಿರುವುದನ್ನು ಕಂಡವನೇ ಅತ್ತ ಕಡೆ ಓಡಿದ.

ಜೀವೊ ಸ್ವಲ್ಪ ಹೊತ್ತು ಸುಮ್ಮನಿದ್ದ. ಆಮೇಲೆ, ತನಗೆ ತಾನೇ ಮಾತಾಡಿಕೊಳ್ಳುವವನಂತೆ ಹೇಳಿದ, "ನಾನು ದೊಡ್ಡವನಾದಾಗ, ನಿಜವಾದ ದೋಣಿಯನ್ನು ತಗೋತೀನಿ, ಚೆನ್ನಾಗಿರೋದು........ ಫಳ ಫಳ ಹೊಳೆಯೋ ಬಿಳಿ ಹಾಯಿ ಇರೋ ಮರದ ದೋಣಿ ತಗೋತೀನಿ."

ಅವರು ಸಗಣಿಯನ್ನು ಹುಡುಕುತ್ತಾ ಸ್ವಲ್ಪ ದೂರ ಹೋಗಿದ್ದರು. ತಣ್ಣನೆಯ ಗಾಳಿ ಬೀಸುತ್ತಿತ್ತು. ಸಣ್ಣ ಸಣ್ಣ ಮರಗಳು ಮತ್ತೆಮತ್ತೆ ಒಂದರ ಕಡೆಗೊಂದು ತೂಗಾಡುತ್ತಿದ್ದವು. ಎತ್ತರವಾಗಿ, ನೇರವಾಗಿ ಬೆಳೆದಂಥವು ನಡುಗುತ್ತ ಏನೇನೋ ಹೇಳುವುದಕ್ಕೆ ಕಾತರವಾಗಿರುವಂತೆ ತೋರುತ್ತಿದ್ದವು. ತಕ್ಷಣ ಜಡಿಮಳೆ ಆರಂಭವಾಯಿತು, ಜೀವೊ ಗಾಬರಿಗೊಂಡ, "ತಾನಿಯೋ, ಮಳೆ ಬರುವುದಕ್ಕೆ ಶುರುವಾಯಿತು."

"ಈಗ ನಿಲ್ಲುತ್ತೆ" ತಾನಿಯೋ ಉತ್ತರಿಸಿದ. ಆದರೆ ಅವನೂ ದಿಗಿಲುಗೊಂಡಿದ್ದ.

ಎಲ್ಲ ಸಗಣಿ ತನ್ನ ಮಂಕರಿಯಿಂದ ಸೋರಿ ಹೋಗಿ ಬಿಡುತ್ತೆ. ಸಗಣಿಯನ್ನು ಎಲ್ಲಿ ಮುಚ್ಚಿಡುವುದು ?

ಜಡಿಮಳೆ ಜೋರಾಗುತ್ತಾ ಬಂತು. ಧಾರಾಕಾರವಾಗಿ ಸುರಿಯತೊಡಗಿತು. ಕ್ಷಣಾರ್ಧದಲ್ಲೇ ಆಕಾಶವೆಲ್ಲ ಕತ್ತಲು ಕವಿಯಿತು. ಗಾಳಿ ಬಿರೋ ಎಂದು ಬೀಸತೊಡಗಿತು. ಉದ್ದವಾದ ಸಿಡಿಲಿನ ಗೆರೆಯೊಂದು ಮೋಡದ ಒಂದು ತುದಿಯಿಂದ ಇನ್ನೊಂದು ತುದಿಗೆ ವೇಗವಾಗಿ ಚಲಿಸಿತು. ತರುವಾಯ ಎಂಚಿನ ಹೊಳೆಯುವ ಚೂಪಾದ ಭಾಗಗಳಿಂದ ಮೋಡಗಳು ಬಿರುಕು ಬಿಡಲಾರಂಭಿಸಿದವು.

"ತಾನಿಯೋ, ಓಡು !" ಎಂದು ಜೀವೊ ಭಯದಿಂದ ಹೇಳಿದವನೇ, ಆಶ್ರಯಕ್ಕಾಗಿ ಮರದ ಕೆಳಗೆ ಓಡಿದ. ತಾನಿಯೋ ಅವನನ್ನು ಹಿಂಬಾಲಿಸಿದ.

"ಅಯ್ಯೋ ದೇವರೇ !" ಜೀವೊ ಭಯ, ಹೆದರಿಕೆಗಳಿಂದ ಕಿರುಚಿದ. "ನನ್ನನ್ನು ಏನೋ ಕಚ್ಚಿದೆ."

"ಇದಿರಲಾರದು ! ಏನದು ?" ತಾನಿಯೋ ನೋಡಿದ, ಅವನ ಕಣ್ಣುಗಳು ದೊಡ್ಡದಾದವು. ಹೊಳೆಯುತ್ತಿರುವ, ಉದ್ದವಾದ ಕಪ್ಪು ಹಾವೊಂದು ಮರದ ಹಿಂದಿನ ಬಿಲದೊಳಗೆ ಹೋಗುವುದನ್ನು ಕಂಡ. ಭಯದಿಂದ ತಣ್ಣಗಾದ.

"ಅಯ್ಯೋ ದೇವರೇ !" ಜೀವೊ ತನ್ನ ಕಾಲನ್ನು ಹಿಡಿದುಕೊಂಡು ಕೆಳಗೆ ಕುಳಿತುಕೊಂಡ, "ತಾನಿಯೋ, ನಿಜವಾಗಿ ಏನೋ ನನ್ನನ್ನು ಕುಟುಕಿದೆ, ಉರಿತಾ ಇದೆ !"

ತಾನಿಯೋ ನಡುಗುತ್ತ ಅವನ ಹತ್ತಿರ ಹೋಗಿ ಕಾಲನ್ನು ನೋಡಿದ. ಅಲ್ಲಿ ಕಚ್ಚಿದ ಎರಡು ಗುರುತುಗಳಿದ್ದವು. ಮುಂದಿನ ಎರಡು, ದೂರದಲ್ಲಿಯೂ, ಉಳಿದವುಗಳಿಂದ ಬೇರೆಯಾಗಿಯೂ ಇದ್ದವು. ತಾನಿಯೋಗೆ ಅದೇನೆಂದು ಮನವರಿಕೆಯಾಯಿತು. ಹಿಂದೆ ಅವನ ಚಿಕ್ಕಪ್ಪ ಇದೇ ರೀತಿ ಹಾವಿನಿಂದ ಕಚ್ಚಿಸಿಕೊಂಡು ಸತ್ತುಹೋಗಿದ್ದ. ಆದರೆ ಬಹುಶಃ ಜೀವೊ ತನಗೆ ಕಚ್ಚಿರುವುದು ಎಂಥ ಪ್ರಾಣಿಯಿರಬೇಕೆಂದು ತಿಳಿದಿರಲಾರ.

ಅಳುಕಿನಿಂದಲೇ ಅವನು ಕಚ್ಚಿದ ಜಾಗವನ್ನು ಮುಟ್ಟಿದ. ಜೀವೊ ಜೋರಾಗಿ ಕಿರುಚಿದ. "ಬೇಡ ಮುಟ್ಟಬೇಡ, ಮುಟ್ಟಬೇಡ, ಉರಿತಾ ಇದೆ." ಸ್ವಲ್ಪ ಸಮಯದಲ್ಲೇ ಕಚ್ಚಿದ ಜಾಗ ಕೆಂಪಗಾಯಿತು. ಜೊತೆಗೆ ಉರಿ, ಊತವೂ ಉಂಟಾಯಿತು.

ತಾನಿಯೋ ಕಂಪಿಸುತ್ತ ಹೇಳಿದ, "ಬಾ ಜೀವೊ, ಬೇಗ ಊರಿಗೆ ಓಡಿಹೋಗೋಣ —ನೇರ ಆ ಮುನ್ಸಿಪಲ್ ಆಸ್ಪತ್ರೆಗೆ ಹೋಗೋಣ."

ಜೀವೊ ಮೇಲೆದ್ದು ಸ್ವಲ್ಪ ದೂರ ಓಡಿದ. ಆದರೆ ಕೂಡಲೇ ನಿಂತು, "ತಾನಿಯೋ, ನಾನು ಓಡಲಾರೆ. ಸ್ವಲ್ಪ ಶಕ್ತಿಯೂ ನನ್ನ ಕಾಲಿನಲ್ಲಿ ಉಳಿದಿಲ್ಲ."

"ಹಾಗಾದರೆ ಬಾ, ನನ್ನ ಭುಜದ ಮೇಲೆ ಕೈ ಹಾಕು. ನಾವು ಜೋರಾಗಿ ನಡೆದರೆ, ಬೇಗ ಊರು ಸೇರ್ತೀವಿ." ತಾನಿಯೋ ಆತಂಕದಿಂದ ನುಡಿದ.

ಸುರಿಯುವ ಮಳೆಯಲ್ಲಿ ಅವರಿಬ್ಬರೂ ನಡೆದರು. ಆದರೆ ಇನ್ನೊಂದು ಮರದ ಹತ್ತಿರ ಹೋಗುತ್ತಲೇ ಜೀವೊ ಕುಳಿತು

5

ಬಿಟ್ಟ. ಅವನ ಕಾಲ ಕೆಳಗಿನ ಹಸಿರು ಹುಲ್ಲು ಅಪ್ಪಚ್ಚಿಯಾಯಿತು.

“ನನ್ನಿಂದ ನಡೆಯೋಕೆ ಆಗೊಲ್ಲ ತಾನಿಯೋ, ನನ್ನ ಕಾಲು ತುಂಬಾ ಭಾರ ವಾಗಿದೆ.”

ತಾನಿಯೋ ಇನ್ನೇನು ಅತ್ತುಬಿಡುವವ ನಿದ್ದ.

ಅವನು ಜೀವೊನನ್ನು ಕರೆದು ತಪ್ಪು ಮಾಡಿದ್ದ. ಅವನೇನಾದರೂ ನಾಗರಹಾವಿ ನಿಂದ ಕಚ್ಚಿಸಿಕೊಂಡಿದ್ದರೆ? ಅದು ಕತ್ತಲೆ ಯಷ್ಟು ಕಪ್ಪಾಗಿತ್ತು. ಕಂದುಬಣ್ಣದ್ದಕ್ಕಿಂತ ಕಪ್ಪು ಬಣ್ಣದ್ದು ತುಂಬಾ ವಿಷವಂತೆ. ಅವನಿಗೆ ತಲೆ ಸುತ್ತಿದಂತಾಯ್ತು. ಸಮಾ-ಧಾನಪಡಿಸುತ್ತ ಅವನು ಹೇಳಿದ, “ಬಾ ಜೀವೊ, ಧೈರ್ಯ ತಂದುಕೊ, ನಾವು ಬೇಗ ಸೇರ್ತೀವಿ.”

ತುಸು ಮುಂಪರಿನಿಂದಲೂ, ತುಸು ಅಸಹಾಯಕತೆಯಿಂದಲೂ ಜೀವೊ ತನ್ನ ತಲೆಯನ್ನು ಅಲ್ಲಾಡಿಸಿದ. “ತಾನಿಯೋ, ನನ್ನಿಂದ ಆಗುತ್ತಿದ್ದರೆ ಓಡ್ತಿರಲಿಲ್ಲವಾ?” ಆ ದಿನ, ನದಿಯಲ್ಲಿ ಪ್ರವಾಹ ಬಂದಾಗ ನಾವು ಹೇಗೆ ಓಡಿದ್ವೀವಿ? ನಾನು ಎಲ್ಲರಿ ಗಿಂತಲೂ ಮುಂದೆ ಇದ್ದೆ.” ಚಿನ್ನದ ನೆನಪಿ ನಲ್ಲಿ ಮ್ಯಸುರೆತ. ಆಮೇಲೆ ತನಗುಂಟಾದ ಅತಿಯಾದ ಯಾತನೆ ಹಾಗೂ ಭಯದಿಂದಾಗಿ ಆ ಚಿನ್ನದ ಬಣ್ಣ ಚೂರು ಚೂರಾಗಿ ಒಡೆದು ಹೋಯಿತು.

“ತಾನಿಯೋ, ಕಾಲು ತುಂಬಾ ಭಾರ ವಾಯ್ತು. ನಾನೀಗ ಇದನ್ನು ಮೇಲೆತ್ತುವು ದಕ್ಕೂ ಆಗೊಲ್ಲ. ನನಗೆ ಏನು ಕಚ್ಚಿ ದೆಯೋ?”

ತಾನಿಯೋನ ಕಣ್ಣುಗಳು ಭಯದಿಂದ ಬಿಳುಚಿಕೊಂಡವು. ಬೆಳೆದಿರುವ ಹುಲ್ಲು, ನೀರಿನ ಪ್ರವಾಹ, ಸುತ್ತಲೂ ಆವರಿಸಿರುವ ಕತ್ತಲು ಎಲ್ಲವೂ ಒಂದರೊಳಗೊಂದು ಕಲಸಿ ಕೊಂಡಂತಾಗಿ ಮಬ್ಬು ಕವಿಯಿತು. ಸುತ್ತ ಮುತ್ತಲೆಲ್ಲ ಅನಂತವಾದ ಮುಸುಕು ಕವಿದ ವಾತಾವರಣ.

ಮಳೆ ಬೀಳುತ್ತಲೇ ಇತ್ತು. ಇಡೀ ನೆಲ ನೀರಿನಿಂದ ತೋಯ್ದು ಹೋಗಿತ್ತು. ತಾನಿಯೋ ಮಂಜಿನ ದೈತ್ಯಾಕಾರದ ಗುಳ್ಳೆ ಯಂತಿರುವ ಆಕಾಶದ ಕಡೆ ದೀನನಾಗಿ ದಿಟ್ಟಿಸಿದ. ತಾನು ಯಾರನ್ನು ಕುರಿತು ಹೇಳು ತ್ತಿದ್ದೇನೆ ಎಂಬುದನ್ನು ಪ್ರಕಟಪಡಿಸದೆ ನುಡಿದ, “ಇನ್ನು ಮೇಲೆ ಎಂದಿಗೂ ಸಗಣಿ ಎತ್ತುವುದಕ್ಕೆ ನನ್ನ ಜೊತೆ ಜೀವೊನ ಕರೆದು ಕೊಂಡು ಹೋಗುವುದಿಲ್ಲ. ದಯವಿಟ್ಟು ಇದೊಂದು ಸಾರಿ ಅವನನ್ನು ಹುಷಾರು ಮಾಡು. ದಯವಿಟ್ಟು ಇದೊಂದು ಸಾರಿ ನನಗೆ ಉಪಕಾರ ಮಾಡು. ನಾನು ಇನ್ನೆಂದಿಗೂ ಮತ್ತೆ ಏನನ್ನೂ ಕೇಳುವು ದಿಲ್ಲ.”

“ಅಯ್ಯೋ ದೇವರೇ!” ಎಂದು ಜೀವೊ ಅಶಕ್ತನಾಗಿ ರೋದಿಸಿದ.

ಕೂಡಲೇ ತಾನಿಯೋನ ಮನಸ್ಸಿನಲ್ಲಿ ಒಂದು ಉಪಾಯ ಹೊಳೆಯಿತು.

“ಜೀವೊ, ದಯವಿಟ್ಟು ನೀನು ಇಲ್ಲಿ ಕಾಯ್ತೀಯಾ? ನಾನು ಓಡಿ ಹೋಗಿ ಡಾಕ್ಟರನ್ನು ಕರ್ಕೊಂಡು ಬರೋದಕ್ಕೆ ಅಪ್ಪಂಗೆ ಹೇಳ್ತೀನಿ.”

ಜೀವೊ ಮರುಕದಿಂದ ಅವನನ್ನು ನೋಡಿದ. “ನೀನು ಬೇಗ ಬರ್ತೀಯಾ?”

"ಓ, ಈಗಲೇ, ಎಷ್ಟು ಬೇಗನೇ ಹೋಗ್ತೀನೋ ಅದಕ್ಕಿಂತ ಮೊದಲೇ ಬರ್ತೀನಿ."

"ಸೊಂಟದವರೆಗೂ ನನ್ನ ಕಾಲು ಸೀಸ ದಷ್ಟು ಭಾರ ಆಗಿಬಿಟ್ಟಿದೆ."

ಕೂಡಲೇ ತಾನಿಯೋ ತನ್ನ ಚಿಕ್ಕಪ್ಪ ನನ್ನು ನೆನಸಿಕೊಂಡ. ಅವನು ಹೇಳಿದ, ಜೀವೊ, ದಯವಿಟ್ಟು ನಿದ್ದೆ ಮಾಡಬೇಡ". ದ್ದೆ ವಿಷದ ಪರಿಣಾಮವನ್ನು ಹೆಚ್ಚಿಸು ತ್ತದೆ ಎಂಬುದನ್ನು ಅವನಿಗೆ ಹೇಳಲಾಗಲಿಲ್ಲ.

"ನಾನು ನಿದ್ದೆ ಮಾಡೊಲ್ಲ," ಎಂದು ಹೇಳಿದ ಜೀವೊ ಕೂಡಲೇ ತೂಕಡಿಸತೊಡ ಿದ.

ಜೀವೊನ ತಂದೆಯ ಉರಿವ ಕೆಂಗಣ್ಣು ಗಳನ್ನು ನೆನಪಿಸಿಕೊಂಡ ತಾನಿಯೋ ಕೂಡಲೇ ನಡುಗಲಾರಂಭಿಸಿದ. "ಓ, ೇವತೆಯೇ, ಓ, ಗಣೇಶ, ಓ ಹನುಮಂತ, ಯವಿಟ್ಟು ಅವನನ್ನು ಹುಷಾರು ಮಾಡಿರಿ, ಂದೇ ಒಂದು ಸಾರಿ. ನಾನು ನಿಮಗೆ ೈವೇದ್ಯ ಮಾಡ್ತೀನಿ."

"ತಾನಿಯೋ, ನನಗೆ ತುಂಬಾ ನಿದ್ದೆ ಬರ್ತಿದೆ."

ತಾನಿಯೋ ಜೋರಾಗಿ ಅಳತೊಡಗಿದ. ಅವನು ಹೇಳಿದ, "ಜೀವೊ, ದಯವಿಟ್ಟು ಸ್ವಲ್ಪ ಹೊತ್ತು ನಿದ್ದೆ ಮಾಡಬೇಡ. ನಾನು ಬೇಗ ಹೋಗಿ ಓಡಿ ಬರ್ತೀನಿ."

ಜೀವೊ ತನ್ನ ತಲೆಯಲ್ಲಾಡಿಸುತ್ತಾ ಹೇಳಿದ, "ತಾನಿಯೋ ಜಾಸ್ತಿ ಹೊತ್ತು ನನ್ನಿಂದ ಎದ್ದಿರೋಕೆ ಆಗೊಲ್ಲ " ಮತ್ತೆ ಅವನು ತೂಕಡಿಸಲಾರಂಭಿಸಿದ.

ತಾನಿಯೋ, ಅಳುತ್ತಲೇ ಅವನನ್ನು ಅಲುಗಾಡಿಸುತ್ತ, "ಜೀವೊ, ದಯವಿಟ್ಟು ನಿನ್ನ ಕಣ್ಣುಗಳನ್ನು ತೆಗೆಯೋ, ಸ್ವಲ್ಪ ಹೊತ್ತು ಅಷ್ಟೆ. ನಾನು ಬೇಗ ವಾಪಸ್ಸು ಬಂದುಬಿಡ್ತೀನಿ. ದಯವಿಟ್ಟು ಸ್ವಲ್ಪ ಹೊತ್ತು ಎಚ್ಚರವಾಗಿರು—ಆಮೇಲೆ, ಎಲ್ಲಾ ನನ್ನ ಗೋಲಿಗಳನ್ನು, ಗಿರಿಗಿಟ್ಲೆ ಯನ್ನೂ ನಿನಗೇ ಕೊಡ್ತೀನಿ!"

ತುಂಬಾ ಪ್ರಯಾಸದಿಂದ ಜೀವೊ ತನ್ನ ಕಣ್ಣುಗಳನ್ನು ತೆರೆದು ಮಾಮೂಲಿನಂತೆ ಕೇಳಿದ, "ತಾನಿಯೋ, ಮಂಕರಿ ಎಲ್ಲಿ?"

"ಅಗೋ ಅಲ್ಲಿ ಬಿದ್ದಿದೆ."

ಸ್ವಲ್ಪ ಹೊತ್ತಿನ ಮೇಲೆ, ಜೀವೊ ಕ್ಷೀಣಿಸಿದ ದನಿಯಲ್ಲಿ ಹೇಳಿದ, "ತಾನಿಯೋ, ದಯವಿಟ್ಟು ನನ್ನನ್ನು ಆ ಮಂಕರಿಯಲ್ಲಿ ಕೂರಿಸಿ ನಿನ್ನ ತಲೆಯ ಮೇಲೆ ಹೊತ್ತು ಕೊಂಡು ಹೋಗು."

ತಾನಿಯೋ ಜೋರಾಗಿ ಅಳತೊಡಗಿದ, "ನನ್ನ ಕೈಯಲ್ಲಿ ಆಗೋಲ್ಲ, ಜೀವೊ! ನೀನು ನನಗಿಂತ ದೊಡ್ಡವನು. ನನ್ನಿಂದ ನಿನ್ನನ್ನು ಹೊತ್ತುಕೊಂಡು ಹೋಗೋಕೆ ಆಗೊಲ್ಲ."

"ಹಾಗಿದ್ದರೆ ಬೇಡ ತಮ್ಮಾ," ಜೀವೊ ಸಮ್ಮತಿಸಿ ನುಡಿದ. ನಿದ್ದೆ ಸಿಹಿಯಾಗಿಯೂ, ದೇಹ ಭಾರವಾದಂತೆಯೂ ಅನ್ನಿಸಿತು. ಈಗವನು ಸ್ವಲ್ಪವೂ ಚಲಿಸಲಾರದಾದ. ಸೊಂಟ ಗಟ್ಟಿಯಾಯಿತು. "ಶಾಲೆಯಲ್ಲಿ ನಮ್ಮ ಗುರುಗಳು ಕಥೆ ಹೇಳಿದ್ದರಲ್ಲಾ ಹಾಗೆ ನನ್ನ ಅರ್ಧ ಶರೀರ ಕಲ್ಲಾದಂತೆ ಆಗಿದೆ," ಎಂದು. ಅಂಥ ನಿದ್ರೆಯ ಸ್ಥಿತಿ ಯಲ್ಲೂ ಅವನು ನಕ್ಕ. ಗುರುಗಳು ಹೇಳಿ ದ್ದರು—ಶ್ರೀರಾಮ ತನ್ನ ಪಾದಗಳಿಂದ

ಕಲ್ಲನ್ನು ಸ್ಪರ್ಶಿಸಿದಾಗ, ಅದು ಹೆಣ್ಣಾಗಿ ಪರಿವರ್ತಿತವಾಯಿತು. ಅಲ್ಲಿ ಅವನಿಗೆ ದೇವರ ಅವತಾರದ ದರ್ಶನವಾಯಿತು. ನೀಲ ವರ್ಣದ ನಗುಮುಖ, ಕೈಯಲ್ಲಿ ಧನುಸ್ಸು. ಆದರೆ ರಾಮನಿಗಿಂತ ಶ್ರೀಕೃಷ್ಣನೇ ಸುಂದರನಾಗಿದ್ದಾನೆ. ಸೂರ್ಯನ ಬೆಳಕಿನಲ್ಲಿ ನವಿಲು ಗರಿಗಳು ಹೊಳೆಯುತ್ತವೆ. ಶಿವ ಸ್ವಲ್ಪವೂ ವೈವಿಧ್ಯವಿಲ್ಲದವನು. ಅವನು ತನ್ನ ಕೊರಳಿನ ಸುತ್ತ ಹಾವನ್ನು ಸುತ್ತಿಕೊಂಡು ಅಲೆಯುತ್ತಾನೆ...."

ಕೂಡಲೇ ಅಗೋಚರವಾದ ಉಸಿರಾಟದ ವಾಯು ಅವನ ಗಂಟಲಿನ ಮೂಲಕ ಗುಳಿಗುಳಿಸಲು ಪ್ರಾರಂಭಿಸಿತು. ಬೇಸಗೆಯ ಸಣ್ಣ ನೀರಿನ ತೊರೆ....ಅಪರಿಚಿತವಾದ ಕತ್ತಲು ಅವನನ್ನು ಸುತ್ತುವರಿಯತೊಡಗಿತು. ಅವನು ಅಸ್ಪಷ್ಟವಾಗಿ ನೆನಪಿಸಿಕೊಳ್ಳಬಲ್ಲ. ಅಮ್ಮ ರೊಟ್ಟಿಗಳನ್ನು ಮಾಡಿರಬೇಕು. ಸ್ವಲ್ಪ ಹೊತ್ತಿನ ಅನಂತರ ಅವನನ್ನು ಕರೆಯುತ್ತಾಳೆ. ಆದರೆ ಅವನಿಗೀಗ ಹಸಿವೆಯೇ ಆಗಿಲ್ಲ. ಈಗ, ತುಂಬಾ ಆಳವಾದ ಕಮರಿಯೊಳಗೆ ಸೆಳೆದುಕೊಳ್ಳಬೇಕು. ನೆಲದ ಮೇಲೆ ಅವನು ಮೈಚಾಚಿ ಬಿದ್ದಿದ್ದಾನೆ. ಸಣ್ಣ ದೋಣಿ ಆಳವಿಲ್ಲದ ನೀರಿನಲ್ಲಿ ಮುಳುಗುತ್ತಿರುವಂತೆ ಕಾಣಿಸುತ್ತಿದೆ. ಅವನ ಇಡೀ ಶರೀರ ಮರಗಟ್ಟಿದಂತಾಗಿದೆ. ಮನಸ್ಸು ಪೂರ್ತಿ ಖಾಲಿ. ಮಂಜು ಮೋಡಗಳಿಂದ ತುಂಬಿಹೋಗಿದೆ.

ತಾನಿಯೋ ಅವನ ಪಕ್ಕದಲ್ಲಿ ಕುಳಿತು ಜೋರಾಗಿ ಅವನನ್ನು ಅಲುಗಾಡಿಸುತ್ತ, "ಜೀವೊ, ದಯವಿಟ್ಟು ನಿನ್ನ ಕಣ್ಣುಗಳನ್ನು ಬಿಡೋ, ನೋಡು, ನಾನೊಂದು ಕಥೆ ಹೇಳ್ತೀನಿ."

ಜೀವೊ 'ಹುಂ' ಎಂಬ ಒಂದೇ ಒಂದು ದುರ್ಬಲವಾದ ಧ್ವನಿಯಲ್ಲಿ ಉತ್ತರಿಸಿದ. ಆದರೆ ತಾನಿಯೋಗೆ ಯಾವ ಕಥೆಯೂ ನೆನಪಿಗೆ ಬರಲಿಲ್ಲ. ಒಂದಾನೊಂದು ಕಾಲದಲ್ಲಿ ಒಬ್ಬ ರಾಜ ಇದ್ದ. ಆಮೇಲೆ ಆಮೇಲೆ ಒಂದು ಸಾರಿ ಅವನಿಗೆ ನಾಗರ ಹಾವೊಂದು ಕಚ್ಚಿತು. ಅದು ತನ್ನ ತಲೆಯ ಮೇಲೆ ರತ್ನವನ್ನು ಹೊಂದಿತ್ತು. ಶಿಕಾರಿ ಮಾಡುವಾಗ ಅದರ ಬೆಳಕಿನಲ್ಲಿ ಶಿಕಾರಿಯನ್ನು ಕಾಣುತ್ತಿತ್ತು.

ತಾನಿಯೋ ಗೊಂದಲಕ್ಕೀಡಾದ. ಹಾವಿಲ್ಲದ ಒಂದು ಕಥೆಯನ್ನೂ ಅವನು ನೆನಪಿಸಿಕೊಳ್ಳಲಾಗಲಿಲ್ಲ. ಪ್ರತಿಯೊಂದು ಕಥೆಯಲ್ಲೂ ಸರ್ಪದ ಬಗ್ಗೆ ಇದ್ದೇ ಇರುತ್ತಿತ್ತು. ಹಾವಾಡಿಗ ಪುಂಗಿಯನ್ನು ಊದಿದಾಗ ಹಾವು ತನ್ನ ಹೆಡೆಯಾಡಿಸುತ್ತಿತ್ತು. ಸರ್ಪ ಹಸುವಿನ ಕೆಚ್ಚಲ ಸುತ್ತ ಸುತ್ತಿಕೊಂಡು ಎಲ್ಲ ಹಾಲನ್ನೂ ಕುಡಿದುಬಿಡುತ್ತದೆ ಎಂದು ಯಾರೋ ಹೇಳಿದ್ದರು!

ಬೇರೆ ಕಥೆ ಇರಲೇಬೇಕು. ಆದರೆ ಅವನಿಗೆ ಯಾವ ಕಥೆಯೂ ನೆನಪಿಗೆ ಬರಲಿಲ್ಲ. ಅವನಿಗೆ ಜೀವೊನ ತಂದೆಯ ಕಣ್ಣುಗಳೇ ನೆನಪಿಗೆ ಬರುತ್ತಿದ್ದವು.

ಅವನು ಸುತ್ತಲೂ ನೋಡಿದ. ತಗಡಿನ ಚೂರೊಂದು ಸಿಕ್ಕಿದ್ದರೆ ಅದನ್ನು ಕಲ್ಲಿನಿಂದ ಬಡಿಯುತ್ತ ಜೀವೊನನ್ನ ಎಚ್ಚರವಾಗಿರಿಸುತ್ತಿದ್ದ. ನಾನು ಹಾಡಬೇಕು, ಇಲ್ಲಾಂದ್ರೆ ಸಂಗೀತವನ್ನಾದರೂ ನುಡಿಸಬೇಕು. ಚಿಕ್ಕ ಹುಡುಗಿಯರು ಅಂಗಳದೊಳ ಹಾಡ್ತಾ ಇದ್ದಾರೆ, "ಸಗಣೀಯನರಸು ಲಿರುವಾಗ ಚೇಳೊಂದು...."

"ಜೀವೋ, ಜೀವೋ!"

ಜೀವೊನ ಧ್ವನಿ ಒಡೆಯುತ್ತ ಬಂತು. ಿಕ್ಕುತ್ತ ಅವನು ಹೇಳಿದ, "ನನ್ನ....ನನ್ನ ಾಲಿಗೆ ತುಂಬಾ ದಪ್ಪ ಆಗ್ತಿದೆ ತಾನಿಯೋ!" ುನಸ್ಸಿನಾಳದಲ್ಲಿ ಅವನು ಏನನ್ನೋ ನೆನಪಿಸಿ ೊಳ್ಳುತ್ತಿದ್ದ— ತಾನು ನಿದ್ದೆ ಮಾಡ ೊಡದು. ಆದರೆ ನಿದ್ದೆ ಗಾಢವಾಗ್ತಾ ಇದೆ —ಎಚ್ಚರವಾಗಿರಲಾರದ ಅಥವಾ ನಿದ್ದೆ ುನ್ನೂ ಮಾಡಲಾರದವನಿಗೆ ಏನಾಗ ಹುದು? ದೂರದಲ್ಲಿ ಯಾರೋ ನಕ್ಕರು. ಇದು ಆ ದೋಣಿಯಂತೆ. ಮುಳುಗಲೂ ಾಗದ ಅಥವಾ ತೇಲಲೂ ಆಗದ ದೋಣಿಗೆ ನಾಗಬಹುದು?

ಆಮೇಲೆ ಅದರ ಉಸಿರು ಭಾರವಾಗ್ತಾ ರುತ್ತೆ.

ಅವನ ಉಸಿರು ಭಾರವಾಗುತ್ತಿತ್ತು. ತಾನಿಯೋ, ತಾನಿಯೋ, ಎಲ್ಲಿದ್ದೀಯಾ ೀನು?" ಅವನು ಕೇಳಿದ. ಆದರೆ ಶಬ್ದ ಗಳು ಅವನ ಗಂಟಲಿನಿಂದ ಹೊರಬರಲಿಲ್ಲ. ದಲಾಗಿ ಅಲ್ಲಿ ಅಸ್ಪಷ್ಟವಾದ ಧ್ವನಿಮಾತ್ರ ಇತ್ತು. ಮೇಲಿನ ಮೋಡ ಮುಸುಕಿದ ಾಕಾಶ ಮಾತ್ರ ಆ ರಹಸ್ಯವಾದ ಅಪರಿಚಿತ ಷ್ಪೆಯನ್ನು ಗ್ರಹಿಸಿರಬೇಕು. ಜೊಲ್ಲು ಅವನ ಬಾಯಿಂದ ಸುರಿಯತೊಡಗಿತು.

ಈಗ, ತಾನಿಯೋಗೆ ಏನೂ ಕಾಣಿಸಲಿಲ್ಲ. ಲ್ಲ ಕಡೆಯೂ ಹಾವುಗಳಿದ್ದವು. ಬಣ್ಣ ಣ್ಣದ, ಬೇರೆ ಬೇರೆ ಬಗೆಯ ಹಾವುಗಳು ಧಾನವಾಗಿ ಎಲ್ಲ ಕಡೆಯಿಂದ ಹರಿದು ಂದು ತಮ್ಮ ಹೆಡೆಗಳನ್ನು ಎತ್ತಿ ಭುಸು ುಡುತ್ತಿವೆ!

ಅವನು ಚಕ್ಕನೆ ಮೇಲೆದ್ದವನೇ ತನ್ನೆಲ್ಲ ಬಲವನ್ನೂ ಬಳಸಿ ಜೀವೊನನ್ನು ಅಲುಗಾಡಿಸಿದ. ಅನಂತರ ಆ ಎಂಟರ ಹರೆಯದ ತೆಳ್ಳಗಿನ ಪುಟಾಣಿ ಬಾಲಕ ಹೇಳಿದ, ಸರಿ, ಜೀವೊ, ಬಾ, ನನ್ನ ಹೆಗಲ ಮೇಲೆ ಕೂತುಕೊ. ನಿನ್ನನ್ನು ಎತ್ತಿಕೊಂಡು ಹೋಗಬಹುದೋ ಅಂತ ನೋಡ್ತೀನಿ....."

ಆದರೆ ಏನನ್ನೂ ಉತ್ತರಿಸದೆ, ಜೀವೊ ಶೂನ್ಯ ತುಂಬಿದ ಕಣ್ಣುಗಳಿಂದ ಅವನನ್ನು ನೋಡಿದ.

ತಾನಿಯೋ ತುಂಬಾ ಭಯಗೊಂಡಿದ್ದ. ಜೀವೊನ ಶರೀರದ ಮೇಲೆ ಭಯಂಕರವಾದ ಕಪ್ಪುನೆರಳು ಆಡುತ್ತಿರುವುದನ್ನು ನೋಡಿದ. ಅವನ ಮುಖದ ಹತ್ತಿರ ಬಾಗಿ ಹೇಳಿದ, "ಜೀವೋ, ಜೀವೋ, ಏನು ಮಾಡ್ತಾ ಇದ್ದೀಯಾ ನೀನು? ಏನಾದರೂ ಮಾತಾಡೋ!" ಅವನ ಇಡೀ ಶರೀರ ಸಿಮೆಂಟಿನಿಂದ ಮಾಡಿದಂತಾಗಿತ್ತು. ಅವನ ಬಿಟ್ಟ ಕಣ್ಣುಗಳಿಂದ ಹರಿಯುತ್ತಿದ್ದ ಮೂಕ ಮರಣಯಾತನೆ ಏನನ್ನೋ ಹೇಳುತ್ತಿತ್ತು. ಆದರೆ ತಾನಿಯೋನಿಗೆ ಆ ಭಾಷೆಯನ್ನು ಅರ್ಥಮಾಡಿಕೊಳ್ಳಲು ಆಗಲಿಲ್ಲ. ಜೀವೊನ ಪಕ್ಕದಲ್ಲಿ ಕುಳಿತು ಅವನು ಜೋರಾಗಿ ಅಳತೊಡಗಿದ. ಜೀವೊ ಅವನಿಗೆ "ಅಳಬೇಡ" ಎಂದು ಹೇಳಲೆತ್ನಿಸಿದ. ಆದರೀಗ ಅವನ ಗಂಟಲಿಂದ ಗುಳುಗುಳಿಸುವ ಧ್ವನಿಯೊಂದು ಮಾತ್ರ ಬರುತ್ತಿತ್ತು.

ತಾನಿಯೋ ಗದ್ಗದಿಸುತ್ತ ಹೇಳಿದ, "ಜೀವೊ, ಇದೊಂದು ಸಾರಿ ನಡೆಯೋ, ನಾನು ಇನ್ನೆಂದಿಗೂ ನಿನ್ನನ್ನು ಬೇರೇನೂ ಕೇಳೊಲ್ಲ. ನಾವು ಇನ್ನೆಂದಿಗೂ ಕಾಡಿನಲ್ಲಿ ಸಗಣಿ ಹುಡುಕ್ತಾ ಹೋಗೋದು ಬೇಡ, ಕಾಡಿನಲ್ಲಿ ಹಾವುಗಳು ಇರಬಹುದು!"

"ಹಾವು!" ಎಂಬ ಶಬ್ದ ಕೇಳಿದ್ದೇ, ಜೀವೊನ ಕಣ್ಣುಗಳು ಮಿಂಚಿದವು. ನಿಜಸ್ಥಿತಿ ಅವನಿಗೆ ಸಿಡಿಲಿನಂತೆ ಬಡಿಯಿತು. ಇದಿ ಒಗಟು ಪರಿಹಾರವಾದಂತಾಯಿತು. ಅವನ ತನ್ನ ಕಣ್ಣುಗಳನ್ನು ಮುಚ್ಚಿದ. ತಾನಿಯೊ ಜೋರಾಗಿ ಚೀರಿದ.

"ಜೀವೋ, ಕಣ್ಣುಗಳನ್ನು ಬಿಡೋ ದಯೆವಿಟ್ಟು ಬಿಡೋ!"

ಆದರೆ ಜೀವೊ ಕಣ್ಣುಗಳನ್ನು ತೆರೆಯಲೇ ಇಲ್ಲ.



"ಇತರರ ದಯೆ, ಕರುಣೆಯಿಂದ ಬದುಕುವುದು ನಾಚಿಕೆಗೇಡು, ಆತ್ಮಾಭಿಮಾನ ಪ್ರತಿಯೊಬ್ಬರಿಗೂಬೇಕು. ಅದು ಇಲ್ಲದೆ ಹೋದರೆ ಮಾನವ ಇದ್ದು ಸತ್ತಂತೆ. ಯಾರೇ ಆಗಲಿ, ಉನ್ನತಸ್ಥಾನ ಅಧಿಕಾರ ಪಡೆಯುವುದು ಅವರ ನಿರಂತರ ಶ್ರಮದ ಫಲದಿಂದಲೇ"

—ಅಂಬೇಡ್ಕರ್

# ನಮ್ಮಜ್ಜಿಯ ದೋಬಿಖಾನೆ

**ನೀರದ ಎನ್. ನಾಗರಾಜರಾವ್**

***೨೨೩೫, ೨೩ನೇ ಕ್ರಾಸ್, ಬನಶಂಕರಿ ೨ನೇ ಹಂತ***
***ಬೆಂಗಳೂರು–೫೬೦೦೭೦***

ನಮ್ಮಜ್ಜಿಯ ಎರಡು ಕೈಗಳನ್ನು ನೆನಸಿಕೊಂಡಾಗಲೆಲ್ಲಾ ನನಗೆ ಈಗಲೂ ಕಣ್ಣಿಗೆ ಕಟ್ಟಿದಂತಿದೆ.

ಮುಸುರೆ ತೊಳೆಯುವುದು, ಬಟ್ಟೆ ಒಗೆಯುವುದು, ನೆಲ ಮತ್ತು ಕಿಟಕಿಗಳನ್ನು ಒರೆಸುವ ಕೆಲಸಗಳನ್ನು ಮಾಡುವಾಗ ತಣ್ಣೀರು ಮತ್ತು ಬಿಸಿನೀರಿನಲ್ಲಿ ಕೈ ಅದ್ದಿ, ತೆಗೆದು ಕೈಗಳೆರಡು ಯಾವಾಗಲೂ ಉಬ್ಬಿಕೊಂಡು ಬಿರುಕುಬಿಟ್ಟು ಗಾಯವಾಗಿರುತ್ತಿತ್ತು. ಈ ಚಿತ್ರ ನನ್ನ ಕಣ್ಣಿಗೆ ಕಟ್ಟಿದಂತಿದೆ.

ನಾನು ಬೆಳೆದು ದೊಡ್ಡವನಾಗುತಿದ್ದಾಗ, ಪ್ರತಿ ಶನಿವಾರ ಅವರು ಬಟ್ಟೆ ಒಗೆಯುವ ಕಾರ್ಯಕ್ರಮವನ್ನು ತಪ್ಪದೆ ಒಂದು ರೀತಿಯ ದೇವರ ಸೇವೆಯೇನೋ ಎನ್ನುವಂತೆ ಮಾಡಿಕೊಂಡು ಹೋಗುತ್ತಿದ್ದರು. ಸಾಧಾರಣವಾದ ಬಟ್ಟೆ ಒಗೆಯುವಂಥ ರೀತಿಯಲ್ಲಲ್ಲ. ಶುಕ್ರವಾರ ರಾತ್ರಿಯೇ ಅವರು ಬಟ್ಟೆಗಳನ್ನೆಲ್ಲಾ ಒಂದು ದೊಡ್ಡ ಕಡಾಯಿಯಲ್ಲಿ ನೆನೆಸಿಡುತಿದ್ದರು. ಶನಿವಾರ ಬೆಳಿಗ್ಗೆ ಆ ಕಡಾಯಿ ಅಂಚಿಗೆ ಬಗ್ಗಿನಿಂತು, ಮೊದಲು ಬಟ್ಟೆಗಳನ್ನೆಲ್ಲಾ ಮರದ ತುಂಡಿನಿಂದ ಉಜ್ಜುತಿದ್ದರು, ಅನಂತರ ಆ ಪಾತ್ರೆಯನ್ನು ಒಲೆಯ ಮೇಲಿಟ್ಟು ಸ್ವಲ್ಪ ಹೊತ್ತು ಕುದಿಸಿ, ಹತ್ತಿಯ ಬಿಳಿ ಬಟ್ಟೆಗಳನ್ನು, ಚೆನ್ನಾಗಿ ತಿರುವುತಿದ್ದರು. ಈ ರೀತಿ ತಿರುವಲು ಒಂದು ಮರದ ಕೋಲನ್ನು ಇರಿಸಿಕೊಂಡಿದ್ದರು.

ಅನಂತರ ಮೂರುಬಾರಿ ಜಾಲಾಡಿದ ಮೇಲೆ ಬೆಳ್ಳಗಾಗುತಿತ್ತು. ಒಲೆಯ ಮೇಲೆ ಒಂದು ಪಾತ್ರೆಯಲ್ಲಿ ಬಟ್ಟೆಗೆ ಹಾಕಲು ಗಂಜಿ ಕುದಿಸಿಕೊಳ್ಳುತ್ತಿದ್ದರು. ಕುದಿಸಿದ ಗಂಜಿಯನ್ನು ಸಾಕಷ್ಟು ಪ್ರಮಾಣದ ನೀರಿಗೆ ಬೆರಸುತಿದ್ದರು. ಆಗ, ಆ ನೀರು ಹಾಲಿನ ಬಣ್ಣದಂತಿರುತಿತ್ತು. "ಹೀಗೆ ಮಾಡಿದರೆ ನೋಡಲೂ ಚೆನ್ನಾಗಿರುತ್ತೆ ಮತ್ತು ಒಣಗಿದ ಮೇಲೆ ಕೊಳೆಯೂ ಹೋಗುತ್ತೆ", ಎಂದು ನನಗೆ ವಿವರಣೆ ಸಹಿತ ಹೇಳುತ್ತಲೇ ಇರುವುದುಂಟು. ನಾನು ಆಗ ಕೇವಲ ಏಳು ವರ್ಷದವನು, ನನಗೆ ಅವರು ಹೇಳುತ್ತಿದ್ದ ಬಹುಭಾಗದ ಮಾತಿನ ಅರ್ಥವೇ ಆಗುತ್ತಿರಲಿಲ್ಲ.

ಆಧಾರ: ೧೯೯೭ ರ ಜನವರಿ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ "ಮೈ ಗ್ರ್ಯಾಂಡ್ ಮದರ್ಸ್ ಲಾಂಡ್ರಿ" ಲೇಖನ.

ಭಾನುವಾರ ಸಂಜೆ ಆ ಒಗೆದ ಪೂರ್ತಿ ಬಟ್ಟೆಯ ರಾಶಿಯನ್ನು, ಚೆನ್ನಾಗಿ ಇಸ್ತ್ರಿ ಮಾಡಿಡುತ್ತಿದ್ದರು. ಬಿಳಿಬಟ್ಟೆಗಳು ಗಂಜಿಯಿಂದ ಒಣಗಿ, ಒಳ್ಳೆ ಗರಿ ಗರಿ ಇಸ್ತ್ರಿ ತೆಗೆದುಕೊಳ್ಳುತ್ತಿದ್ದವು, ಇಜ್ಜಲು ಹಾಕಿಕೊಂಡು ಮಾಡುವ ಇಸ್ತ್ರಿ ಪೆಟ್ಟಿಗೆಯಿಂದ ಇಸ್ತ್ರಿ ಮಾಡುತ್ತಿದ್ದರು. ಆ ಇಸ್ತ್ರಿ ಪೆಟ್ಟಿಗೆ ನಮ್ಮ ಮನೆಯಲ್ಲಿ ಈಗಲೂ ಇವೆ. ಪ್ರತಿಸಲ ಬಟ್ಟೆ ಇಸ್ತ್ರಿಮಾಡುವಾಗಲೆಲ್ಲಾ ಮೇಲೊದಿಕೆಯನ್ನು ಮಡಿಸಿ ಇಸ್ತ್ರಿ ಮಾಡಬೇಕು, ಗಂಡಸರ ಷರಟನ್ನು ಹೇಗೆ ಮಡಿಚಿ ಇಸ್ತ್ರಿ ಮಾಡಬೇಕು ಎಂದು ನನಗೆ ತೋರಿಸಿ ಕೊಡುತ್ತಲೇ ಇದ್ದರು.

ಬಚ್ಚಲು ಮನೆಯಿಂದ ಬರುತಿದ್ದ ಡಿಟರ್‌ಜೆಂಟ್ ಪೌಡರಿನ ಘಂ ಅನ್ನುವ ವಾಸನೆ, ಆವಿಯಿಂದ ಒದ್ದೆ ಒದ್ದೆಯಾದ ಅಡುಗೆ ಮನೆ ಕಿಟಕಿಗಳು, ಇಸ್ತ್ರಿಪೆಟ್ಟಿಗೆ ಹದವಾಗಿ ಬಿಸಿ ಆಗಿದೆಯಾ, ಇಲ್ಲವಾ ಅಂತ ತೋರು ಬೆರಳಿನಲ್ಲಿ ಆಗಾಗ್ಗೆ ಮುಟ್ಟಿಮುಟ್ಟಿ ಅದು ಸುಟ್ಟು ಹೋಗುತಿತ್ತು. ಅನಂತರ ಅದಕ್ಕೆ ಆಗಾಗ್ಗೆ ಗ್ಲಿಸರಿನ್ ಹಚ್ಚುತಿದ್ದುದು ನನಗೆ ಚೆನ್ನಾಗಿ ಜ್ಞಾಪಕ.

ನಮ್ಮಜ್ಜಿಗೆ ತಾನು ಒಗೆದು, ಗಂಜಿಹಾಕಿ ಒಣಗಿಸಿಟ್ಟ ಬಟ್ಟೆಗಳ ಮೇಲೆ ಬಹಳ ಮೋಹ, ಹಿತ್ತಲಕಡೆಯ ಅಂಗಳದಲ್ಲಿ ಅವುಗಳನ್ನು ನೀಟಾಗಿ ಒಣಗಿ ಹಾಕುವರು ಜೊತೆಗೆ ಮಹಡಿ ಮನೆಯ ಬಾಲ್ಕನಿಗಳಲ್ಲಿಯೂ ಒಣಗಲು ಹಾಕುವರು, ಆ ಬೀದಿಗಳಲ್ಲಿ ಒಣಗಿಹಾಕಿದ್ದ ಬಟ್ಟೆಗಳಲ್ಲಿ, ನಮ್ಮಜ್ಜಿ ಹಾಕಿದ ಬಟ್ಟೆಗಳೇ ಬಹಳ ಬೆಳ್ಳಗಿರುತಿದ್ದವು. ಬಾಲ್ಕನಿಯಲ್ಲಿ ಮತ್ತು ಅಂಗಳದಲ್ಲಿ ಹಾಕಿದ್ದ ಬಟ್ಟೆಗಳನ್ನು ಒಣಗಿದ ನಂತರ ಒಳಕ್ಕೆ ತರುವಾಗ, ಅವರು ನನ್ನ ಕೈಲೂ ಕೊಡುತಿದ್ದರು. ಆಗ, ನಾನು ತರುತಿದ್ದ ಬಟ್ಟೆಗಳ ಮಧ್ಯೆ ಮುಖವನ್ನು ಹುದುಗಿಸಿ, ಅವರ ಸೊಗಸನ್ನು ಪಡೆಯುತಿದ್ದೆ.

ನನಗೆ ೯ ವರ್ಷವಾದಾಗ, ನಮ್ಮ ಮನೆಗೊಂದು ಬಟ್ಟೆ ಒಗೆಯುವ ಯಂತ್ರ ಬಂತು, ನಮ್ಮ ತಂದೆ ಆ ಬಟ್ಟೆಯೊಗೆಯುವ ಯಂತ್ರ ತಂದಿಟ್ಟಾಗ ಬಹಳ ಜಂಭದಿಂದ ಅದನ್ನು ಒಳಗೆತಂದು, ಅದಕ್ಕೆ ಸುತ್ತಿದ್ದ ಪ್ಯಾಕಿಂಗ್ ಬಿಚ್ಚಿ, ಸರಿಯಾದ ಜಾಗದಲ್ಲಿರಿಸಿ, ಬಟ್ಟೆ ಒಗೆಯಲು ಅನುಕೂಲವಾಗುವಂತೆ ಮಾಡಿದರು. ಆ ಯಂತ್ರ ಬಹಳ ಸುಲಭವಾಗಿ ಉಪಯೋಗಿಸಲು ಆಗುತಿತ್ತು. ಅದರಲ್ಲಿ ತನಗೆ ತಾನೇ ಬಟ್ಟೆ ಹಿಂಡುವ ಏರ್ಪಾಟು ಇರಲಿಲ್ಲ. ಬಟ್ಟೆ ಹಿಂಡಬೇಕಾದರೆ ಎರಡು ರೋಲರ್‌ಗಳ ಮಧ್ಯೆಬಟ್ಟೆ ಇಟ್ಟು ಒಂದು ವಕ್ರವಾದ ಹ್ಯಾಂಡಲ್‌ನಿಂದ ತಿರುಗಿಸಬೇಕಾಗುತಿತ್ತು. ನಮ್ಮಜ್ಜಿಗಂತೂ ಯಂತ್ರದ ಒಗೆಯುವ ಕೆಲಸದ ಬಗ್ಗೆ ಸಂದೇಹ ಉಂಟಾಗಿತ್ತು. ನಮ್ಮ ತಾಯಿಗಂತೂ ವಿಪರೀತ ಖುಷಿಯಾಗಿತ್ತು.

ಸುಮಾರು ೧೯೭೦ರ ಮಧ್ಯಂತರದಲ್ಲಿ ನಮ್ಮಮನೆಗೆ ಒಂದು ಆಧುನಿಕ ಒಗೆಯುವ ಯಂತ್ರವನ್ನು ತರಲಾಯಿತು. ನಮ್ಮಜ್ಜಿಗೆ ಆ ಹೊಸಯಂತ್ರವೂ ಇಷ್ಟವಾಗಲಿಲ್ಲ. "ಬಟ್ಟೆ ಉಬ್ಬೆಗೆ ಹಾಕದೆ ಬಟ್ಟೆ ಒಗೆದಲ್ಲಿ ಅದು ಬಹಳ ಚೊಕ್ಕಟವಾಗುವುದೇ ಇಲ್ಲ" ಎಂದು ಅಜ್ಜಿ ಒತ್ತಿ ಒತ್ತಿ ಹೇಳ ತೊಡಗಿದರು. ಏಕೆಂದರೆ ಯಂತ್ರದಲ್ಲಿನ. ನೀರಿನ ಉಷ್ಣಾಂಶ ೯೫ ಡಿಗ್ರಿ ಮಾತ್ರ ಇರುತ್ತದೆ. ನೀರಿನ ಪೂರ್ಣ ಕುದಿಯುವ ಉಷ್ಣಾಂಶ

೧೦೦ ಇರುತ್ತದೆ ಆದ್ದರಿಂದ ೫ ಡಿಗ್ರಿ ಕಡಿಮೆಯೇ ಆಯಿತು ಅಂತ ಅವರವಾದ.

ನಾನು ಅಮೇರಿಕಾಕ್ಕೆ ೧೯೮೦ ರಲ್ಲಿ ಹೋಗಿದ್ದಾಗ, ಒಗೆಯುವ ಯಂತ್ರದಲ್ಲಿ ನನ್ನ ಬಟ್ಟೆಯನ್ನು ನಾನೇ ಸ್ವತಃ ಒಗೆದುಕೊಂಡೆ. ಆಗ, ನನಗೆ ಅಲ್ಲಿಯ ಯಂತ್ರದ ಒಗೆತದ ಬಗ್ಗೆ ಮತ್ತು ನನ್ನ ಚಿಕ್ಕಂದಿನ ಅಜ್ಜಿಯ ಬಟ್ಟೆ ಒಗೆತದ ಬಗ್ಗೆ ಕೂಲಂಕುಷವಾಗಿ ಯೋಚಿಸಲು ಅವಕಾಶ ಉಂಟಾಯಿತು. ಯುರೋಪಿನ ಒಗೆಯುವ ಯಂತ್ರಗಳಿಗಿಂತ ಅಮೆರಿಕಾದ ಒಗೆಯುವ ಯಂತ್ರ ಬಹಳ ಸುಲಭ ರೀತಿಯದು. ಒಗೆಯುವಾಗ ಬಹಳ ಸುಲಭವಾಗಿ ಅದನ್ನು ನಡೆಸಬಹುದಾಗಿತ್ತು. ಅವರು ನೀರನ್ನು ೯೫ ಡಿಗ್ರಿ ಉಷ್ಣಾಂಶದಲ್ಲಿಯೇ ಉಪಯೋಗಿಸುತ್ತಾರೆ. ನನಗಾದ ಆಶ್ಚರ್ಯಕರ ಸಂಗತಿ ಏನೆಂದರೆ, ಯುರೋಪಿನ ಯಂತ್ರಗಳಿಗಿಂತ, ಅಮೇರಿಕಾದ ಯಂತ್ರಗಳ ಒಳಗೆ ಇರುವ ಸೈಕಲ್ ಮೂರುಪಟ್ಟು ಚಿಕ್ಕದಾಗಿರುತ್ತೆ, ನಮ್ಮಜ್ಜಿ ಸತ್ತುಹೋಗಿದ್ದರೂ ಕೂಡ, ನಾನು ಅವರನ್ನು ಎಂದಿಗೂ ಮರೆತು ಬಿಡಲಾರೆ, ಏಕೆಂದರೆ ನಾನು ನನ್ನ ಬಟ್ಟೆಗಳನ್ನು ಯಂತ್ರದಲ್ಲಿ ಒಗೆದುಕೊಂಡು, ಪ್ರೈ ಮೇಲೆ ಹಾಕಿಕೊಂಡಾಗಲೆಲ್ಲಾ, ಬಟ್ಟೆ, ನಮ್ಮಜ್ಜಿ ಒಗೆಯುತ್ತಿದ್ದಷ್ಟು ಶುಭ್ರವಾಗಿ ಇಲ್ಲವೇ ಇಲ್ಲ ಎಂದೊಪ್ಪಿಕೊಳ್ಳುವುದುಂಟು.

ಕೆಲವು ಊರುಗಳ ದೊಡ್ಡ ರಸ್ತೆಗಳಲ್ಲಿ ತಿರುಗಾಡುವಾಗಲೆಲ್ಲಾ ನಾನು, ನನ್ನ ಅಜ್ಜಿಯನ್ನು ಜ್ಞಾಪಿಸಿಕೊಳ್ಳುತ್ತೇನೆ. ಊರಿನ ಮಧ್ಯದಲ್ಲಾಗಲೀ, ಮುಖ್ಯ ರಸ್ತೆಗಳಲ್ಲಾಗಲೀ ನಾನು ಒಗೆದು ಒಣಗ ಹಾಕಿರುವ ಬಟ್ಟೆಗಳ ಸಾಲುಗಳನ್ನು ನೋಡಿಯೇ ಇಲ್ಲ. ಆದರೆ ನಾನು ಸಣ್ಣಗಲ್ಲಿ ರಸ್ತೆಗಳ ಕಡೆಗೆ ಬಂದಾಗ ಒಣಗಲು ಹಾಕಿರುವ ಬಟ್ಟೆಗಳು ಮತ್ತೊಂದು ದೇಶದ ಬಾವುಟಗಳೇನೋ ಎಂಬಂತೆ ಕಾಣುತ್ತದೆ. ಕಿಟಕಿಗಳ ಕೆಳಗೆ, ಬಾಲ್ಕನಿಗಳಲ್ಲಿ, ಮನೆಯ ಮೇಲ್ಛಾವಣಿಗಳ ಮೇಲೆ, ಹಿತ್ತಲಕಡೆ, ಸಣ್ಣಗಲ್ಲಿಗಳ ಎರಡು ಮನೆಗಳ ಮಧ್ಯದಲ್ಲಿ ಮತ್ತು ಗಗನಚುಂಬಿ ಕಟ್ಟಡಗಳ ಮೇಲೂ, ಬಟ್ಟೆ ಒಣಗಿ ಹಾಕಿರುವುದನ್ನು ನೋಡಿಕೊಂಡೇ ನಡೆದು ಹೋಗುತ್ತೇನೆ, ಕಾಲುಚೀಲ, ಷರಾಯಿ, ಷರ್ಟಗಳು, ಮಗುವಿನ ಸಣ್ಣ ಲಂಗೋಟಿ ಬಟ್ಟೆಗಳು, ಹೊರ ಉಡುಪುಗಳು, ಕರವಸ್ತ್ರಗಳು ಮತ್ತು ಸಣ್ಣ ತುಂಡು ಬಟ್ಟೆಗಳು ಇತ್ಯಾದಿ. ಇವುಗಳನ್ನೆಲ್ಲಾ ನಾನು ವಿದೇಶದಲ್ಲಿ ನೋಡುತ್ತಿದ್ದರೂ, ನನಗೆ ಅವೆಲ್ಲಾ ಅತಿಪ್ರಿಯವಾದ, ಹತ್ತಿರವಾದ ಮತ್ತು ಬಹಳ ದಿನಗಳಿಂದ ಪರಿಚಿತವಾದಂತೆಯೇ ಭಾಸವಾಗುವುದುಂಟು.

ಒಣಗಲು ಹಾಕಿರುವ ಬಟ್ಟೆಯ ಸಾಲುಗಳನ್ನು ನೋಡುತ್ತಲೇ ನಾನು, ಯಾರು ಒಳ್ಳೆಯ ಮತ್ತು ಅಚ್ಚುಕಟ್ಟಿನ ಮನೆಯೊಡತಿ, ಅತಿ ಬೆಳ್ಳಗೆ ಬಟ್ಟೆ ಒಗೆದು ಹಾಕಿದ್ದಾರೆ, ಅವರು ಝಾಡಿಸಿ, ನೀಟಾಗಿ ದಾರದ ಮೇಲೆ ಹರವಿರುವ ರೀತಿ ನೀತಿ, ಅವರ ಸಂಸಾರ ದೊಡ್ಡದೇ, ಚಿಕ್ಕದೇ ಇಲ್ಲವೇ ಒಬ್ಬಂಟಿಗರೇ, ಎಲ್ಲಾ ಹೇಳಬಲ್ಲಷ್ಟು ನಿಪುಣನಾಗಿದ್ದೆ. ನಮ್ಮಜ್ಜಿ ನನಗೆ ಚಿಕ್ಕಂದಿನಿಂದಲೇ ಅದರ ಬಗ್ಗೆ ಚೆನ್ನಾಗಿ ತರಪೇತಿ ಕೊಟ್ಟಿದ್ದರು.

ನಮ್ಮಜ್ಜಿಗೆ ಬಟ್ಟೆ ಒಗೆದು, ಇಸ್ತ್ರಿ ಮಾಡುವ ಕೆಲಸವೆಂದರೆ ಒಂದು ತೆರದಿಟ್ಟ ಪುಸ್ತಕದ ಅನುಭವ. ನಾನು ಅವರ ಜೊತೆ ರಸ್ತೆಯಲ್ಲಿ ಎಲ್ಲಿಯಾದರೂ ಹೋಗುತ್ತಿದ್ದಾಗ, ಇದ್ದಕ್ಕಿದ್ದಂತೆ ನಿಂತುಕೊಂಡು ಬಟ್ಟೆ ಒಗೆತದ ಬಗ್ಗೆ ವಿವರಣೆ ನೀಡುತ್ತಾ, ಅಲ್ಲಿಕಂಡ ವಿಚಾರದ ಬಗ್ಗೆ ತೋರಿಸುತ್ತ ಹೇಳುತಿದ್ದರು. "ನೋಡು, ಆ ಕಿಟಕಿ ಹಿಂದೆ ಒಬ್ಬ ಯುವತಿ ತನ್ನ ಒಂದು ಮಗು ವಿನೊಂದಿಗೆ ವಾಸಿಸುತ್ತಾಳೆ. ಒಂದು ಡಜನ್ ಸಣ್ಣ ಲಂಗೋಟಿ ಬಟ್ಟೆ ಒಣ ಹಾಕಿರುವುದರಿಂದ ಹೀಗೆ ಹೇಳಬಹುದು. ಜೊತೆಗೆ ಅದು ಗಂಡು ಮಗು ಬೇರೆ. ಏಕೆಂದರೆ ಅದರ ಚಿಕ್ಕ ಸ್ವೆಟರ್‌ಗಳು ಮತ್ತು ಟೋಪಿ ಎಲ್ಲಾ ನೀಲಿ ಬಣ್ಣದ್ದು ಜೊತೆಯಲ್ಲಿ ಒಬ್ಬ ಗಂಡಸೂ ಅಲ್ಲಿ ವಾಸಿಸುತ್ತಾನೆ. ಬಹುಷಃ ಆಕೆಯು ಗಂಡನಿರಬೇಕು. ಷರ್ಟು ಮತ್ತು ಗಂಡಸರ ಕಾಲು ಚೀಲದಿಂದ ನಾವು ಹಾಗೆ ತಿಳಿದುಕೊಳ್ಳಬಹುದು. ಗಂಡ, ಹೆಂಡತಿ ಮತ್ತು ಮಗು ಮೂವರು ಮಾತ್ರವೇ ಅಲ್ಲ, ಅವರ ಜೊತೆ ಒಬ್ಬ ವಯಸ್ಸಾದವರೂ ಇದ್ದಾರೆ. ನೋಡು, ಆ ಕಪ್ಪು ಉಣ್ಣೆಯ ಉಡುಪುಗಳು. ಇನ್ನೂ ನೀರು ತೊಟ್ಟಿಕ್ಕುತ್ತಾ ಇದೆ? ಆಕೆ ವಿಧವೆ ಇರಬೇಕು.

ನಮ್ಮಜ್ಜಿ ನನಗೆ ಸುತ್ತಲಿನ ವಿಚಾರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವಂತೆ ತಿಳಿಸಿಕೊಡುತ್ತಿದ್ದರು ಅದು ಎಷ್ಟೇ ಸಣ್ಣ ವಿಚಾರವಾಗಲಿ, ಗಹನವಾದ ವಿಚಾರವಾಗಲೀ, ನನಗೆ ಅದು ಅಷ್ಟೊಂದು ಮುಖ್ಯವಾದ ವಿಚಾರವಾಗಿರಲಿ, ಆಗದೇ ಇರಲಿ, ಜನಗಳ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದುಕೊಳ್ಳಲು ಬಹಳ ಅನುಕೂಲವಾಗುತಿತ್ತು.

ಒಣಗಲು ಹಾಕಿರುವ ಬಟ್ಟೆಗಳನ್ನು ನೋಡಿಯೇ ನಾವು. ಆ ಮನೆಯ ಜನರ ನಡೆನುಡಿಗಳ ಬಗ್ಗೆ, ಗುಣಗಳ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳಬಹುದು. "ಅಲ್ಲಿ ಮಹಡಿ ಮೇಲಿರುವ ಹೆಂಗಸು ಆಟಗಾರ್ತಿ. ನೋಡು, ಎಷ್ಟೊಂದು ನೈಲಾನ್‌ಗಳನ್ನು ಒಣಗಿಹಾಕಿದ್ದಾಳೆ!" ಎಂದೋ, ಇಲ್ಲವೇ, "ಆ ಮೊದಲ ಮಹಡಿಯಲ್ಲಿರುವ ಮಹಿಳೆ ಅತೀ ಜಿಪುಣೆ ಅಂತ ಕಾಣುತ್ತೆ. ಬಟ್ಟೆಗಳಿಗೆ ಬ್ಲೀಚಿಗ್ ಪುಡಿಯನ್ನೇ ಹಾಕಿಲ್ಲ! ಎಂದು ಹೇಳುತ್ತಾ ಇರುತ್ತಿದ್ದರು.

ಅವರಿಂದ ಚಿಕ್ಕಂದಿನಲ್ಲಿ ಕಲಿತ ಆ ಮಾತುಗಳಿಂದಲೋ ಏನೋ ನಾನು ಬಟ್ಟೆ ಒಣಗಿಸುವ ಯಂತ್ರ ತೆಗೆದುಕೊಳ್ಳುವ ಆಸೆಯನ್ನೇ ಕಳೆದುಕೊಂಡಿದ್ದೇನೆ. ನಾನು ಯಾವಾಗಲೂ ನನ್ನ ಒಗೆದ ಬಟ್ಟೆಗಳನ್ನು ಹೊರಗಡೆಯೇ ಹಾಕಿ ಒಣಗಿಸುತ್ತೇನೆ. ಯಾಕೆಂದರೆ ನನಗೆ ಅದರಲ್ಲಿ ಅಜ್ಜಿಯ ನೆನಪಿನ ಆನಂದವೇ ಉಂಟಾಗುತ್ತೆ. ಒಣಗಿದ ಬಟ್ಟೆಗಳನ್ನು ಒಳಗೆ ತಂದಿರಿಸುವಾಗ, ಅದರೊಳಗಿನಿಂದ ಬರುವ ಸುವಾಸನೆಯ ಗಾಳಿ ನನಗೆ ಬಹಳ ಅಚ್ಚುಮೆಚ್ಚು. ಒಣಗಿದ ಬಟ್ಟೆಗಳಲ್ಲಿ ಮುಖಹುದುಗಿಸಿ, ಅದರ ಸುವಾಸನೆಯನ್ನು ಪಡೆಯುವುದರಲ್ಲೇ ಒಂದು ಮಹದಾನಂದವಿದೆ.

# ದೃಷ್ಟಿ ಶಾಸ್ತ್ರದ ಸೃಷ್ಟಿಕರ್ತ ಇಬ್ನ್ ಅಲ್ ಹೈತಾಮ್

**ಡಾ|| ಬಿ. ಎಸ್. ಶೈಲಜಾ**
ಜವಹರ್‌ಲಾಲ್ ನೆಹರೂ ತಾರಾಲಯ
ಶ್ರೀ ಟಿ. ಚೌಡಯ್ಯ ರಸ್ತೆ, ಬೆಂಗಳೂರು-೧

ಇಂದಿಗೆ ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ಈಜಿಪ್ಟ್ ತನ್ನ ಬೌದ್ಧಿಕ ಬೆಳವಣಿಗೆಗೆ ಪ್ರಖ್ಯಾತಿ ಪಡೆದಿತ್ತು. ಅಲ್ಲಿಯ ದೊರೆ ಫತೀಮಿದ್ ಅಲ್ ಹಕೀಮ್, ಬುದ್ಧಿವಂತರನ್ನು ಗುರುತಿಸಿ ಆದರಿಸುತ್ತಿದ್ದುದೇ ಕಾರಣ. ಆದ್ದರಿಂದ ಅಲ್ಲಿಯ ಜನರು ಮಾತ್ರವಲ್ಲದೆ ಪಾಠಶಾಲೆಗಳೂ ಒಳ್ಳೆಯ ಹೆಸರು ಪಡೆದಿದ್ದುವು. ಎಲ್ಲ ವಿದ್ಯಾರ್ಥಿಗಳಿಗೂ ಅಲ್ಲಿ ಹೋಗಿ ಪಾಠ ಕಲಿಯುವ ಆಸೆ ಸಹಜವಾಗಿ ಮೂಡುತ್ತಿತ್ತು. ಇದು ಪ್ರತಿಷ್ಠೆಯ ಪ್ರಶ್ನೆಯೂ ಆಗಿತ್ತು. ಬಸ್ರಾ ನಗರದಲ್ಲಿ ಕ್ರಿ.ಶ. ೯೬೫ರಲ್ಲಿ ಹುಟ್ಟಿದ ಬಾಲಕನೊಬ್ಬನಿಗೂ ಇಂಥದೇ ಆಸೆ ಇತ್ತು. ಅಬು ಅಲಿ ಮೊಹಮ್ಮದ್ ಇಬ್ನ್ ಅಲ್ ಹೈತಾಮ್ ಎಂದಾತನ ಹೆಸರು. (ಪಾಶ್ಚಾತ್ಯ ಇತಿಹಾಸ ಗ್ರಂಥಗಳಲ್ಲಿ ಈ ಉದ್ದದ ಹೆಸರನ್ನು ಮೊಟಕುಗೊಳಿಸಿ, ಅಲ್ಹಾಝೆನ್ ಎಂದು ಬರೆದಿರುತ್ತಾರೆ.)

ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಇಬ್ನ್‌ಅಲ್ ಹೈತಾಮ್‌ಗೆ ಪ್ರಾಥಮಿಕ ಅಭ್ಯಾಸವಷ್ಟೇ ದೊರೆಯಿತು. ಉನ್ನತ ವಿದ್ಯಾಭ್ಯಾಸಕ್ಕೆ ಆರ್ಥಿಕ ಅಡಚಣೆ ಇದ್ದುದರಿಂದ ಆತ ನೌಕರಿ ಹಿಡಿಯಬೇಕಾಯಿತು. ತನ್ನ ಬೌದ್ಧಿಕ ಬೆಳವಣಿಗೆಯ ಸಲುವಾಗಿ ಬಿಡುವಿನ ವೇಳೆಯನ್ನೆಲ್ಲ ಅಧ್ಯಯನಕ್ಕೇ ವಿನಿಯೋಗಿಸಿದ. ಗಣಿತ, ಖಗೋಳ, ವೈದ್ಯಕೀಯ ಮತ್ತು ಭೌತಶಾಸ್ತ್ರಗಳ ಅಭ್ಯಾಸ ಮಾಡಿದ. ಆತ್ಮವಿಶ್ವಾಸ ಮೂಡಿದಂತೆ ಹೆಚ್ಚು ಹೆಚ್ಚು ಕಲಿಯುವ ಆಸೆ ಮೂಡಿತು. ದೂರದ ಈಜಿಪ್ಟನ್ನು ಹೇಗಾದರೂ ತಲುಪುವ ಕನಸು ಕಾಣತೊಡಗಿದ.

ಈಜಿಪ್ಟ್‌ನ ದೊಡ್ಡ ಸಮಸ್ಯೆಗಳಲ್ಲೊಂದು ನೈಲ್ ನದಿಯ ಪ್ರವಾಹ. ಇದರ ನಿಯಂತ್ರಣಕ್ಕಾಗಿ ದೊರೆ ಅಲ್ ಹಕೀಮ್ ಎಷ್ಟೆಷ್ಟೋ ಯೋಜನೆಗಳನ್ನು ತಯಾರಿಸಿದ್ದ. ಆದರೆ ಯಾವುದೂ ಫಲ ಕೊಟ್ಟಿರಲಿಲ್ಲ. ಈ ವಿಷಯ ತಿಳಿದ ಇಬ್ನ್ ಅಲ್-ಹೈತಾಮ್ ಒಂದು ಉಪಾಯ ಹುಡುಕಿದ. ಈಜಿಪ್ಟಿನ ಭೌಗೋಳಿಕ ಹರವನ್ನು ಅಭ್ಯಸಿಸಿ, ಅಸ್ಟನ್‌ನ ಸಮೀಪ ಒಂದು ಅಣೆಕಟ್ಟು ಕಟ್ಟಿದರೆ ಪ್ರವಾಹವನ್ನು ತಡೆದು, ಬೇಸಿಗೆಯಲ್ಲಿಯೂ ನೀರು ದೊರಕುವಂತೆ ನಿಯಂತ್ರಿಸಬಹುದು ಎಂದಾತ ಲೆಕ್ಕ ಹಾಕಿದ. ಇದೇ ಪ್ರಕಾರ

ಯೋಜನೆಯನ್ನೂ ರೂಪಿಸಿ, ಈ ಬಗ್ಗೆ ಹೆಚ್ಚಿನ ಭೌಗೋಳಿಕ ವಿವರ ಅವಶ್ಯವೆಂದು ಒತ್ತಿ ಹೇಳಿ ಅಲ್ ಹಕೀಮ್‌ನಿಗೊಂದು ಪತ್ರ ಬರೆದ.

ಈ ಹೊಸ ಆಲೋಚನೆಯಿಂದ ಪ್ರಭಾವಿತನಾದ ಅಲ್ ಹಕೀಮ್ ಈ ಬಗ್ಗೆ ಪ್ರಾಯೋಗಿಕ ಅಧ್ಯಯನ ಹಾಗೂ ಚರ್ಚೆಗಾಗಿ ಇಬ್ನ್ ಅಲ್ ಹೈತಾಮ್‌ನನ್ನು ಈಜಿಪ್ಟಿಗೆ ಆಹ್ವಾನಿಸಿದ. ಇಬ್ನ್ ಅಲ್ ಹೈತಾಮ್‌ನಿಗೆ ಬೇಕಾಗಿದ್ದುದು ಅದೇ. ಈಜಿಪ್ಟಿಗೆ ಅದೇ ಮೊದಲ ಬಾರಿಗೆ ಬಂದವನಿಗೆ ಅಲ್ಲಿಯ ಭೂಗೋಳದ ಬಗ್ಗೆ ಏನೇನೂ ತಿಳುವಳಿಕೆ ಇರಲಿಲ್ಲ. ಕೇವಲ ನಕ್ಷೆಗಳ ಆಧಾರದಿಂದ ಯೋಜನೆ ಹಾಕಿದ್ದನಷ್ಟೇ. ಆದ್ದರಿಂದ ಅಸ್ವಾನ್ ಪ್ರದೇಶವನ್ನು ಪರಿಶೀಲಿಸುತ್ತೇನೆಂದು ದೊರೆಯ ಅನುಮತಿ ಪಡೆದು ಹೊರಟ.

ಆತ ಊಹಿಸಿದ್ದೇ ಒಂದು. ಅಲ್ಲಿ ಇದ್ದುದ್ದೇ ಮತ್ತೊಂದು. ಆದರೂ ಧೃತಿಗೆಡದೆ ತನ್ನ ಕಾರ್ಯ ಮುಂದುವರಿಸಿದ. ನೆಲದ ಏರುಪೇರುಗಳನ್ನು ಗುರುತಿಸಿದ, ನದಿಯ ಹರವು; ಮಣ್ಣಿನ ರಚನೆ, ಬಂಡೆಗಳ ರಚನೆ-ಎಲ್ಲ ವಿವರಗಳನ್ನು ಸಂಗ್ರಹಿಸಿದ. ಸಾಮಾನ್ಯವಾಗಿ ೧೭,೦೦೦ ಘನ ಅಡಿಗಳಷ್ಟು ಹರಿಯುವ ನದಿ ಮಳೆಗಾಲದಲ್ಲಿ ಸೆಕೆಂಡಿಗೆ ೩೦೦,೦೦೦ ಘನ ಅಡಿಗಳನ್ನು ಹರಿಸುತ್ತದೆ ಎಂದಾಗ ಇಬ್ನ್ ಅಲ್ ಹೈತಾಮ್‌ಗೆ ಎದೆ ಧಸಕ್ಕೆಂದಿತು. ಇಷ್ಟೊಂದು ಭಾರೀ ಪ್ರಮಾಣದ ನೀರಿನ ರಭಸವನ್ನು ತಡೆಯುವ ಅಣೆಕಟ್ಟು ಅಂದಿನ ಎಂಜಿನಿಯರುಗಳ ಸಾಮರ್ಥ್ಯ ಮೀರಿದ್ದಾಗಿತ್ತು. ಈಗ ಆತನ ಮುಂದಿದ್ದುದು ಎರಡೇ ಆಯ್ಕೆಗಳು. ಇಂದು, ನಾಳೆ ಎಂದು ತನ್ನ ಯೋಜನೆಯನ್ನು ಮುಂದೆ ತಳ್ಳುತ್ತಾ ಕಾಲಹಾಕುವುದು ಅಥವಾ ಇದ್ದುದನ್ನು ಇದ್ದ ಹಾಗೆ ವರದಿ ಒಪ್ಪಿಸಿ ತನ್ನಿಂದ ಈ ಅಣೆಕಟ್ಟಿನ ಕಾರ್ಯ ಅಸಾಧ್ಯ ಎಂದು ಒಪ್ಪಿಕೊಳ್ಳುವುದು, ಮುಂಗೋಪಿ ಎಂದು ಹೆಸರಾಗಿದ್ದ ದೊರೆ ಯಾವ ಶಿಕ್ಷೆಯನ್ನಾದರೂ ಕೊಡಬಹುದು. ಅಷ್ಟರಲ್ಲಿ ಅಲ್ಲಿಯ ಹೆಸರಾಂತ ದಾರ್ಶನಿಕರ ಪುಸ್ತಕಗಳನ್ನು ಓದಿಬಿಡುವುದು ಎಂದಾತ ಆಲೋಚಿಸಿದ. ಈಜಿಪ್ಟಿಗೆ ಅವನನ್ನು ಎಳೆತಂದದ್ದು ಈ ಪುಸ್ತಕಗಳ ಮೋಹವೇ ಅಲ್ಲವೇ ?

ಆತ ಎಣಿಸಿದ್ದೊಂದು ಆದದ್ದೇ ಇನ್ನೊಂದು. ತನ್ನಿಂದ ಈ ಕಾರ್ಯ ಅಸಾಧ್ಯ ಎಂದಾಗ ದೊರೆ ಅವನಿಗೆ ತತ್‌ಕ್ಷಣವೇ ಕಠಿಣ ಶಿಕ್ಷೆಯನ್ನೇನೂ ಕೊಡಲಿಲ್ಲ. ಆದರೆ ಆತನಿಗಿದ್ದ ಸೌಲಭ್ಯಗಳು ತಪ್ಪಿಹೋದವು. ಇನ್ನೇನು ಶಿಕ್ಷೆಯ ಆಜ್ಞೆ ಹೊರಬೀಳಲಿದೆ ಎಂದು ಆತನಿಗೆ ತಿಳಿಯಿತು. ಅದನ್ನು ತಪ್ಪಿಸಿಕೊಳ್ಳಲು ಆತ ಹುಚ್ಚನಂತೆ ನಟಿಸಿದ. ದೊರೆ ಆತನಿಗೆ ಏನೂ ಶಿಕ್ಷೆ ಕೊಡದೆ ಜೈಲಿಗೆ ಹಾಕಿದ. ಆತನ ವರದಿಯನ್ನೆಲ್ಲ ಮುಟ್ಟುಗೋಲು ಹಾಕಿಕೊಂಡ.

ದೈವ ಆತನಿಗೆ ಅನುಕೂಲವಾಗಿತ್ತು. ಕೆಲವೇ ತಿಂಗಳಲ್ಲಿ ಆ ದೊರೆ ತೀರಿಕೊಂಡ. ಹೊಸದೊರೆ ಈ 'ಹುಚ್ಚ'ನನ್ನು ಬಿಡುಗಡೆ ಮಾಡಿದ.

ಈಗ ಹೊಟ್ಟೆಪಾಡಿಗೊಂದು ದಾರಿ ಮಾಡಿಕೊಳ್ಳಬೇಕಾಯಿತು. ಚಾಣಾಕ್ಷ

ನಾದ ಇಬ್ನ್‌ಅಲ್‌ಹೈತಾಮ್ ಇದ ಕ್ಕೊಂದು ಉಪಾಯ ಹುಡುಕಿದ. ಅಝರ್ ವಿಶ್ವವಿದ್ಯಾಲಯಕ್ಕೆ ಹೋಗಿ ಪುಸ್ತಕಗಳ ಪ್ರತಿ ಮಾಡುವ ಕೆಲಸಕ್ಕೆ ಸೇರಿಕೊಂಡ. (ಆಗ ಪ್ರಿಂಟಿಂಗ್ ಪ್ರೆಸ್ ಇರಲಿಲ್ಲ) ಯೂಕ್ಲಿಡ್‌ನ ರೇಖಾಗಣಿತ ಮತ್ತು ಟಾಲೆಮಿಯ ಅಲ್ಮಾಗೆಸ್ಟ್ ಪುಸ್ತಕಗಳ ಪ್ರತಿಗಳನ್ನು ಮಾಡತೊಡಗಿದ. ಪುಸ್ತಕ ಗಳನ್ನು ಓದಲು ಇದಕ್ಕಿಂತ ಒಳ್ಳೆಯ ಅವಕಾಶ ಇನ್ನೇನು ಬೇಕು ?

ಹೀಗೆ "ಏನಕೇನ ಪ್ರಕಾರೇಣ" ಜ್ಞಾನಾರ್ಜನೆ ಮಾಡಿಕೊಂಡ ಇಬ್ನ್‌ಅಲ್ ಹೈತಾಮ್, ದೃಷ್ಟಿಶಾಸ್ತ್ರದ ದೀರ್ಘ ಅಧ್ಯಯನ ನಡೆಸಿದ. ಇಪ್ಪತ್ತು ವರ್ಷಗಳ ನಂತರ ತನ್ನ ಫಲಿತಾಂಶಗಳನ್ನು ಕಿತಾಬ್-ಉಲ್-ಮನ್‌ಝಿರ್ (ದೃಷ್ಟಿ ಶಾಸ್ತ್ರದ ಅಧ್ಯಯನ) ಎಂದು ಪುಸ್ತಕ ರೂಪದಲ್ಲಿ ಪ್ರಕಟಿಸಿದ. ಅರಿಸ್ಟಾಟಲ್‌ನ ತತ್ವಗಳನ್ನೇ ಅನುಮೋದಿಸಿದ್ದರೂ ಈ ಪುಸ್ತಕದಲ್ಲಿ ಪ್ರಾಯೋಗಿಕ ವಿವರಣೆಗೆ ಹೆಚ್ಚು ಒತ್ತು ಕೊಟ್ಟಿದ್ದ.

ಬೆಳಕಿನ ರೇಖೆಗಳು ಕಣ್ಣಿನಿಂದ ಹೊರಟು ವಸ್ತುವನ್ನು ತಲುಪುತ್ತವೆ ಎಂದು ಆಗಿನ ನಂಬಿಕೆಯಾಗಿತ್ತು. ಇಬ್ನ್-ಅಲ್-ಹೈತಾಮ್ ಇದನ್ನು ವಿರೋಧಿಸಿ, ಬೆಳಕಿನ ರೇಖೆಗಳು ವಸ್ತುವಿನಿಂದ ಹೊರಡುತ್ತವೆ ಎಂದು ವಾದಿಸಿದ.

ಇಂದು ಎಲ್ಲ ಪಠ್ಯ ಪುಸ್ತಕಗಳಲ್ಲೂ ಕಂಡುಬರುವ ಪ್ರತಿಫಲನ ಮತ್ತು ವಕ್ರೀಭವನದ ಮೊದಲ ವಿವರಣೆ ನೀಡಿದ್ದು ಈತನೇ. ವಕ್ರೀಭವನ ಹೇಗಾಗುತ್ತದೆ ಎಂದು ಈತ ಗಣಿತ ಸೂತ್ರದ ಮೂಲಕ ವಿವರಿಸಲು ಪ್ರಯತ್ನಿಸಿದ (೬೦೦ ವರ್ಷಗಳ ಬಳಿಕ ಸ್ನೆಲ್ ಎಂಬ ವಿಜ್ಞಾನಿ ಇದನ್ನು ಯಶಸ್ವಿಯಾಗಿ ಪೂರೈಸಿದ. ಆದ್ದರಿಂದ ಇದಕ್ಕೆ ಸ್ನೆಲ್‌ನ ಹೆಸರೇ ಸೇರಿದೆ.)

ಕಣ್ಣು ಹೇಗೆ ಕೆಲಸ ಮಾಡುತ್ತದೆ ಎಂದಾತ ವಿವರವಾಗಿ ಅಭ್ಯಸಿಸಿದ. ರೆಟಿನಾ, ಪಾಪೆ, ಅಕ್ವಿಯಸ್ ಹ್ಯೂಮರ್ ಎಂಬ ದ್ರವ, ಕಾರ್ನಿಯ–ಈ ಎಲ್ಲ ಭಾಗಗಳ ವಿವರ ಗಳನ್ನು ತಿಳಿಸಿಕೊಟ್ಟ. ಆತ ಬಳಸಿದ ವಿಧಾನ ಮಾತ್ರವಲ್ಲದೇ, ಅನೇಕ ಪದಗಳನ್ನು ಹಾಗೇ ಉಳಿಸಿಕೊಳ್ಳಲಾಗಿದೆ. ಉದಾಹರ ಣೆಗೆ ಕಣ್ಣಿನೊಳಗೆ ಮಸೂರ (ಲೆನ್ಸ್) ಎಂಬುದನ್ನು ವಿವರಿಸಲು ಆತ 'ಅಡಾಸಾ' ಎಂಬ ಕಣಗಳಂತಿವೆ ಎಂದು ಬರೆದ. ಈ ಅರಾಬಿಕ್ ಶಬ್ದ 'ಅಡಾಸಾ' ಎಂಬುದಕ್ಕೆ ಲ್ಯಾಟಿನ್ ಭಾಷೆಯಲ್ಲಿ ಲೆನ್ಸ್ ಎಂಬ ಹೆಸರಿದೆ. ಆದ್ದರಿಂದ ಮಸೂರಗಳಿಗೆ ಲೆನ್ಸ್ ಎಂಬ ಹೆಸರೇ ಬಂದಿತು.

"ಧೂಳಿನ ಕಣಗಳು ಬೆಳಕನ್ನು ಚದರಿಸುತ್ತವೆ ಎಂಬುದು" ಇಬ್ನ್-ಅಲ್-ಹೈತಾಮ್ ನಡೆಸಿದ ಸಂಶೋಧನೆಗಳಲ್ಲಿ ಮುಖ್ಯವಾದುದು. ಸಂಧ್ಯಾಪ್ರಕಾಶ ಬೇಸಗೆಯಲ್ಲಿ ಹೆಚ್ಚು ಹೊತ್ತು ಏಕಿರುತ್ತದೆ ಎಂಬುದನ್ನು ಆತ ವಿವರಿಸಿದ್ದಾನೆ.

ಈಗ ಎಲ್ಲ ವಿದ್ಯಾರ್ಥಿಗಳಿಗೂ ಚಿರಪರಿಚಿತ ವಾಗಿರುವ ಪಿನ್‌ಹೋಲ್ ಕ್ಯಾಮರಾದ ಉಪಜ್ಞೆಕಾರ (ಇನ್ವೆಂಟರ್) ಈತನೇ. ಕಣ್ಣಿನ ರಚನೆಯ ಅಧ್ಯಯನದ ಆಧಾರದ ಮೇಲೆ ಈತ ಇದನ್ನು ಆವಿಷ್ಕರಿಸಿದ. ಇಂದು

ನಾವು ಪಿನ್‌ಹೋಲ್ ಕ್ಯಾಮರಾದ ತತ್ತ್ವವನ್ನು ಪ್ರಾಯೋಗಿಕವಾಗಿ ಅರಿತು, ಆನಂತರ ಕಣ್ಣು ಹೀಗೆಯೇ ಕೆಲಸಮಾಡುತ್ತದೆ ಎಂದು ತಿಳಿಯುತ್ತಿದ್ದೇವೆ.

ಈತನ ಪುಸ್ತಕಗಳಿಂದ ಪ್ರಭಾವಿತರಾದವರು ಅನೇಕ. ರೋಜರ್‌ಬೇಕನ್, ಲಿಯೊನಾರ್ಡೋದವಿನ್ಸಿ, ಯೋಹಾನ್ ಕೆಪ್ಲರ್, ಐಸಾಕ್ ನ್ಯೂಟನ್—ಹೀಗೆ ಹೆಸರುಗಳ ಪಟ್ಟಿಯನ್ನೇ ಮಾಡಬಹುದು.

ಹೈತಾಮ್‌ನ ಜೀವನದಲ್ಲಿ ಮುಖ್ಯಪಾತ್ರ ವಹಿಸಿದ ದೊರೆಗಳ ಜೀವನಾವಧಿಯ ಕಾಲ ಸರಿಯಾಗಿ ತಿಳಿದಿರುವುದರಿಂದ ಈತನ ಕಾಲವನ್ನು ನಿಗದಿಪಡಿಸುವುದು ಸಾಧ್ಯವಾಯಿತು. ಪಾಕಿಸ್ತಾನದ ಹಮದರ್ದ್ ಫೌಂಡೇಶನ್ ಎಂಬ ಸಂಸ್ಥೆ ಈ ಬಗ್ಗೆ ಸಂಶೋಧನೆ ನಡೆಸಿದೆ. ಈತ ಜ್ಞಾನಾರ್ಜನೆ ಆರಂಭಿಸಿದಾಗಲೇ ವಯಸ್ಸು ಐವತ್ತು ಆಗಿದ್ದಿರಬೇಕು ಎಂಬುದನ್ನು ಗಮನಿಸಿದಾಗ, ಈತನ ತಾಳ್ಮೆ ಹಾಗೂ ಜಾಣ್ಮೆಗೆ ತಲೆದೂಗಲೇಬೇಕು.

ಜ್ಞಾನಗಜಗಮನದಲಿ ವೈಫಲ್ಯವಿಲ್ಲ–ನಡೆ
ಮಾನಾಪಮಾನಗಳ ಲೆಕ್ಕಿಸದೆ, ಶೃಂಗಾಭಿ–
ಮಾನ ನವದೃಶ್ಯಗಳ ಕಾಣಿಸುತ ನಿನ್ನನು ಸ-
ದಾನೇರಿಪುದು ಭರವಸೆಯಿರಲಿ ಅತ್ರಿಸೂನು

---



ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ ;
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ ;
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ ಕೂಡಲ ಸಂಗಮದೇವ

—ಬಸವಣ್ಣ

# ಮುತ್ತುಗಳು : ಸಾಗರದಾಳದ ಸಂಪತ್ತು

**ಲಕ್ಷ್ಮೀನಾರಾಯಣ**
ರೈಲ್ವೆಸ್ಟೇಷನ್ ರಸ್ತೆ. ಕೆ. ಆರ್. ಸಾಗರ
ಶ್ರೀರಂಗಪಟ್ಟಣ ತಾಲ್ಲೂಕು
ಮಂಡ್ಯ ಜಿಲ್ಲೆ

ನೋಡ ಬಾಯಿ ತೆರೆದು ಸ್ವಾತಿ ಮಳೆ ಬಿದ್ದಾಗ ಈ ಹನಿಯು ಕಪ್ಪೆಚಿಪ್ಪಿನೊಳಗೆ ಹೋಗುತ್ತಿದ್ದಂತೆಯೇ ಕಪ್ಪೆಚಿಪ್ಪು ಭದ್ರವಾಗಿ ಬಾಯಿ ಮುಚ್ಚುತ್ತದೆ. ಅನಂತರ ಆ ಹನಿ ಮುತ್ತಾಗುತ್ತದೆ! ಮುತ್ತಿನ ಬಗ್ಗೆ ಇದು ಕವಿಯ ಕಲ್ಪನೆ.

ಆದರೆ ಒಬ್ಬ ಸಾಮಾನ್ಯ ಮನುಷ್ಯ ಚಿಂತಿಸಿದರೂ ಸಾಕು. ಪ್ರತಿ ಸಾರಿ ಬೀಳುವ ಸ್ವಾತಿಯ ಪ್ರತಿಯೊಂದು ಹನಿಯು ಮುತ್ತಾಗಿ ಪರಿವರ್ತನೆಯಾಗಬೇಕು. ಆದರೆ ಅದು ಸಾಧ್ಯವೇ ? ಮುತ್ತು ಕಪ್ಪೆ ಚಿಪ್ಪಿನೊಳಗೆ ರಚನೆಯಾಗುವುದಂತೂ ಸತ್ಯ ; ಆದರೆ ಅದು ಸ್ವಾತಿ ಮಳೆಯಿಂದಂತೂ ಅಲ್ಲ ಮುತ್ತು ಒಂದು ನಿರ್ದಿಷ್ಟವಾದ ಕಪ್ಪೆ ಚಿಪ್ಪಿನಲ್ಲಿ ಮಾತ್ರ ರಚನೆಯಾಗುತ್ತದೆ.

ಮುತ್ತಿನ ಕಪ್ಪೆ ಚಿಪ್ಪುಗಳು ಸಾಗರದ ತಳದಲ್ಲಿ ವಾಸಿಸುವ ಒಂದು ತರಹದ ಜೀವಿಗಳು. ಇವು ಆಕ್ರಮಣಕಾರಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಒಂದು ಜೊತೆ ಚಿಪ್ಪನ್ನು ಉತ್ಪತ್ತಿ ಮಾಡಿಕೊಳ್ಳುತ್ತವೆ. ತಮ್ಮ ಬದುಕು ಹಾಗು ಬೆಳವಣಿಗೆಗಾಗಿ ಮುಖ್ಯವಾಗಿ ಬೇಕಾದ ಪೋಷಕಾಂಶ ಮತ್ತು ಆಮ್ಲಜನಕವನ್ನು ಪಡೆಯಲು ಸಮುದ್ರದ ನೀರನ್ನು ಸದಾ ಒಳಗೆ ತೆಗೆದುಕೊಂಡು ಮತ್ತೆ ಆಚೆಗೆ ಬಿಡುತ್ತಿರುತ್ತದೆ. ಈ ಕ್ರಿಯೆಯಲ್ಲಿ ತಮ್ಮ ಚಿಪ್ಪಿನ ಬಾಯಿಯನ್ನು ತೆರೆಯುವುದು ಮತ್ತು ಮುಚ್ಚುವುದನ್ನು ಮಾಡುತ್ತಿರುತ್ತದೆ. ಈ ಕ್ರಿಯೆಯಲ್ಲಿ ಮರಳಿನ ಅಥವಾ ಹೊರಗಿನ ಯಾವುದಾದರೂ ಒಂದು ಕಣ ಚಿಪ್ಪಿನೊಳಗೆ ಸೇರಿ ತಳವೂರುತ್ತದೆ. ಇದರಿಂದ ಕಪ್ಪೆ ಚಿಪ್ಪಿಗೆ ಹೊರಗಿನ ಈ ಕಣದಿಂದ ಒಂದು ರೀತಿಯ ಅಸಹನೀಯತೆ ಉಂಟಾದರೂ ಆ ಕಣವನ್ನು ಹೊರದಬ್ಬಲು ಅದಕ್ಕೆ ಯಾವುದೇ ಅಂಗಗಳಿಲ್ಲ. ಪ್ರಯುಕ್ತ ರಹಸ್ಯವಾಗಿ ಆ ಕಣವನ್ನು ಮೃದುವಾದ ಮುತ್ತಿನ ಚಿಪ್ಪಿನೊಳಗಿಡುತ್ತದೆ. ಇದು ಬಹಳ ನಿಧಾನ ಕ್ರಿಯೆಯಲ್ಲಿ ಒಳಗೆ ಬೆಳೆದು ದಪ್ಪವಾಗುತ್ತಾ ಹೊಳೆಯಲಾರಂಭಿಸುತ್ತದೆ.

ಮುತ್ತು ಹೀಗೆ ರಚನೆಯಾಗುತ್ತದೆ. ಮುತ್ತಿನ ಚಿಪ್ಪು ದಪ್ಪವಾದಷ್ಟು ಹೆಚ್ಚು ಮಿನುಗಿ ಹೊಳೆಯುವುದಲ್ಲದೆ, ಹೆಚ್ಚು ದುಬಾರಿಯೂ ಆಗಿರುತ್ತದೆ. ಮುತ್ತಿನ ಆಕಾರ ಯಾವಾಗಲೂ ಚಿಪ್ಪಿನೊಳಗೆ ಸೇರುವ ಹೊರಗಿನ ವಸ್ತುವಿನ ಆಕಾರವನ್ನು ಪಡೆಯುತ್ತದೆ. ಸರಿಯಾಗಿ ಪರಿಪೂರ್ಣವಾದ, ವೃತ್ತಾಕಾರದ ಮುತ್ತುಗಳು

ದೊರೆಯುವುದು ಬಹಳ ದುರ್ಲಭ. ಜತೆಗೆ ಮುತ್ತಿನ ಆಕಾರ ಯಾವಾಗಲೂ ಕಪ್ಪೆ ಚಿಪ್ಪಿನೊಳಗಿನ ಅದರ ಸ್ಥಾನವನ್ನು ಸಹಾ ಅವಲಂಬಿಸಿರುತ್ತದೆ. ಈ ಕಾರಣಕ್ಕೋಸ್ಕರ ಮುತ್ತುಗಳು ಭಿನ್ನ ಭಿನ್ನವಾದ ಆಕಾರ ಹಾಗೂ ಗಾತ್ರದಲ್ಲಿ ದೊರೆಯುತ್ತವೆ. ನೈಜವಾದ ಮುತ್ತಿಗೆ ಯಾವಾಗಲೂ ಬೇಡಿಕೆ ಅತಿಯಾಗಿರುತ್ತದೆ.

ಜಪಾನಿಯರು ವೈಜ್ಞಾನಿಕವಾಗಿ ಮುತ್ತುಗಳನ್ನು ಉತ್ಪಾದಿಸುವುದನ್ನು ಕಂಡುಹಿಡಿದಿದ್ದಾರೆ. ಜತೆಗೆ ಸಂಪೂರ್ಣ ಗೋಲಾಕಾರದ ಮುತ್ತುಗಳನ್ನು ಪ್ರಾಯೋಗಿಕವಾಗಿ ಉತ್ಪಾದಿಸಲು ಶ್ರಮಿಸಲಾಗುತ್ತಿದೆ. ಪ್ರಕೃತಿಯಲ್ಲಿ ಇದು ಬಹಳ ಅಪರೂಪ. ಬಹಳಷ್ಟು ಸಂಶೋಧನೆ ಈ ದಿಶೆಯಲ್ಲಿ ಸಾಗಿದೆ. ಸಮಸ್ಯೆಯಿರುವುದು ಮುತ್ತುಗಳನ್ನು ಸೃಷ್ಟಿಸುವುದಲ್ಲ—ಅದನ್ನು ಈಗಾಗಲೇ ಸೃಷ್ಟಿಸಲಾಗಿದೆ–ಆದರೆ ಪೂರ್ಣ ಗೋಳಾಕಾರದ ಮುತ್ತುಗಳನ್ನು ಹೇಗೆ ಪಡೆಯಬೇಕೆಂಬುದೇ ಸಮಸ್ಯೆ.

ಹಲವಾರು ವರ್ಷಗಳ ಸತತ ಪ್ರಯತ್ನದ ಫಲವಾಗಿ ಚಪ್ಪಟೆಯಾಕಾರದ ಹಾಗೂ ನಿರ್ದಿಷ್ಟ ಆಕಾರವಿಲ್ಲದ ಮುತ್ತುಗಳನ್ನು ನಿರ್ಮಿಸಲಾಯಿತು. ಆದರೆ ೨೫ ವರ್ಷಗಳ ದೀರ್ಘ ಪರಿಶ್ರಮದ ಫಲವಾಗಿ ಜಪಾನಿನ 'ಮಿಕಿಮೋಟೋ' ಎಂಬುವವರು ಪ್ರಪ್ರಥಮವಾಗಿ ಮಾನವ ನಿರ್ಮಿತ ಗೋಳಾಕಾರದ ಮುತ್ತನ್ನು ಕೃಷಿ ಮಾಡಿದರು.

ಇಂದು ಮಾರುಕಟ್ಟೆಗಳಲ್ಲಿ ಸಿಗುವ ಮುತ್ತುಗಳೆಂದರೆ ಮಾನವ ನಿರ್ಮಿತ ಮುತ್ತುಗಳು. ನೈಜವಾದ ಮುತ್ತುಗಳಿಗಿಂತ ಕೃಷಿ ಮಾಡಿದ ಮುತ್ತುಗಳೇನು ಕಳಪೆಯಾಗಿರುವುದಿಲ್ಲ. ಎರಡೂ ಥರಹದ ಮುತ್ತುಗಳೂ ನೈಜವಾದ ಮುತ್ತು ಕಪ್ಪೆ ಚಿಪ್ಪಿನಲ್ಲಿ ರಚಿತವಾದುವೇ. ಆದರೆ ಎರಡಕ್ಕು ಇರುವ ವ್ಯತ್ಯಾಸವೆಂದರೆ ಸ್ವಾಭಾವಿಕವಾದ ಮುತ್ತುಗಳಲ್ಲಿ ಹೊರಗಿನ ವಸ್ತು ಆಕಸ್ಮಿಕವಾಗಿ ಕಪ್ಪೆ ಚಿಪ್ಪಿನೊಳಗೆ ಹೋಗುತ್ತದೆ. ಆದರೆ ಕೃಷಿ ಮಾಡಿದ ಮುತ್ತುಗಳಲ್ಲಿ ಉದ್ದೇಶಪೂರ್ವಕವಾಗಿ ಹೊರಗಿನ ವಸ್ತುಗಳನ್ನು ಒಳ ಸೇರಿಸಲಾಗುತ್ತದೆ.

ಮುತ್ತುಗಳ ಕೃಷಿಯಿಂದಾಗುವ ಪ್ರಯೋಜನವೆಂದರೆ ಅವುಗಳನ್ನು ಹೆಚ್ಚಾಗಿ ಉತ್ಪಾದಿಸಿ, ಹೆಚ್ಚುತ್ತಿರುವ ಬೇಡಿಕೆಗನು ಗುಣವಾಗಿ ಪೂರೈಸಬಹುದು.

**ಗಾತ್ರ, ಆಕಾರ ಮುತ್ತು ಬಣ್ಣ**

ಈ ಕ್ಷೇತ್ರದಲ್ಲಿ ತಾಂತ್ರಿಕ ಪ್ರಗತಿಯಿಂದಾದ ಮತ್ತೊಂದು ಕ್ರಾಂತಿಕಾರಕ ಬದಲಾವಣೆಯೆಂದರೆ ಈಗ ಮುತ್ತುಗಳನ್ನು ಯಾವುದೇ ಗಾತ್ರ, ಆಕಾರ ಮತ್ತು ಬಣ್ಣಗಳಲ್ಲಿ ಪಡೆಯಬಹುದು. ಈ ರೀತಿ ಪಡೆಯಬೇಕಾದರೆ ನಿರ್ದಿಷ್ಟವಾಗಿ ಬೇಕಾದ ಗಾತ್ರ ಮತ್ತು ಆಕಾರದ ಕಣಗಳನ್ನು ಚಿಪ್ಪಿನೊಳಗೆ ಬಿಡಬೇಕು. ಆದರೆ ಯಾವುದೋ ಒಂದು ಕಣದಿಂದ ಈ ರೀತಿ ಪಡೆಯಲು ಸಾಧ್ಯವಿಲ್ಲ. ಆದರೆ ಆ ಕಣ ಚಿಪ್ಪಿನೊಳಗಿರುವ ರಾಸಾಯನಿಕ ವಸ್ತುವಿನ ಜತೆ ಹೊಂದಾಣಿಕೆಯಾಗಬೇಕು. ಅದಕ್ಕಾಗಿ ಇಂಥ ಕಣಗಳನ್ನು 'ಶಂಖು ಮಿಾನು'ಗಳ ಶಂಖದಿಂದ ಮಾಡಲಾಗುತ್ತದೆ. ಇದಕ್ಕೆ 'ಪಿಗ್–ಟೋ' ಎಂದು ಕರೆಯುತ್ತಾರೆ. ಕಾರಣ ಇವು ಹಂದಿಯ ಕಾಲಿನ ಗೊರಸಿನ ಆಕಾರದಲ್ಲಿರು

ವುದರಿಂದ. ಇವು ಹೆಚ್ಚಾಗಿ ಅಮೇರಿಕಾದ ತೀರದಲ್ಲಿ ದೊರೆಯುತ್ತವೆ. ಮೊದಲು ಇವುಗಳ ಚಿಪ್ಪಿನೊಳಗಿನ ಸಾವಯುವ ವಸ್ತುಗಳನ್ನು ಬೇರ್ಪಡಿಸಿ ನಂತರ ನಿರ್ದಿಷ್ಟ ವಾದ ಆಕಾರ ಮತ್ತು ಗಾತ್ರಕ್ಕೆ ಕತ್ತರಿಸಿ ಚೂರುಗಳಾಗಿ ಮಾಡಲಾಗುತ್ತದೆ ಮತ್ತು ಸಾಕಷ್ಟು ಮೃದುವಾಗುವವರೆವಿಗೂ ಅವು ಗಳಿಗೆ ಪಾಲಿಷ್ ಮಾಡಲಾಗುತ್ತದೆ.

ಮುತ್ತಿನ ಕೃಷಿ ಜಪಾನಿನಲ್ಲಿ ಬಹಳ ದೊಡ್ಡ ಉದ್ದಿಮೆಯಾಗಿದೆ. ಕಬ್ಬಿಣದ ಬಲೆಗಳ ದೊಡ್ಡ ಮೆಷ್‌ಗಳನ್ನು ವಿಶಾಲ ವಾದ ಸಾಗರದ ತಳಭಾಗದಲ್ಲಿ ಹರಡಿ, ಅವುಗಳ ಮೇಲೆ ಮುತ್ತಿನ ಕಪ್ಪೆ ಚಿಪ್ಪು ಗಳನ್ನು ಬಿಡಲಾಗುತ್ತದೆ. ಈ ತಂತ್ರ ಮೂರು ವರ್ಷಗಳ ಅವಧಿಯಲ್ಲಿ ಗರಿಷ್ಟ ಮಟ್ಟದ ಗಾತ್ರದ ಮುತ್ತುಗಳನ್ನು ದೊರಕಿಸಿ ಕೊಡುತ್ತದೆ.

ಮೆಷ್‌ಗಳ ಮೇಲೆ ಎಷ್ಟು ಸಂಖ್ಯೆಯ ಕಪ್ಪೆ ಚಿಪ್ಪುಗಳನ್ನು ಬಿಟ್ಟಿದೆ ಎಂಬುದರ ಬಗ್ಗೆ ನಿಖರವಾಗಿ ದಾಖಲೆ ಗಳನ್ನು ಇಡಲಾಗುತ್ತದೆ ಮತ್ತು ಚಿಪ್ಪಿ ನೊಳಗೆ ಕಣಗಳನ್ನು ಬಿಟ್ಟ ಸಮಯ, ಅವುಗಳ ಗಾತ್ರ, ಆಕಾರ, ಮತ್ತು ಅವುಗಳಿಂದ ಯಾವಾಗ ಮುತ್ತುಗಳನ್ನು ಸಂಗ್ರಹಿಸಬೇಕು ಹಾಗು ಸಾಗರದ ಯಾವ ಭಾಗದಲ್ಲಿ ಅವುಗಳನ್ನು ಬಿಡಲಾಗಿದೆ ಇತ್ಯಾದಿ ಗಳ ಬಗ್ಗೆ ನಿಖರವಾದ ಮಾಹಿತಿ ಇರುತ್ತದೆ.

ನೀರಿನೊಳಗೆ ಎಷ್ಟು ದೀರ್ಘ ಕಾಲ ಮುತ್ತಿನ ಚಿಪ್ಪುಗಳನ್ನು ಬಿಡುತ್ತದೆಯೋ ಅಷ್ಟು ಕಾಲ ಹೆಚ್ಚಿನ ಮುತ್ತಿನ ಪದರಗ ಳಾಗುತ್ತವೆ. ಆದ್ದರಿಂದ ನೀರಿನಲ್ಲಿ ದೀರ್ಘ ಕಾಲ ಬಿಟ್ಟಷ್ಟು ದಪ್ಪನಾದ ಹಾಗು ಹೆಚ್ಚು ಹೊಳಪಿನ, ದುಬಾರಿಯಾದ ಮುತ್ತು ದೊರೆಯುತ್ತದೆ.

ತನ್ನದೇ ಆದ ಒಂದು ನಿರ್ದಿಷ್ಟ ಕಾಲದ ವರೆಗೂ ಪ್ರತಿ ಚಿಪ್ಪು, ಮುತ್ತನ್ನು ಹೊಂದಿರುತ್ತದೆ. ಆದ್ದರಿಂದ ಆ ಚಿಪ್ಪು ಅಂತ್ಯವಾಗುವುದರೊಳಗಾಗಿ ಮುತ್ತುಗ ಳನ್ನು ತೆಗೆದುಬಿಡಬೇಕು. ಪ್ರಪಂಚದಲ್ಲಿ ಈ ಮುತ್ತಿನ ಚಿಪ್ಪುಗಳ ಸೃಷ್ಟಿ ಹೇಗಾಯಿ ತೆಂದು ಆಶ್ಚರ್ಯವಾಗಬಹುದು. ಆದರೆ ಶೀಘ್ರವಾಗಿ ಹೊಸ ಹೊಸ ಮುತ್ತಿನ ಚಿಪ್ಪುಗಳ ಉತ್ಪಾದನೆಯಾಗದಿದ್ದರೆ ಈಗ ಹಾಲಿ ಇರುವಂಥಹವು ಕೊನೆಗೊಳ್ಳುವ ಕಾಲ ಬಹಳ ದೂರವಿಲ್ಲ.

## ಮುತ್ತಿನ ಚಿಪ್ಪುಗಳ ಪೋಷಣೆ

ಜಪಾನಿನ ಮುತ್ತಿನ ಕೈಗಾರಿಕೆಯ ಪ್ರಾಮುಖ್ಯತೆ ಹಾಗೂ ಮುಖ್ಯ ಲಕ್ಷಣ ವೆಂದರೆ ಮುತ್ತಿನ ಚಿಪ್ಪುಗಳ ಪೋಷಣೆ ಹಾಗೂ ಅವುಗಳ ಸಂತಾನಾಭಿವೃದ್ಧಿ.

ಹೆಣ್ಣು ಮುತ್ತಿನ ಚಿಪ್ಪು ಸಾಮಾನ್ಯ ವಾಗಿ ಜೂನ್, ಜುಲೈ ಮತ್ತು ಆಗಸ್ಟ ತಿಂಗಳಲ್ಲಿ ಮೊಟ್ಟೆಗಳನ್ನಿಡುತ್ತದೆ. ಆಗ ನೂರಾರು ಸಾವಿರ ಸಣ್ಣ ಸಣ್ಣ ಮೊಟ್ಟೆಗಳು ನೀರಿನಲ್ಲಿ ತೇಲುವುದನ್ನು ಕಾಣಬಹುದು. ಇವುಗಳನ್ನು ಕಲೆಹಾಕಿ ಫಲವತ್ತತೆಗೆ ಬರುವ ವರೆವಿಗೂ ಪೋಷಿಸಿ ನಂತರ ಗಂಡು ಮುತ್ತಿನ ಚಿಪ್ಪುಗಳು ಮಾಡುವ ವೀರ್ಯಾಣುವಿನಿಂದ ಗರ್ಭಧರಿಸುವಂತೆ ಮಾಡಲಾಗುತ್ತದೆ.

ಈ ಕ್ರಿಯೆ ಬೇಸಿಗೆಯಲ್ಲಿ ಮುಂದುವರೆ ಯುತ್ತದೆ ಮತ್ತು ಆಗ ನೀರು ನೊರೆ ಯಂತೆ ಹಾಲಿನ ಬಣ್ಣಕ್ಕಿರುತ್ತದೆ. ಮೊಟ್ಟೆ ಗಳನ್ನು ತೆಗೆದು ನೀರಿನ ತಳಭಾಗದಲ್ಲಿರುವ

ಬಂಡೆಗಳು ಹಾಗು ಒರಟಾದ ಭಾಗದಲ್ಲಿ ಬಿಟ್ಟರೆ ಉತ್ತಮವಾದ ಮರಿಗಳನ್ನು ನಿರೀಕ್ಷಿಸಬಹುದು. ಒಂದು ವೇಳೆ ಮೊಟ್ಟೆಗಳಿಗೆ ಪ್ರಾಣಾಧಾರವಾದ ಸ್ಥಳ ದೊರಕದಿದ್ದರೆ ಮೊಟ್ಟೆಗಳು ಒಡೆದು ಹೊರಬರಲಾರವು. ಆದ್ದರಿಂದ ಇವುಗಳ ಪೋಷಣೆಗಾಗಿ ಒರಟಾದ ಹಗ್ಗ, ಮರದ ಕಾಂಡ ಹಾಗು ಇತರ ಸೂಕ್ತ ವಸ್ತುಗಳನ್ನು ನೀರಿನೊಳಗೆ ಮುಳುಗಿಸಿ ಅವಕಾಶ ಮಾಡಿಕೊಡಲಾಗುತ್ತದೆ.

ಎರಡು ತಿಂಗಳ ಅನಂತರ ಹಗ್ಗ ಮತ್ತು ಇತರ ವಸ್ತುಗಳನ್ನು ಮೇಲಕ್ಕೆತ್ತಿದಾಗ ಮೊಟ್ಟೆಯಿಂದ ಹೊರಬಂದ ಸಾವಿರಾರು ಸಣ್ಣ ಸಣ್ಣ ಮರಿಗಳು ಅವುಗಳ ಮೇಲೆ ಅಂಟಿಕೊಂಡಿರುತ್ತವೆ. ಈ ಸಂತತಿಗಳನ್ನು ಕಲೆಹಾಕಿ ಸಾಗರದೊಳಗೆ ನೈಲಾನ್ ಅಥವಾ ವೈರ್ ಮೆಷ್‌ಗಳ ಮೇಲೆ ಬಿಡಲಾಗುತ್ತದೆ. ಕೆಲಕಾಲದ ತರುವಾಯ ಅವು ಸಾಕಷ್ಟು ಬಲಿತ ಮೇಲೆ ಅವುಗಳಿಗೆ ಸೂಕ್ತವಾದ ಕಣಗಳನ್ನು ಸೇರಿಸಿ ಅನಂತರ ಮೂರು ವರ್ಷಗಳ ಕಾಲ ಬೆಳೆಯಲು ಬಿಡಲಾಗುತ್ತದೆ.

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಮುತ್ತಿಗೆ ಬಹಳ ಪ್ರಾಶಸ್ತ್ಯವಿದೆ. ಸಾಹಿತ್ಯದಲ್ಲಿಯೂ ಇದರ ಬಗ್ಗೆ ಉಲ್ಲೇಖವಿದೆ. ರಾಜಮಹಾರಾಜರುಗಳ ಕಿರೀಟದಲ್ಲಿ ಅಳವಡಿಸಿದ ಮುತ್ತುಗಳು ಅವರಿಗೆ ಕಾಂತಿಯನ್ನು, ಶೋಭೆಯನ್ನು ತರುತ್ತಿದ್ದವು. ಮಹಾರಾಣಿಯರು ತಮ್ಮ ಸೌಂದರ್ಯವನ್ನು ವೃದ್ಧಿಸಿಕೊಳ್ಳಲು ಏಳು ಸುತ್ತಿನ ಮುತ್ತಿನ ಹಾರಗಳನ್ನು ಧರಿಸಿಕೊಳ್ಳುತ್ತಿದ್ದರು. ಅಲ್ಲದೆ ಇಂದಿಗೂ ಸಹಾ ಅನೇಕ ಭಾರತೀಯರು ಮುತ್ತುಗಳನ್ನು ಧರಿಸಿದರೆ ಅನೇಕ ಕ್ಷುದ್ರ ಗ್ರಹಗಳ ದೃಷ್ಟಿಯಿಂದ ಪಾರಾಗಬಹುದೆಂದು ನಂಬಿದ್ದಾರೆ.

## ಜಾಸ್ರಾ ಮುತ್ತುಗಳು

ಮೂಲತಃ ಮುತ್ತುಗಳನ್ನು ಜಾಸ್ರಾದಿಂದ ಭಾರತಕ್ಕೆ ತರಲಾಗುತ್ತದೆ. ಇವುಗಳು ಸ್ವಾಭಾವಿಕವಾದ ಮುತ್ತುಗಳಾಗಿರುವುದರಿಂದ ಇವುಗಳಿಗೆ ಬೆಲೆ ಹೆಚ್ಚು. ಹಿಂದಿನ ಕಾಲದ ಸಾಮಾನ್ಯ ಜನರು ಮುತ್ತುಗಳನ್ನು ಧರಿಸಲು ಅಷ್ಟು ಶಕ್ತರಾಗಿರಲಿಲ್ಲ. ಆದರೆ ಈ ದಿನಗಳಲ್ಲಿ ಮುತ್ತುಗಳನ್ನು ಜಪಾನಿನಿಂದ ಸಾಕಷ್ಟು ಆಮದು ಮಾಡಿಕೊಳ್ಳಲಾಗುತ್ತಿದೆ. ಇವು ಸುಂದರವಾಗಿರುವುದಷ್ಟೇ ಅಲ್ಲ; ಅಗ್ಗವೂ ಆಗಿದೆ. ಮಧ್ಯಮ ಹಾಗೂ ಸಾಮಾನ್ಯ ಜನರೂ ಸಹಾ ಈ ರತ್ನಗಳನ್ನು ಸುಲಭವಾಗಿ ಧರಿಸಬಹುದು. ಭಾರತದಲ್ಲಿ ಅತಿ ದೊಡ್ಡ ಮುತ್ತಿನ ಕೈಗಾರಿಕಾ ಕೇಂದ್ರವೆಂದರೆ ಹೈದರಾಬಾದ್. ಇಲ್ಲಿ ಮುತ್ತುಗಳನ್ನು ಜಪಾನಿನಿಂದ ತರಿಸಿಕೊಂಡು ಅವುಗಳಿಗೆ ರಂಧ್ರ ಮತ್ತು ಪಾಲಿಷ್ ಮಾಡಿ ಸರಗಳಾಗಿ ಮಾಡಲಾಗುವುದು.

ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿಯೇ ಮುತ್ತುಗಳನ್ನು ಕೃಷಿ ಮಾಡಲಾಗುತ್ತಿದೆ. ಗುಜರಾತ್ ಮತ್ತು ಲಕ್ಷ ದ್ವೀಪಗಳಲ್ಲಿ ಸಣ್ಣ ಪ್ರಮಾಣದಲ್ಲಿ ಕೃಷಿ ಮಾಡಲಾಗುತ್ತಿದೆ. ಮುತ್ತುಗಳು ಹಲವಾರು ಆಕಾರ, ಗಾತ್ರ ಮತ್ತು ಬಣ್ಣಗಳಲ್ಲಿ ದೊರೆಯುತ್ತವೆ. ದೊಡ್ಡದಾದ ಮತ್ತು ಸಂಪೂರ್ಣ ಗೋಲಾಕಾರದ, ಹಾಗು ಗುಲಾಬಿ ಬಣ್ಣದ ಮುತ್ತುಗಳಿಗೆ ಬೆಲೆ ಹೆಚ್ಚು. ಬಿಳಿಯ ಹಾಗು ನೊರೆ

ಹಾಲಿನ ಬಣ್ಣದ ಮುತ್ತುಗಳು ಬಹಳ ಪ್ರಸಿದ್ಧಿ ಪಡೆದಿವೆಯಲ್ಲದೆ ತುಂಬಾ ದುಬಾರಿಯೂ ಆಗಿವೆ.

ಮುತ್ತುಗಳು ದೊಡ್ಡದಾಗಿದ್ದರೂ ಅವುಗಳಲ್ಲಿ ಹೊಳಪಿರದಿದ್ದರೆ ಅವಕ್ಕೆ ಬೆಲೆಯಿರುವುದಿಲ್ಲ. ಜಗತ್ತಿನಲ್ಲಿ ಕಪ್ಪು ಮುತ್ತುಗಳು ಇವೆಯಾದರೂ ಅವುಗಳು ಬಹಳ ಅಪರೂಪ. ಪ್ರಪಂಚದ ಕೇವಲ ಬೆರಳೆಣಿಕೆಯಷ್ಟು ಮಂದಿ ಮಾತ್ರ ಅವುಗಳನ್ನು ಖರೀದಿಸಬಲ್ಲರು.

ಹೈದರಾಬಾದಿನಲ್ಲಿ ಸಾಮಾನ್ಯವಾಗಿ ಎಲ್ಲಾ ಥರಹದ ಮುತ್ತುಗಳು ದೊರೆಯುತ್ತವೆ. ಅತಿ ಹೆಚ್ಚಾಗಿ ದೊರೆಯುವ ಮುತ್ತುಗಳಲ್ಲಿ 'ಅಕ್ಕಿ ಮುತ್ತು' (ರೈಸ್ ಪೆರಲ್) ಮುಖ್ಯವಾದುದು. ಇವು ಅಕ್ಕಿ ಕಾಳನ್ನು ಹೋಲುವುದರಿಂದ ಈ ಹೆಸರು ಬಂದಿದೆ. ಇವು ಎಲ್ಲಾ ಗಾತ್ರದಲ್ಲಿಯೂ ದೊರೆಯುತ್ತವೆ. ರಂಧ್ರಗಳಿಲ್ಲದ 'ಗುಂಡಿ ಮುತ್ತು' (ಬಟನ್ ಪೆರಲ್) ಗಳನ್ನು ಒಡವೆ, ಉಂಗುರ ಹಾಗೂ ಕಿವಿಯ ಆಭರಣಗಳಿಗೆ ಉಪಯೋಗಿಸುತ್ತಾರೆ. ಮೊಟ್ಟೆಯಾಕಾರದ ಅಸಮರೂಪದ ಮುತ್ತುಗಳನ್ನು ವಿಶೇಷವಾಗಿ ಕತ್ತಿನ ಸರ ಹಾಗು ಬ್ರೇಸಲೆಟ್ ತಯಾರಿಸಲು ಉಪಯೋಗಿಸುತ್ತಾರೆ.

**ಸಂರಕ್ಷಣೆ**

ಮುತ್ತುಗಳನ್ನು ಗಾಳಿಯಾಡದ ಸ್ಥಳದಲ್ಲಿ ಹಲವಾರು ವರ್ಷಗಳ ಕಾಲ ಇಟ್ಟರೆ ಅವು ತಮ್ಮ ಹೊಳಪನ್ನು ಕಳೆದುಕೊಳ್ಳುತ್ತವೆ. ಸತತವಾದ ಬೆವರಿನ ಸಂಪರ್ಕದಿಂದಲೂ ಮುತ್ತುಗಳು ಹಾಳಾಗುತ್ತವೆ. ಆದ್ದರಿಂದ ಮುತ್ತುಗಳನ್ನು ಆಗಾಗ್ಗೆ ಹತ್ತಿಯಿಂದ ಸ್ವಚ್ಛಗೊಳಿಸುತ್ತಿರಬೇಕು.

ಉಗುರು ಬೆಚ್ಚಗಿನ ನೀರಿನಿಂದ ತೊಳೆದು, ಹತ್ತಿಯಿಂದ ಒರೆಸಬೇಕು. ಇದರಿಂದ ಅವುಗಳ ಹೊಳಪು ಮತ್ತು ಕಾಂತಿ ಹಾಳಾಗುವುದಿಲ್ಲ. ಮುತ್ತುಗಳನ್ನು ಹತ್ತಿಯಲ್ಲಿ ಆಭರಣಗಳ ಪೆಟ್ಟಿಗೆಯಲ್ಲಿಡಬೇಕು.

ನೈಲಾನ್ ದಾರದಲ್ಲಿ ಮುತ್ತುಗಳನ್ನು ಪೋಣಿಸುವುದು ಒಳ್ಳೆಯದು. ಚಿನ್ನದ ಅಥವಾ ಇತರ ತಂತಿಗಳಲ್ಲಿ ಪೋಣಿಸಿದರೆ ತಂತಿಯ ಕಾಠಿಣ್ಯದಿಂದ ಮುತ್ತುಗಳು ಹಾಳಾಗಬಹುದು. ಸಾಗರದಾಳದ ಈ ಸಂಪತ್ತನ್ನು ಸರಿಯಾಗಿ ಬಳಸಿ ಕಾಪಾಡಿದ್ದೇ ಆದಲ್ಲಿ ಅದು ನಿಮ್ಮ ವ್ಯಕ್ತಿತ್ವವನ್ನು ತಮ್ಮ ಹೊಳಪು ಮತ್ತು ಮೆರುಗಿನಿಂದ ನಿಮ್ಮ ಜೀವನವನ್ನು ಸಹಾ ಬೆಳಗುತ್ತವೆ.

---

ಎಷ್ಟೇ ಕೋಪ ಬಂದರೂ ಕಠಿಣವಾಗಿ ಎಂದೂ ಮಾತನಾಡಬಾರದು

ದಯೆಯಿಂದ ಕೋಪವನ್ನು, ಒಳ್ಳೆಯದರಿಂದ ಕೆಟ್ಟದ್ದನ್ನು,
ಔದಾರ್ಯದಿಂದ ಕೃಪಣತೆಯನ್ನು, ಸತ್ಯ ನಿಷ್ಠೆಯಿಂದ ಸುಳ್ಳನ್ನು
ಗೆಲ್ಲಬೇಕು.

—ಬುದ್ಧ

# ಕಾಲಮಾನ ಶಾಸ್ತ್ರ

**ಎಂ. ಎಸ್. ಚಂದ್ರಶೇಖರ ಅಯ್ಯರ್**
೪೫೩೫/೧, 'ಲಕ್ಷ್ಮಣನಿಲಯ'
ಶಿವಾಜಿ ರಸ್ತೆ, ಎನ್.ಆರ್. ಮೊಹಲ್ಲ
ಮೈಸೂರು–೫೭೦ ೦೦೭

ಕಾಲ ಅಳೆಯಲು ಮತ್ತು ಕಾಲಗಮನ ಪರಿಜ್ಞಾನ ಪಡೆಯಲು ಕನಿಷ್ಠ ಎರಡು ಘಟನೆಗಳು ಬೇಕು: ಇವೆರಡರ ನಡುವಿನ ಅವಧಿಯೇ ಕಾಲ. ಸೂರ್ಯ, ಚಂದ್ರ, ನಕ್ಷತ್ರಗಳು ಮಾನವನಿಗೆ ಜ್ಞಾನವನ್ನು ಒದಗಿಸಿರುವ ನೈಸರ್ಗಿಕ ಕಾಲಮಾಪಕಗಳು.

ನಾಗರಿಕತೆ ಬೆಳೆದಿರುವ ಈ ಕಾಲದಲ್ಲಿ ವಿದ್ಯಾವಂತರಿಗೆ ನಕ್ಷತ್ರಗಳ ಹೆಸರೇ ತಿಳಿದಿರುವುದಿಲ್ಲ. ಹಿಂದೆ ನಮ್ಮ ಪೂರ್ವಿಕರು ನಕ್ಷತ್ರದ ಚಲನವಲನೆಗಳಿಂದ ಕಾಲ ಅಳೆಯುತ್ತಿದ್ದರು. ಈಗಲೂ ಹಳ್ಳಿಗಳಲ್ಲಿ ಅನೇಕ ರೈತರು ನಕ್ಷತ್ರ ನೋಡಿ ಕಾಲ ಹೇಳುತ್ತಾರೆ. ಅದು ಅವರಿಗೆ ಅವಶ್ಯವಾದದ್ದು.

ಹಿಂದೆ ಕಾಡು ಮನುಷ್ಯರು ಸೂರ್ಯೋದಯಕ್ಕೆ ಮುಂಚೆ ಏಳುತ್ತಿದ್ದರು. ಕತ್ತಲಾದ ಕ್ಷಣ ನಿದ್ರಿಸುತ್ತಿದ್ದರು. ಬೆಳಗ್ಗೆ ಕಂಡುಬರುವ ನಕ್ಷತ್ರಗಳನ್ನು ನೆನಪಿನಲ್ಲಿಟ್ಟುಕೊಂಡು ಕಂತುತ್ತಿರುವ ಚುಕ್ಕಿಗಳನ್ನು ಪರಿಶೀಲಿಸುತ್ತಿದ್ದರು. ಪ್ರತಿದಿನವೂ ಅವೇ ನಕ್ಷತ್ರಗಳು ಕಂಡುಬರುವುದಿಲ್ಲ. ಅವು ಬದಲಾಗುತ್ತಿರುತ್ತವೆ. ಆ ಸಮಯಗಳಲ್ಲಿ ಭೂಮಿಯ ಮೇಲೆ ನಡೆಯುವ ಘಟನೆಗಳಿಗೂ ನಕ್ಷತ್ರಗಳಿಗೂ ಸಂಬಂಧವನ್ನು ಕಲ್ಪಿಸುತ್ತಿದ್ದರು. ಸ್ವಾತಿ ಅಭಿಜಿತ್ ನಕ್ಷತ್ರಗಳು ಆಗಸ್ಟ್ ಸೆಪ್ಟಂಬರ್ ತಿಂಗಳುಗಳಲ್ಲಿ ಕಂಡುಬರುತ್ತವೆ. ಸರಿಯಾಗಿ ಅದೇ ಸಮಯದಲ್ಲಿ ದಕ್ಷಿಣ ವಿಕ್ಟೋರಿಯಾದ ಕಾಡುಗಳಲ್ಲಿ ಮರಗಳ ಪೊಟರೆಗಳಲ್ಲಿ ದೊಡ್ಡ ದೊಡ್ಡ ಕೊಂಕಿ ಹುಳುಗಳ ಮರಿಗಳು ಇರುತ್ತವೆ. ಅಲ್ಲಿಯ ಕಾಡುಕೋಳಿಗಳು ಪೊದೆಗಳಲ್ಲಿ ಮೊಟ್ಟೆಯಿಡುತ್ತವೆ. ಆ ನಕ್ಷತ್ರವನ್ನು ಕಂಡ ಕೂಡಲೆ ಅವರು ಗುಂಪು ಗುಂಪಾಗಿ ಅವನ್ನು ತರಲು ಹೊರಡುತ್ತಿದ್ದರು.

ಕೃತ್ತಿಕ ಉದಯವಾದರೆ ಕಾಯ ಎನ್ನುವ ಒಂದು ಜಾತಿಯ ಕಾಯಿಗಳು ಪಕ್ವವಾಗುತ್ತವೆಂದು ಆದಿಮಾನವರಿಗೆ ಗೊತ್ತಿತ್ತು. ಸೂರ್ಯಾಸ್ತಮಾನದವೇಳೆ ಕೃತ್ತಿಗೆ ಉದಯವಾದರೆ ವಸಂತಕಾಲ ಬರುವುದೆಂದು ಆಸ್ಟ್ರೇಲಿಯಾದ ಆದಿಮಾನವರು ತಿಳಿದುಕೊಂಡು ಸಂಭ್ರಮಪಡುತ್ತಿದ್ದರು. ಮೃಗಶಿರ ನಕ್ಷತ್ರ ಕಾಣದಿದ್ದರೆ ಜಾಮಾದ್ವೀಪವಾಸಿಗಳು ವ್ಯವಸಾಯ ಕೆಲಸಗಳನ್ನು ನಿಲ್ಲಿಸುತ್ತಿದ್ದರು.

ನಮ್ಮ ದೇಶದಲ್ಲಿ ರೋಹಿಣಿ ನಕ್ಷತ್ರ ಕಾಲದಲ್ಲಿ ಸಿಡಿಲು ಬಡಿಯುವುದೆಂದು ಮೃಗಶಿರಾ ಬಂದಾಗ ಮಳೆಬರುತ್ತದೆಂದು ಸ್ವಾತಿಮಳೆಗೆ

ಮುತ್ತು ತಯಾರಾಗುತ್ತದೆಂದು ಚಿತ್ತಾ ನಕ್ಷತ್ರ ಬಂದಾಗ ನಾಯಿಗಳು ಸೇರುತ್ತ ವೆಂದು ಇಲ್ಲಿಯ ಜನರು ನಂಬಿದ್ದರು.

ಈ ರೀತಿ ಖಗೋಳವನ್ನು ಸೂಕ್ಷ್ಮವಾಗಿ ಗಮನಿಸಿ ಪ್ರಕೃತಿಯ ಬದಲಾವಣೆಗಳಿಗೆ ಹಲವು ನಕ್ಷತ್ರಗಳು ಕಾಣಿಸಿಕೊಳ್ಳುವುದು ಕಾಣಿಸಿಕೊಳ್ಳದೆ ಇರುವುದು ಕಾರಣವೆಂದು ಆದಿಮಾನವರು ನಂಬಿದ್ದರು. ತಮಗೆ ಪ್ರಿಯ ವಾದ ಬದಲಾವಣೆಗಳನ್ನು ತಂದ ನಕ್ಷತ್ರ ಗಳನ್ನು ದೇವರೆಂದು ಪರಿಗಣಿಸುತ್ತಿದ್ದರು. ಕಾಟ ಕೊಡುವ ಖಾಯಿಲೆಗಳನ್ನು ತರುವ ನಕ್ಷತ್ರಗಳಿಗೆ ಅವರು ಹೆದರಿದ್ದರು.

ನಾಗರಿಕತೆ ಸ್ವಲ್ಪ ಮುಂದುವರೆದಂತೆ ಯಾವ ಕಾಲದಲ್ಲಿ ಬೀಜ ಬಿತ್ತಿದರೆ ಒಳ್ಳೆಯ ಬೆಳೆ ಬೆಳೆಯಬಹುದು. ಯಾವ ಸಮಯ ದಲ್ಲಿ ಕುಯಿಲಾಗಬೇಕೆಂಬುದನ್ನು ತಿಳಿಯು ವುದು ರೈತರಿಗೆ ಬಹಳ ಅವಶ್ಯ. ತಮಗೆ ಬೇಕಾದ ಕಾಲ ಯಾವಾಗ ಬರುತ್ತದೆ ಎಂದು ಮೊದಲೆ ತಿಳಿದಿದ್ದರೆ ಅದಕ್ಕೆ ಬೇಕಾದ ಮುನ್ನೆಚ್ಚರಿಕೆಯನ್ನು ತೆಗೆದುಕೊಂಡರೆ ಒಳ್ಳೆಯದಲ್ಲವೆ.

ಇದರಿಂದ ಋತುಚಕ್ರಜ್ಞಾನ ಮನುಷ್ಯನ ಸುಖಜೀವನಕ್ಕೆ ಬಹಳ ಮುಖ್ಯವಾದದ್ದಾ ಗಿತ್ತು. ಯಾವ ಋತುವಿನನಂತರ ಬರುತ್ತದೆ. ಯಾವ ಋತು ಎಷ್ಟುಕಾಲ ಇರುತ್ತದೆ ಎಂಬುದನ್ನು ತಿಳಿಯಲು ಅವರು ಆಸಕ್ತಿ ವಹಿಸಿದರು.

ಮಾನವನ ಜೀವನದಲ್ಲಿ ಅತಿಮುಖ್ಯವಾದ ಪ್ರಕೃತಿ ರಹಸ್ಯವೆಂದರೆ ಋತುಚಕ್ರ. ನಮ್ಮ ದೇಶದಲ್ಲಿ ಆರು ಋತುಗಳಿವೆ. ವಸಂತ, ಗ್ರೀಷ್ಮ, ಶರತ್, ವರ್ಷ, ಹೇಮಂತ ಮತ್ತು ಶಿಶಿರ. ಶೀತದೇಶಗಳಲ್ಲಿ ವಸಂತಕಾಲ, ಬೇಸಿಗೆಕಾಲ, ಮಾಗಿಕಾಲ, ಚಳಿಗಾಲ ಎಂದು ೪ ಋತುಗಳಿವೆ. ಎಸ್ಕಿಮೋಗಳಿಗೆ ಬಿಸಿಲುಕಾಲ ಚಳಿಗಾಲ ಎಂದು ಎರಡೇ ಋತುಗಳು. ಒಂದು ಋತುಚಕ್ರ ಪೂರ್ತಿ ಯಾಗುವ ಕಾಲವನ್ನು ಒಂದು ವರ್ಷ ವೆಂದರು.

ಒಂದು ಇರುಳು, ಒಂದು ಹಗಲು ಸೇರಿ ಒಂದು ದಿನ. ಇದೇ ಎಲ್ಲದಕ್ಕೂ ಮೊದಲು ಕಂಡು ಹಿಡಿದ ಕಾಲವಿಭಜನೆ. ಅನಂತರ ತಿಂಗಳು ಅನಂತರ ವರ್ಷ ಎನ್ನುವ ಕಾಲ ವಿಭಜನೆ ಆಗಿ ಕ್ರಮೇಣ ೩೦ ದಿನಗಳಿಗೆ ೧ ತಿಂಗಳು. ಇಂತಹ ೧೨ ತಿಂಗಳು ಸೇರಿದರೆ ೧ ವರ್ಷ (೧ ಋತುಚಕ್ರ) ಅನ್ನುವುದನ್ನು ತಿಳಿದುಕೊಂಡರು. ಆ ಕಾಲಕ್ಕೆ ಇದು ಅತಿಮುಖ್ಯ ಸಂಶೋಧನೆ ಆಗಿತ್ತು. ವರ್ಷಕ್ಕೆ ೧೨ ತಿಂಗಳೆಂದು ೧ ತಿಂಗಳಿಗೆ ೩೦ ದಿನ ಗಳೆಂದು ಆದಿಮಾನವ ಏಳೆಂಟುಸಾವಿರ ವರ್ಷಗಳ ಹಿಂದೆಯೇ ಕಂಡುಹಿಡಿದಿದ್ದ. ಈಗಲೂ ನಾವು ಅದನ್ನೇ ಅನುಸರಿಸು ತ್ತಿದ್ದೇವೆ.

ಆಗಿನಿಂದ ೧೨ ಅನ್ನುವ ಸಂಖ್ಯೆಗೆ ಪ್ರಾಮುಖ್ಯಬಂದಿದೆ. ಹಣ್ಣುಗಳನ್ನು ಡಜ಼ ಲೆಕ್ಕದಲ್ಲಿ ಕೊಳ್ಳುತ್ತೇವೆಯೇ ಹೊರತು ಹತ್ತರ ಲೆಕ್ಕದಲ್ಲಿ ಅಲ್ಲ ಅಲ್ಲವೆ. ೧ ಅಡಿಗೆ ೧೨ ಅಂಗುಲ ೧ ಪೌಂಡಿಗೆ ೧೨ ಷಿಲಿಂಗ್ ಗಳು. ೧೨ ಡಜ಼ನಿಗೆ ೧ ಗ್ರೋಸ್ ದ್ವಾದಶಾದಿತ್ಯರೂ ಮುಂತಾಗಿ ಎಲ್ಲವನ್ನೂ ದ್ವಾದಶದಲ್ಲಿ ಹೇಳುವ ಅಭ್ಯಾಸ ಶುರು ವಾಯಿತು.

ಋತುಗಳಿಗೆ ಕಾರಣ ಚಂದ್ರನಲ್ಲ, ಸೂರ್ಯ. ಈ ಋತುಚಕ್ರ ೩೬೫ ದಿನಗಳಿ ಗೊಮ್ಮೆ ಪುನರಾವರ್ತನೆಯಾಗುತ್ತಿರುತ್ತದೆ.

ಯಾವ ಋತು ಯಾವಾಗ ಬರುತ್ತದೆ ಎಷ್ಟು ಕಾಲ ಇರುತ್ತದೆ ಎಂಬುದನ್ನು ಸೂರ್ಯೋದಯ ಸ್ಥಾನದಿಂದ ಖಚಿತವಾಗಿ ನಿರ್ಣಯಿಸಬಹುದು.

ಸಂವತ್ಸರದಲ್ಲಿ ೩೬೫ ದಿನಗಳಿದ್ದುದನ್ನು ಮೂನ್ನೂರಅರವತ್ತೈದುಕಾಲು ದಿನಕ್ಕೆ ಮಾರ್ಪಟ್ಟಿತು. ಕ್ರಿ.ಪೂ. ೨ನೆಯ ಶತಮಾನದಲ್ಲಿ ಹಿಪ್ಪಾರ್ಕಸ್ ಎಂಬ ಗ್ರೀಕ್ ವಿದ್ವಾಂಸ ಸಂವತ್ಸರದ ಅವಧಿ ೩೬೫. ೨೪೬೭ ದಿನಗಳೆಂದು ನಿರ್ಣಯಿಸಿದನು.

ಕ್ರಿ.ಶ. ೧೧೫೦ರಲ್ಲಿ ಭಾಸ್ಕರಾಚಾರ್ಯರು ತನ್ನ ಸಿದ್ಧಾಂತ ಶಿರೋಮಣಿ ಎನ್ನುವ ಪ್ರಸಿದ್ಧ ಗ್ರಂಥದಲ್ಲಿ ಸಂವತ್ಸರದ ಅವಧಿ ೩೬೫ ದಿನಗಳು. ೧೫ ಘಳಿಗೆಗಳು ೩೦ ವಿಘಳಿಗೆಗಳು ೨೨ ಪರಘಳಿಗೆಗಳು ೩೦ ಸೂಕ್ಷ್ಮಘಳಿಗೆಗಳೆಂದು ಬರೆದಿದ್ದಾರೆ.

ಹಿಂದೆ ನಮ್ಮದೇ ಆದ ಭಾರತೀಯ ಕಾಲಮಾನ ಪದ್ಧತಿ ಬಳಕೆಯಲ್ಲಿತ್ತು.

| | |
|---|---|
| ೧ ದಿನ | =೬೦ ಘಳಿಗೆಗಳು (೨೪ ಗಂಟೆಗಳು) |
| ೧ ಘಳಿಗೆ | =೬೦ ವಿಘಳಿಗೆಗಳು (೨೪ ನಿಮಿಷಗಳು) |
| ೧ ವಿಘಳಿಗೆ | =೬೦ ಪರಘಳಿಗೆಗಳು (೨೪ ಸೆಕೆಂಡುಗಳು) |
| ೧ ಪರಘಳಿಗೆ | =೬೦ ಸೂಕ್ಷ್ಮಘಳಿಗೆಗಳು (೦.೪ ಸೆಕೆಂಡುಗಳು) |
| ೧ ಸೂಕ್ಷ್ಮಘಳಿಗೆ | = ೦.೦೦೬೭ ಸೆಕೆಂಡ್ |

ಕಾಲದಲ್ಲಿ ಅತಿಸೂಕ್ಷ್ಮವಾದ ಕಾಲವೆಂದರೆ ಸೆಕೆಂಡ್. ಈಗ ಆ ಸೆಕೆಂಡನ್ನು ಸಹಿತ ವಿಭಜನೆ ಮಾಡಬಹುದು.

೧ ಸೆಕೆಂಡ್—೧,೦೦೦,೦೦೦ ಮೈಕ್ರೋಸೆಕೆಂಡ್ಸ್

೧ ಮೈಕ್ರೋಸೆಕೆಂಡ್—೧,೦೦೦ ನ್ಯಾನೊ ಸೆಕೆಂಡ್

೧ ನ್ಯಾನೊ ಸೆಕೆಂಡ್—೧,೦೦೦ ಪೈಕೊ ಸೆಕೆಂಡ್

೧ ಸೆಕೆಂಡ್—೧,೦೦೦,೦೦೦,೦೦೦,೦೦೦ ೧೦೦ ಲಕ್ಷ ಲಕ್ಷ ಪೈಕೊ ಸೆಕೆಂಡ್

ಭೂಮಿಯ ವಯಸ್ಸು ಸುಮಾರು ೪೬೦ ಕೋಟಿ ವರ್ಷಗಳು.

ಬೆಳಕಿನ ವೇಗ ೧ ಸೆಕೆಂಡಿಗೆ ೩ ಲಕ್ಷ ಕಿಲೋಮೀಟರುಗಳು.

ಆಗಿನ ಕಾಲದಲ್ಲಿಯೇ ೧ ಸೆಕೆಂಡಿಗಿಂತ ಹೆಚ್ಚಿನ ವ್ಯತ್ಯಾಸವಿಲ್ಲದೆ ಕಾಲದ ಅವಧಿಯನ್ನು ಕಂಡುಹಿಡಿದಿದ್ದು ಬಹಳ ಆಶ್ಚರ್ಯಕರವಾದ ಸಂಗತಿ ಅಲ್ಲವೆ.

ಖಗೋಳದ ಮೇಲೆ ಯಾವ ನಕ್ಷತ್ರ ಎಲ್ಲಿದೆ, ೨ ನಕ್ಷತ್ರಗಳ ಮಧ್ಯೆ ಎಷ್ಟು ಡಿಗ್ರಿ ಕೋನವಿದೆ ಎಂದು ತಿಳಿಯುವುದು ಅತ್ಯಾವಶ್ಯಕ. ಅದನ್ನು ತಿಳಿದುಕೊಂಡರೆ ಸೂರ್ಯ, ಚಂದ್ರ, ಗ್ರಹಗಳು ಯಾವ ಸಮಯದಲ್ಲಿ ಖಗೋಳದ ಮೇಲೆ ಎಲ್ಲಿರುತ್ತವೆ ಎಂದು ನಿರ್ಣಯಿಸಬಹುದು. ಇದಕ್ಕಾಗಿ ಆಸ್ಟ್ರೋಲ್ಯಾಬ್ ಎನ್ನುವ ಉಪಕರಣವನ್ನು ಕ್ರಿ.ಪೂ. ೨ನೆಯ ಶತಮಾನದಲ್ಲಿ ಕಂಡುಹಿಡಿದರು. ಈ ರೀತಿಯ ಸಲಕರಣೆಗಳನ್ನು ಬಳಸಿ ನಮ್ಮ ಪೂರ್ವಿಕರು ಸಂಗ್ರಹಿಸಿದ್ದ ಖಗೋಳಶಾಸ್ತ್ರ ಮಾಹಿತಿಗಳು ನಿಜಕ್ಕೂ ಅಚ್ಚರಿ ತರುವಂತಹುವು.

### ಶಕೆಗಳು

ಭಾರತದಲ್ಲಿ ಒಂದೇ ಕಾಲದಲ್ಲಿ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಶಖೆಗಳು

ರೂಢಿಯಲ್ಲಿವೆ. "ವಿಕ್ರಮಶಕೆ" ಉತ್ತರ ಭಾರತದಲ್ಲೆಲ್ಲಾ ಬಳಕೆಯಲ್ಲಿದೆ. ಇದು ಕ್ರಿ.ಪೂ. ೫೭ ರಲ್ಲಿ ಆರಂಭವಾಯಿತು. ದಕ್ಷಿಣ ಭಾರತದಲ್ಲಿ "ಶಾಲಿವಾಹನಶಕೆ" ಬಳಕೆಯಲ್ಲಿದೆ. ಇದು ಕ್ರಿ.ಶ. ೭೮ ರಲ್ಲಿ ಆರಂಭ ಆಯಿತು.

ಬಂಗಾಳದಲ್ಲಿ 'ಮಾಘೀಶಕೆ' ರೂಢಿಯಲ್ಲಿದೆ. ಕ್ರಿ.ಶ. ೬೩೮ ರಲ್ಲಿ ಮಾಘ ಎಂಬ ಜನರ ಚಿಟಗಾಂಗ್ (ಈಗ ಬಾಂಗ್ಲಾ ದೇಶದಲ್ಲಿದೆ) ಪ್ರದೇಶವನ್ನು ಆಕ್ರಮಿಸಿಕೊಂಡಾಗಿನಿಂದ ಆರಂಭವಾದ ಶಕೆ ಇದು. ಇವಲ್ಲದೆ ಹಿಂದೂ ಖಗೋಳ ಗ್ರಂಥಗಳಲ್ಲಿ ಕಲಿಯುಗ ಶಕೆಯನ್ನು ಬಳಸಲಾಗಿದೆ.

## ಚಾಂದ್ರಮಾನ ಮತ್ತು ಸೌರಮಾನ ಪಂಚಾಂಗ

ಚಾಂದ್ರಮಾನ = ೨೯, ೫ ದಿನಗಳ ೧೨ ಚಾಂದ್ರಮಾಸಗಳು ಸೇರಿ ಒಂದು ಚಾಂದ್ರ ಸಂವತ್ಸರವಾಗಿದೆ. ಇದನ್ನು ಸೂರ್ಯನ ಚಲನೆಯೊಂದಿಗೆ ಹೊಂದಿಸುವ ಸಲುವಾಗಿ ಬ್ಯಾಬಿಲೋನಿಯನ್ನರು ಮತ್ತು ಗ್ರೀಕರು ೧೯ ವರ್ಷಗಳಲ್ಲಿ ೭ ಅಧಿಕಮಾಸಗಳು ಬರುತ್ತವೆ. ಚಾಂದ್ರಮಾನದಲ್ಲಿ ಅಮಾವಾಸ್ಯೆ ಆಗಿ ಪಾಡ್ಯದಿಂದ ತಿಂಗಳು ಪ್ರಾರಂಭವಾಗುತ್ತದೆ. ಸೌರಮಾನ = ಸಂವತ್ಸರವನ್ನು ೧೨ ಸಮಭಾಗಗಳಾಗಿ ಮಾಡಿ ಒಂದೊಂದು ಭಾಗಕ್ಕೆ ೩೦.೪೩೭ ದಿನಗಳು (ಸಂವತ್ಸರದ ಅವಧಿ ೩೬೫.೨೫ ದಿನಗಳೆಂದರ್ಥ)

ಚಾಂದ್ರಮಾಸಕ್ಕಿಂತ ಸೌರಮಾಸ ದೀರ್ಘಾವಧಿಯಾದ ಕಾರಣ ಒಂದೇ ಚಾಂದ್ರಮಾಸ ಅವಧಿಯಲ್ಲಿ ಸೂರ್ಯ ಎರಡು ರಾಶಿಗಳಲ್ಲಿ ಪ್ರವೇಶಿಸುವುದು ಸಾಧ್ಯವಿಲ್ಲ. ಒಮ್ಮೊಮ್ಮೆ ಒಂದು ಚಾಂದ್ರಮಾಸದ ಅವಧಿಯಲ್ಲಿ ಸೂರ್ಯ ಹೊಸ ರಾಶಿಯಲ್ಲಿ ಪ್ರವೇಶಿಸದೆಯೆ ಹೋಗಬಹುದು. ಆಗ ಅಧಿಕಮಾಸ ಎನ್ನುತ್ತಾರೆ. ಅದಕ್ಕೆ ಅದರ ಮುಂದಿನ ಮಾಸದ ಹೆಸರನ್ನೇ ಇಡುತ್ತಾರೆ.

## ದಿನಾಂಕಸೂಚಿ

ಕ್ಯಾಲೆಂಡರ್ ಎನ್ನುವ ಪದವನ್ನು ಮೊದಲು ಉಪಯೋಗಿಸಿದವರು ರೋಮನರು. ಪ್ರಪಂಚದ ಎಲ್ಲಾ ದೇಶಗಳಲ್ಲೂ ಈಗ ಉಪಯೋಗಿಸುತ್ತಿರುವ ಗ್ರಿಗೋರಿಯನ್ ಕ್ಯಾಲೆಂಡರಿಗೆ ಈ ಜೂಲಿಯನ್ ಕ್ಯಾಲೆಂಡರ್ ಸಾಕ್ಷಾತ್ ತಾಯಿಯಂತಿದೆ. ಹಿಂದೆ ಸಂವತ್ಸರದ ಮೊದಲ ತಿಂಗಳು ಈಗಿನಂತೆ ಜನವರಿಯಾಗಿರದೆ ಮಾರ್ಚ್ ಆಗಿತ್ತು. ಲ್ಯಾಟಿನ್ ಭಾಷೆಯಲ್ಲಿ ಕ್ವಿಂಟಲಿಸ್ ಅಂದರೆ ೫ ನೆಯದೆಂದು ಸೆಕ್ಸ್ಟಲಿಸ್ ಎಂದರೆ ೬ ನೆಯದೆಂದು ಸೆಪ್ಟೆಂಬರ್ ಅಂದರೆ ೭ನೆಯದೆಂದು ಅಕ್ಟೋಬರ್ ಅಂದರೆ ೮ ನೆಯದೆಂದು ನವೆಂಬರ್ ಅಂದರೆ ೯ ನೆಯದೆಂದು, ಡಿಸೆಂಬರ್ ಅಂದರೆ ೧೦ ನೆಯದೆಂದರ್ಥ. ಈ ಅರ್ಥಗಳು ಹಳೆಯ ರೋಮ್ನ ಕ್ಯಾಲೆಂಡರಿನ ತಿಂಗಳುಗಳ ಹೆಸರಿಗೆ ಸರಿಹೋಗುತ್ತೆ. ಆದರೆ ಈಗ ನಾವು ಉಪಯೋಗಿಸುತ್ತಿರುವ ಕ್ಯಾಲೆಂಡರಿಗೆ ಈ ಅರ್ಥಗಳು ಏನೇನೂ ಹೊಂದಿಕೊಳ್ಳುವುದಿಲ್ಲ.

ಈಗ ಅವೆಲ್ಲವೂ ಸಪ್ಪೆಯಾದ ಶಬ್ದಗಳು. ಈ ಮಧ್ಯೆ ಯಾವಾಗಲೂ ೧೧, ೧೨ ನೆಯ ಸ್ಥಾನದಲ್ಲಿದ್ದ ಜನವರಿ, ಫೆಬ್ರವರಿ ತಿಂಗಳುಗಳು ಹಾರಿಕೊಂಡು ೧, ೨ ಸ್ಥಾನದಲ್ಲಿ ಕುಳಿತಿದೆ.

## ಜ್ಯೂಲಿಯನ್ ದಿನಾಂಕ ಸೂಚಿಯಲ್ಲಿ ತಿಂಗಳುಗಳ ಹೆಸರುಗಳು ಹೇಗೆ ಬಂದಿತೆಂದರೆ

೧. ಜನವರಿ=ಲ್ಯಾಟಿನ್ ಭಾಷೆಯಲ್ಲಿ ಇದನ್ನು ಜಾನ್ಯುವಾರಿಯಸ್ ಎಂದು ಕರೆಯುತ್ತಾರೆ. ಎರಡು ಕಲೆಗಳು ದೇವತೆಯೊಂದರ ಹೆಸರು ಜಾನುಸ್. ಆದ್ದರಿಂದ ಈ ತಿಂಗಳಿಗೆ ಆ ಹೆಸರು ಬಂತು. ಈ ದೇವತೆ ತನ್ನ ಎರಡು ಮುಖಗಳಲ್ಲಿ ಒಂದರಿಂದ ಕಳೆದುಹೋದ ವರ್ಷವನ್ನು ಇನ್ನೊಂದು ಮುಖದಿಂದ ಮುಂಬರುವ ವರ್ಷವನ್ನು ನೋಡುತ್ತಿರುತ್ತಾಳಂತೆ.

೨. ಫೆಬ್ರವರಿ=ಫೆಬ್ರುವಾ ಎಂಬ ರೋಮನ್ ಮತ ಸಂಬಂಧವಾದ ಒಂದು ಪರ್ವದಿನ. ಆದ್ದರಿಂದ ಈ ತಿಂಗಳಿಗೆ ಈ ಹೆಸರು ಬಂತು.

೩. ಮಾರ್ಚ್=ಮಾರ್ಚ್ ಎಂದರೆ ಕುಜಗ್ರಹ. ಈ ಗ್ರಹದ ಹೆಸರು ಈ ತಿಂಗಳಿಗೆ ಬಂತು. ಇದು ಯಾವ್ವನಾದಿ ದೇವತೆ ಮತ್ತು ವಸಂತಕಾಲ. ಪ್ರಕೃತಿಗೆ ಇದು ಯಾವ್ವನೋದಯವನ್ನು ಉಂಟು ಮಾಡುವ ಕಾಲ.

೪. ಏಪ್ರಿಲ್=ಎಪೇರಿಯೋ ಎಂಬ ಲ್ಯಾಟಿನ್ ಪದಕ್ಕೆ ಅರಳುವುದು ಎಂಬ ಅರ್ಥ. ಹೂವುಗಳು ಈ ತಿಂಗಳಲ್ಲಿ ಅರಳುವುದರಿಂದ ಈ ತಿಂಗಳಿಗೆ ಈ ಹೆಸರು ಬಂತು.

೫. ಮೇ=ಕೃತಿಕಾ ನಕ್ಷತ್ರ ಸಮುದಾಯದಲ್ಲಿ ಬಹು ಪ್ರಕಾಶಮಯವಾದ ನಕ್ಷತ್ರವನ್ನು ರೋಮನರು ಮೇಯ್ಯ ಎಂದು ಕರೆಯುತ್ತಿದ್ದರು. ಈ ನಕ್ಷತ್ರ ಸೂರ್ಯನೊಂದಿಗೆ ಈ ತಿಂಗಳು ಉದಯಿಸುತ್ತಿದ್ದರಿಂದ ಈ ತಿಂಗಳನ್ನು ಮಾಯಿಯಸ್ ಅಥವಾ ಮೇ ಎಂದು ಕರೆದರು.

೬. ಜೂನ್=ರೋಮನ್ ರಾಜವಂಶದಲ್ಲಿ ಜೂನಿಯಸ್ ಎಂಬ ಒಬ್ಬ ರಾಜನ ಹೆಸರು ಬರುತ್ತದೆ. ಅವನ ಹೆಸರಿನಲ್ಲಿ ಈ ತಿಂಗಳಿಗೆ ಈ ಹೆಸರು ಬಂದಿರಬಹುದೆಂದು ಹೇಳುತ್ತಾರೆ.

೭. ಜುಲೈ=ಜೂಲಿಯಸ್ ಸೀಸರನ ಹೆಸರಿನಲ್ಲಿ ಈ ತಿಂಗಳಿಗೆ ಈ ಹೆಸರು ಬಂತು.

೮. ಅಗಸ್ಟ್=ಅಗಸ್ಟಸ್ ಸೀಸರಿನ ಹೆಸರಿನಿಂದ ಈ ತಿಂಗಳಿಗೆ ಈ ಹೆಸರು ಬಂತು.

೯. ಸೆಪ್ಟಂಬರ್=೭ನೆಯ ತಿಂಗಳೆಂದರ್ಥ.

೧೦. ಅಕ್ಟೋಬರ್=೮ನೆಯ ತಿಂಗಳೆಂದರ್ಥ.

೧೧. ನವೆಂಬರ್=೯ನೆಯ ತಿಂಗಳೆಂದರ್ಥ

೧೨. ಡಿಸೆಂಬರ್=೧೦ನೆಯ ತಿಂಗಳೆಂದರ್ಥ

ಆಮೇಲೆ ಗ್ರಿಗೋರಿಯನ್ ಕ್ಯಾಲೆಂಡರ್ ಜಾರಿಗೆ ಬಂತು. ಗ್ರಿಗೋರಿಯನ್ ಕ್ಯಾಲೆಂಡರ್ ಜಾರಿಗೆ ಬಂದ ಮೇಲೆ ಜನವರಿ ೧ನೇ ತಾರೀಖಿನಿಂದ ಹೊಸವರ್ಷ ಪ್ರಾರಂಭವಾಯಿತು.

## ಗ್ರೀನ್‌ವಿಚ್ ಮೀನ್ ಟೈಂ

ಕಾಲವನ್ನು ಅಳೆಯಲು ಒಂದು ನಿಗದಿಯಾದ ಸರ್ವಮಾನ್ಯ ಮಾನವನ್ನು ನಿರ್ಧರಿ

ಸಲು ಅನೇಕ ಶತಮಾನಗಳವರೆಗೂ ಆಗಿರಲಿಲ್ಲ. ಜಗತ್ತು ಅಭಿವೃದ್ಧಿಶೀಲ ಮಾರ್ಗದಲ್ಲಿ ತ್ವರೆಯಿಂದ ಮುಂದುವರೆದ ರಾಷ್ಟ್ರ-ರಾಷ್ಟ್ರಗಳ ಸಂಬಂಧಗಳು ನಿಕಟವಾದಂತೆ ಕಾಲದಮಾನದಲ್ಲಿ ಒಂದು ಸರ್ವಮಾನ್ಯವಾದ ಗಣನೆಯ ಆವಶ್ಯಕತೆ ಉಂಟಾಯಿತು.

ಇಂಥ ಒಂದು ಅತ್ಯಾವಶ್ಯಕ ಜರೂರು ಆವಶ್ಯಕತೆಯನ್ನು ಮನಗಂಡ ಅಮೆರಿಕಾ ಸಂಯುಕ್ತ ಸಂಸ್ಥಾನದ ಕಾಂಗ್ರೆಸ್ ೧೮೮೪ ರಲ್ಲಿ ಕಾಲವನ್ನು ಅಳೆಯುವ ಮಾನವನ್ನು ನಿಗದಿಮಾಡುವ ಉದ್ದೇಶದಿಂದ ಪ್ರಪಂಚದ ಎಲ್ಲಾ ಮುಖ್ಯ ರಾಷ್ಟ್ರಗಳಿಗೆ ಆಹ್ವಾನ ನೀಡಿತು. ಆ ವೇಳೆಗೆ ಬ್ರಿಟನ್ ಸುಸಜ್ಜಿತ ಸಮೃದ್ಧ ನೌಕಾಸೇನೆಯಿಂದಾಗಿ ಸಮುದ್ರಯಾನದಲ್ಲಿ ಅಗ್ರಮಾನ್ಯ ಸ್ಥಾನ ಪಡೆದು ನೌಕಾಚಲನ ಮತ್ತು ನಿಯಂತ್ರಣಗಳ ಅಧ್ಯಯನಕ್ಕಾಗಿ ಗ್ರೀನ್‌ವಿಚ್ ಎಂಬ ಹಳ್ಳಿಯಲ್ಲಿ ಒಂದು ದೊಡ್ಡ ಸುಸಜ್ಜಿತ ಖಗೋಳ ವಿಜ್ಞಾನ ಮಂದಿರವನ್ನು ಹೊಂದಿತ್ತು. ಯು.ಎಸ್.ಎ.ಯಲ್ಲಿ ನೆರೆದಿದ್ದ ರಾಷ್ಟ್ರಗಳ ಸಮ್ಮೇಳನದಲ್ಲಿ ಇಂಗ್ಲೆಂಡಿನ ಸಲಹೆಯಂತೆ ಭೂಗೋಳದ ಮೇಲೆ ಉತ್ತರದಿಂದ ದಕ್ಷಿಣಾಭಿಮುಖವಾಗಿ ಗೋಳವನ್ನು ೩೬೦ ಡಿಗ್ರಿ ಎಂದು ವಿಭಜಿಸಿ ಕಲ್ಪನಾ ರೇಖೆಗಳನ್ನು ಎಳೆದರು. ಈ ರೇಖೆಗಳು ಗ್ರೀನ್‌ವಿಚ್ ಖಗೋಳ ವೀಕ್ಷಣಾ ಮಂದಿರದಿಂದ ಪ್ರಾರಂಭವಾಗಿ ಪೂರ್ವ ಪಶ್ಚಿಮಕ್ಕೆ ೧೫ ಡಿಗ್ರಿ ಅಂತರದಲ್ಲಿವೆ. ಗ್ರೀನ್‌ವಿಚ್‌ನ ಮಧ್ಯಾಹ್ನ ೧೨ ಗಂಟೆಯನ್ನು ನಿರ್ದಿಷ್ಟವಾಗಿಟ್ಟುಕೊಂಡು ಅಲ್ಲಿಂದ ಪಶ್ಚಿಮಕ್ಕೆ ಹೋದಂತೆ ಪ್ರತಿ ೧೫ ಡಿಗ್ರಿಗಳಿಗೆ ಒಂದು ಗಂಟೆ ಸಮಯವನ್ನು ಕಳೆದು ಕಡಿಮೆ ಮಾಡಬೇಕೆಂದು ಪೂರ್ವಕ್ಕೆ ಹೋದಂತೆ ಪ್ರತಿ ೧೫ ಡಿಗ್ರಿಗೆ ಒಂದು ಗಂಟೆಯನ್ನು ಕೂಡಿಸಿ ಹೆಚ್ಚು ಮಾಡುತ್ತಾ ಹೋಗಬೇಕೆಂದು ನಿರ್ಧರಿಸಲಾಯಿತು.

ಪೂರ್ವ ಪಶ್ಚಿಮಕ್ಕೆ ಪ್ರತಿ ೨೦ ಡಿಗ್ರಿಗೆ ೧ ವಲಯ ೧ ಗೋಳ ಎಂದು ಭೂಪಟಗಳ ಮೇಲೆ ಲೆಕ್ಕಿಸಿದರು. ಕಾಲವನ್ನು ಲೆಕ್ಕಿಸುವ ಈ ವಿಧಾನವನ್ನು ಎಲ್ಲಾ ರಾಷ್ಟ್ರಗಳು ಒಪ್ಪಿಕೊಂಡವು.

ಹೀಗೆ ಗ್ರೀನ್‌ವಿಚ್‌ನಿಂದ ಪ್ರಾರಂಭಿಸಿ ರೇಖಾಂಶಗಳಿಗೆ ಸಂಬಂಧಿಸಿರುವ ಪೂರ್ವ ಪಶ್ಚಿಮ ವಲಯಗಳು ಸಂಧಿಸುವ ಸ್ಥಳಕ್ಕೆ ಅಂತರರಾಷ್ಟ್ರೀಯ ದಿನಾಂಕ ರೇಖೆ ಎಂದು ಹೆಸರಿಸಿದರು.

ಗ್ರೀನ್‌ವಿಚ್‌ನಿಂದ ಪ್ರಾರಂಭಿಸಿ ಪಶ್ಚಿಮಾಭಿಮುಖವಾಗಿ ಪ್ರಯಾಣಿಸುವವರು ಈ ರೇಖಾಂಶಕ್ಕೆ ಬಂದಾಗ ತಮ್ಮ ಗಡಿಯಾರದಲ್ಲಿ ೨೪ ಗಂಟೆಗಳಷ್ಟು ಹಿಂದೆ ತಿರುಗಿಸಿ ಒಂದು ದಿನವನ್ನು ಹಿಂದೆ ಹಾಕಬೇಕು. ಅದೇ ಪೂರ್ವಾಭಿಮುಖವಾಗಿ ಪ್ರಯಾಣ ಮಾಡುವವರು ತಮ್ಮ ಗಡಿಯಾರವನ್ನು ೨೪ ತಾಸುಗಳನ್ನು ಮುಂದೂಡಿ ಒಂದು ದಿನವನ್ನು ಹೆಚ್ಚಿಸಬೇಕು.

೧೮೮೪ ರಲ್ಲಿ ಇಡೀ ಜಗತ್ತಿನ ಕಾಲದ ಗಣನೆಯ ಒಂದು ಅಧಿಕೃತ ನಿರ್ದಿಷ್ಟಮಾನವು ಜಾರಿಗೆ ಬಂದಿತು.

ಇದನ್ನೇ "ಗ್ರೀನ್‌ವಿಚ್ ಮೀನ್ ಟೈಂ" ಎಂದು ಕರೆಯುತ್ತಾರೆ.

# ಪುಸ್ತಕ ಪರಿಚಯ

**ದಲಿತ ಚಳುವಳಿ (ಒಂದು ಅವಲೋಕನ) ಸಂ. ಡಾ|| ವಿ. ಮುನಿವೆಂಕಟಪ್ಪ**
**ಕ್ಯಾಲಿಕೊ : ೧೨೯–೦೦, ಸಾಧಾರಣ : ೮೦–೦೦, ಪುಟ ೨೩೮**
**ವಿಚಾರವಾದಿ ಪ್ರಕಾಶನ, ಕುವೆಂಪುನಗರ, ಮೈಸೂರು–೫೭೦ ೦೨೩**

ಈ ಪುಸ್ತಕವನ್ನು ಮುಖ್ಯವಾಗಿ ಮೂರು ವಿಭಾಗಗಳಾಗಿ ವಿಭಾಗಿಸಬಹುದು. ಒಂದು, ಅಂಬೇಡ್ಕರ್ ಮತ್ತು ಜಗಜೀವನರಾಂ ಅವರನ್ನು ಹೊರತುಪಡಿಸಿ ಬಸವಲಿಂಗಪ್ಪನಿಂದ ತಿಮ್ಮರಾಯಪ್ಪನವರೆಗೆ ದಲಿತ ಚಳುವಳಿಗಳಲ್ಲಿ ತೊಡಗಿಕೊಂಡವರ ವ್ಯಕ್ತಿ ಚಿತ್ರಣಗಳು. ಎರಡು, ಕರ್ನಾಟಕ ಕಂಡ ಕಾಲು ಶತಮಾನದ ದಲಿತ ಚಳುವಳಿಯ ಅವಲೋಕನಕ್ಕೆ ಸಂಬಂಧಪಟ್ಟ ಲೇಖನಗಳು. ಮೂರು, ಜನಾದಾರವೇ ಇಲ್ಲದ ಪತ್ರಿಕೆಗಳಿಗೆ ಯಾವುದೊ ಉದ್ದೇಶಗಳಿಟ್ಟುಕೊಂಡು ಬರೆದ ಕೆಲವು ವರದಿಗಳನ್ನು ಈ ಕೃತಿಯಲ್ಲಿ ಉಪಯೋಗಿಸಿಕೊಂಡಿರುವುದು. ಮೇಲಿನ ಮೂರು ವರ್ಗಗಳನ್ನು ಮೀರಿನಿಲ್ಲುವಂಥಹ ಕೆಲವು ವಿಚಾರಧಾರೆ, ವಿಮರ್ಶಾತ್ಮಕ ಲೇಖನಗಳು ಸಹ ಈ ಪುಸ್ತಕದಲ್ಲಿವೆ. ಎಂ. ಗೋಪಿನಾಥ್ ಅವರ ದಲಿತರು ಏನನ್ನು ಪಡೆಯಲು ಹೋರಾಡಬೇಕು ಓ. ಶ್ರೀಧರನ್ ಅವರ ಬಹುಜನ ಸಮಾಜ ಪಕ್ಷ, ಗಂಗಾರಾಂ ಅವರ ಕರ್ನಾಟಕ ದ.ಸಂ.ಸ. ಮತ್ತು ಬಿ. ಆರ್.ಅಂಬೇಡ್ಕರ್ ಶಾಖ್ಯಮುನಿ ಅವರ ದಲಿತ ಚಳುವಳಿ, ರಾಮಕೃಷ್ಣ ಅವರ ಕೋಲಾರ ಜಿಲ್ಲೆಯ ಕೊಡುಗೆ, ಮುನಿವೆಂಕಟಪ್ಪನವರು ತಮ್ಮ ಲೇಖನದಲ್ಲಿ ನೀಡಿರುವ ಕೆಲವು ವಿವರಗಳು ಇತ್ಯಾದಿ.

ಮೈಸೂರು ರಾಜು ಮತ್ತು ಮುಳ್ಳೂರು ನಾಗರಾಜು ಅವರ ಲೇಖನಗಳು ಕೆಲವು ನಿಯತಕಾಲಿಕ ಪತ್ರಿಕೆಗಳಿಗೆ ಬರೆದ ವರದಿಗಳಾಗಿದ್ದು ಯಾವುದೊ ಕಾಲದಲ್ಲಿ, ಯಾವುದೊ ಕಾರಣಕ್ಕಾಗಿ ಬರೆದ ಈ ಲೇಖನಗಳನ್ನು ಇಲ್ಲಿ ಉಪಯೋಗಿಸಿಕೊಳ್ಳುವ ಅವಶ್ಯಕತೆಯಾದರು ಏನಿತ್ತು? ಇಲ್ಲಿ ಬರುವ ಮಹಾದೇವ, ಸಿದ್ದಲಿಂಗಯ್ಯ ಮತ್ತು ಅನ್ನದಾನಿಯ ಸಂಬಂಧಗಳೂ ಅಷ್ಟೇ. ಸಿದ್ದಲಿಂಗಯ್ಯನವರ ಚಮತ್ಕಾರಗಳನ್ನು ಇಂತಹ ಪುಸ್ತಕದಲ್ಲಿ ದಾಖಲಿಸುವುದಕ್ಕಿಂತ ದ. ಸಂ. ಸಮಿತಿಗಾಗಿ ಚಿಂದಿಬಟ್ಟೆ, ಕಿತ್ತೋದ ಚಪ್ಪಲಿಯಲ್ಲಿ ಅನ್ನ, ನೀರಿಲ್ಲದೆ ಕಳಂಕರಹಿತರಾಗಿ ತಮ್ಮ ಆತ್ಮ, ದೇಹಗಳನ್ನು ದಲಿತ ಜನಾಂಗದ ಕಣ್ಣೀರು ಒರೆಸಲು ಮುಡಿಪಾಗಿಟ್ಟ ನಾಲ್ಕು ದಲಿತರ ಬಗ್ಗೆ ದಾಖಲಿಸಬಹುದಾಗಿತ್ತು.

ಬುದ್ದಿ ಜೀವಿಗಳೆಂದು ಹೇಳಿಕೊಳ್ಳುವ ಕೆಲವು ಬುದ್ಧಿವಂತರು ಬರೆಸಿ ಪ್ರಕಟಿಸುವ

ಅಥವಾ ಗಡ್ಡ ತೀಡಿಕೊಂಡು ಬರೆಯುವ ವರದಿಗಳ ಹಿಂದೆ ಹಲವು ಸಿಗೊಢಗಳಿರುತ್ತವೆ ಎನ್ನುವುದು ನಮ್ಮ ದಲಿತರಿಗೆ ಇನ್ನೂ ಅರ್ಥವಾದಂತೆ ಕಾಣುತ್ತಿಲ್ಲ. ಈ ಪತ್ರಿಕೆಗಳ ಹಿಂದೆ ಕೆಲವು ತುಕ್ಕಿಡಿದ ಮನಸುಗಳು ದಾರಿ ತಪ್ಪಿಸುವ ಕೆಲಸದಲ್ಲಿ ತೊಡಗಿರುತ್ತವೆ ಎನ್ನುವುದು ಈ ವರದಿಗಳಿಂದ ಸಾಬೀತಾಗಿದೆ. ಮಹಾದೇವ ಅಥವಾ ಸಿದ್ದಲಿಂಗಯ್ಯನವರು ಮಾಡಿದ್ದು, ಮಾಡುತ್ತಿರುವುದು ಸರಿ ಎನ್ನುವುದು ಇಲ್ಲಿನ ತಾತ್ಪರ್ಯವಲ್ಲ. ನಮ್ಮದು ನಾವು ನೋಡಿಕೊಳ್ಳುತ್ತೇವೆ, ನಾವೆಲ್ಲ ಒಂದು ಕಡೆ ಕುಳಿತುಕೊಂಡು ನಮ್ಮ ಮನೆಯ ಜಗಳವನ್ನು ತೀರ್ಮಾನಿಸಿಕೊಳ್ಳುತ್ತೇವೆ ಎನ್ನುವ ಮನೋಭಾವವನ್ನು ನಾವು ಬೆಳೆಸಿಕೊಳ್ಳದಿದ್ದರೆ ಇಂಥಹ ವರದಿಗಳು ನಮ್ಮ ನಡುವಿನ ಕಂದಕಗಳನ್ನು ಇನ್ನಷ್ಟು ಅಗಲವಾಗಿಸುತ್ತವೆ ಎನ್ನುವುದು ಇಲ್ಲಿ ಎದ್ದು ಕಾಣಿಸುತ್ತದೆ. ದಲಿತ ಹೋರಾಟಗಳಿಗೆ ಸಂಬಂಧಪಟ್ಟ ಸಾಹಿತ್ಯದಲ್ಲಿ ಈ ನಿಟ್ಟನಲ್ಲಿ ಎಲ್ಲರು ಕುಳಿತು ಆಲೋಚಿಸುವಂತಹ ಹೆಚ್ಚೆಚ್ಚು ಲೇಖನಗಳು ಮೂಡಿ ಬರುವ ಅಗತ್ಯ ಇಂದೆಂದಿಗಿಂತ ಇಂದು ತೀರಾ ಅಗತ್ಯವಿದೆ. ಆದರೆ ಈ ಕೃತಿಯಲ್ಲಿ ಕಾಣಿಸುವ ಕೆಲವು ಲೇಖನಗಳು ಡಿವೈಡ್ ಅಂಡ್ ರೂಲ್ ಎನ್ನುವ ಜಾಡನ್ನಿಡಿದಿವೆ ಎಂದರೆ ತಪ್ಪಾಗಲಾರದು.

ಬಿ. ಎಂ. ಪುಟ್ಟಯ್ಯನವರ ವಿಮರ್ಶಾತ್ಮಕ ಟಿಪ್ಪಣಿ ಉಪಸಂಹಾರವಿಲ್ಲದ ಒಂದು ವಿಮರ್ಶೆಯಾಗಿ ರೂಪಗೊಂಡಿದೆ ಎನಿಸುತ್ತದೆ. ಶಿಕ್ಷಣವೆ ಜ್ಞಾನದ ಕಣ್ಣು ವಿಮೋಚನೆಯ ಅಸ್ತ್ರ ಎಂದವರೆ ಶಿಕ್ಷಣ ಜ್ಞಾನದ ಕಣ್ಣು ಅಲ್ಲ, ವಿಮೋಚನೆಯ ಅಸ್ತ್ರವೂ ಅಲ್ಲ ಎನ್ನುವ ಇವರು, ಶಿಕ್ಷಣ ಆಳುವ ವರ್ಗ ತನ್ನ ಶೋಷಣೆಯನ್ನು ಮುಂದುವರಿಸಿಕೊಂಡು ಹೋಗಲು ಒಂದು ಮಾಧ್ಯಮವಾಗಿದೆ ಅಷ್ಟೆ ಎನ್ನುತ್ತಾರೆ. ಹಾಗಾದರೆ ಶಿಕ್ಷಣ ಪ್ರಯೋಜನವಿಲ್ಲದ ಮಾಧ್ಯಮವಾಗುತ್ತದೆಯೆ? ಹೇಗೊ ಶಿಕ್ಷಣ ನೀಡುವುದು ಬ್ರಿಟಿಷರ ಉದ್ದೇಶವಾಗಿರಲಿಲ್ಲ ಎನ್ನುವ ಇವರ ಮಾತನ್ನು ಸ್ವಲ್ಪಮಟ್ಟಿಗೆ ಒಪ್ಪಿಕೊಳ್ಳಬಹುದು. ಆದರೆ ಶೂದ್ರರಿಗೆ, ಅತಿಶೂದ್ರರಿಗೆ ಬ್ರಾಹ್ಮಣರು ತಿರಸ್ಕರಿಸಿದ್ದ ವೇದ ಉಪನಿಷತ್ತುಗಳು ಪುರಾಣಗಳು ಅಕ್ಷರ ರೂಪದಲ್ಲಿ ಹೊರಗೆ ಬಂದಿದ್ದು ಶೂದ್ರರಿಗೆ ಅಕ್ಷರ ದೊರತಿದ್ದು ಬ್ರಿಟಿಷರು ಬಂದ ನಂತರವೆ. ಚರಿತ್ರೆಯಲ್ಲಿ ಶೂದ್ರರಿಗೆ ಶಿಕ್ಷಣ ನಿಷೇದಿತವಾಗಿತ್ತು ನಿಜ, ಅದಕ್ಕೆ ಕೇವಲ ಬ್ರಾಹ್ಮಣರಷ್ಟೆ ಕಾರಣರಲ್ಲ ಎನ್ನುವ ಪುಟ್ಟಯ್ಯನವರ ಮಾತುಗಳು ಸಂದೇಹದ ಕಡೆಗೆ ಜಾರುತ್ತವೆ. ಬ್ರಾಹ್ಮಣರು ದೇವರನ್ನು, ಜಾತಿಗಳನ್ನು ಸೃಷ್ಟಿಸಲಿಲ್ಲ, ಚಾರಿತ್ರಿಕ ಬೆಳವಣಿಗೆಯ ಅನಿವಾರ್ಯ ಸತತವಾಗಿ ಇವು ಸೃಷ್ಟಿಯಾದವು ಎನ್ನುತ್ತಾರೆ. ಅವು ಯಾವವು ಎನ್ನುವ ವಿವರಗಳು ಇಲ್ಲಿ ಲಭ್ಯವಾಗುವುದಿಲ್ಲ. ಒಟ್ಟನಲ್ಲಿ ಈ ಲೇಖನ ಯಾವ ರೀತಿಯಲ್ಲೂ ನಮ್ಮಂತವರ ಹಿಡಿತಕ್ಕೆ ದೊರಕದೆ ನುಣಿಚಿಕೊಂಡಿದೆ ಎನ್ನುವುದು ಅನಿಸಿಕೆ.

ಜ. ಹೊ. ನಾರಾಯಣಸ್ವಾಮಿಯವರ ಲೇಖನ ಸ್ವಲ್ಪಮಟ್ಟಿಗೆ ನಮ್ಮನ್ನ ಯೋಚನೆಯಲ್ಲಿ ತೊಡಗಿಸುತ್ತದೆ. ನಾವು ಮೊದಲು ರಾಜಕೀಯ ಶಕ್ತಿಯನ್ನು ಪಡೆದುಕೊಳ್ಳಬೇಕು, ಅನಂತರ ತಮ್ಮ

ಹಕ್ಕುಗಳನ್ನು ಕಾಯ್ದುಕೊಳ್ಳಬೇಕು ಎನ್ನುವ ಮಾತುಗಳನ್ನು ಮೊದಲಿಗೆ ಹೇಳಿದವರು ಅಂಬೇಡ್ಕರ್. ಅದನ್ನು ಇಂದು ಕಾನ್ಶಿರಾಂ, ಮಾಯಾವತಿಯು ಸೇರಿ ಹಲವರು ಹೇಳುತ್ತಿದ್ದಾರೆ. ಇಲ್ಲಿ ತಿಮ್ಮರಾಯಪ್ಪ ತಾವೊಂದು ಪಕ್ಷವನ್ನು ಕಟ್ಟಿ ಗೆಲ್ಲದೆ ಹೋದಾಗ ಏನುಮಾಡಬೇಕು ಎನ್ನುವಂತೆ ರಾಜಕೀಯ ಪಕ್ಷಗಳ ಜೊತೆಗೆ ಗೆಳೆತನವಿರಿಸಿಕೊಂಡು ದಲಿತರ ತೊಂದರೆಗಳಿಗೆ ಸ್ಪಂದಿಸುವ ರೀತಿಯಾಗಲಿ, 'ಇಕರ್‍ಲಾ ವದರ್‍ಲಾ' ಎಂದು ಕ್ರಾಂತಿಯ ಕಿಡಿಗಳನ್ನು ಸಿಡಿಸಿ ಮೆತ್ತಗೆ ಹಿಂದಿನ ಬಾಗಿಲಿಂದ ಯಾರದೋ ತೋಳಿನ ಕೆಳಗಿಂದ ರಾಜಕೀಯ ಪ್ರವೇಶಮಾಡಿ ಮೆತ್ತಗೆ ಮಾರುತಿ ಕಾರುಗಳಲ್ಲಿ ಓಡಾಡುವ ರೀತಿಯಾಗಲಿ, ಅಥವಾ ಮಹಾದೇವರಂತಹ ಪ್ರತಿಭೆಗಳು ಯಾವಾಗಲೋ ಒಮ್ಮೆ ತಲೆದೂಗುವಂತಹ ಮಾತುಗಳನ್ನು ಹೇಳಿ ನಿಸ್ಸಾಯಕವಾಗುವ ರೀತಿಯನ್ನು ದಲಿತ ಜನಾಂಗದ ಬುದ್ಧಿ ಜೀವಿಗಳು ಅವಲೋಕಿಸಬೇಕಿದೆ. ಇವರುಗಳ ಹಿಂದೆ ಯಾವುದೇ ಶಕ್ತಿಗಳಿರಲಿ, ಇಲ್ಲದಿರಲಿ ದಲಿತರ ಕಷ್ಟಗಳಿಗೆ ಇವರು ಸ್ಪಂದಿಸದೆ ಹೋಗಿದ್ದು ಮಾತ್ರ ದಲಿತ ಚಳುವಳಿಯ ಅವಸಾನದ ಘಳಿಗೆಗಳಾಗಿವೆ. ಮತ್ತೆ ರಾಜಕೀಯ ಶಕ್ತಿಯನ್ನು ಯಾವ ರೀತಿಯಲ್ಲಿ ಪಡೆದುಕೊಳ್ಳಬೇಕು ಎನ್ನುವುದನ್ನು ನಾವು ಇಂದು ತೀರ್ಮಾನಿಸಬೇಕಿದೆ. ಎಂ. ಗೋಪಿನಾಥ್ ಅವರ ಲೇಖನದಲ್ಲಿ ಅದನ್ನು ನೋಡಬಹುದು. ಅದು ಮೂಲವಾಗಿ ಅಂಬೇಡ್ಕರ್ ಅವರ ಮನೆಯೊಳಗಿಂದ ಚಿಮ್ಮಿದ ತತ್ವವೇ ಆಗಿದ್ದು, ಪೂನಾ ಒಪ್ಪಂದಕ್ಕೆ ಮುಂಚಿನ ಯೋಚನೆಯ ಪುನರಾವೃತ್ತಿಯಾಗಿದೆ. ಮಹಾತ್ಮಗಾಂಧಿಯವರು ಪೂನಾ ಒಪ್ಪಂದದಲ್ಲಿ ದಲಿತರನ್ನು ಸೋಲಿಸಿದ ಕಾರಣಕ್ಕಾಗಿಯೇ ಈ ದಿನ ನಾವು ಪಡಬಾರದ ಕಷ್ಟಗಳನ್ನು ಪಡುತ್ತಿದ್ದೇವೆ ಎಂದರೂ ತಪ್ಪಾಗಲಾರದು.

ದಲಿತ ಚಳುವಳಿಗಳಲ್ಲಿ ತೊಡಗಿಕೊಂಡು ತಮ್ಮ ಆಯುಷ್ಯ, ಆತ್ಮಶಕ್ತಿ ಮತ್ತು ದೇಹಶಕ್ತಿಯನ್ನು ತ್ಯಾಗ ಮಾಡಿದ ಯುವ ಪೀಳಿಗೆ ಸಹಜವಾಗಿಯೇ ಚಳುವಳಿಯ ದಿಕ್ಕು ತಪ್ಪಿಸಿದ ಮುಖಂಡರುಗಳ ಮೇಲೆ ಹರಿಹಾಯ್ದು ಆಕ್ರೋಶವನ್ನು ಕೆಲವು ಲೇಖನಗಳಲ್ಲಿ ನೋಡಬಹುದಾಗಿದೆ. ಇಲ್ಲಿ ಲಂಕೇಶ್ ಮತ್ತು ಅನಂತಮೂರ್ತಿಯವರನ್ನು ಬೊಟ್ಟುಮಾಡಿ ತೋರಿಸಿದ್ದಾರೆ. ಇದು ಎಷ್ಟರಮಟ್ಟಿಗೆ ಸರಿ ಎನ್ನುವ ಪ್ರಶ್ನೆಗಳು ಏಳದೆ ಇರುವುದಿಲ್ಲ. ಪಂಚಮ, ಸುದ್ದಿಸಂಗಾತಿ ಪತ್ರಿಕೆಗಳನ್ನು ಮುಚ್ಚಲು ಯಾರೆ ಕಾರಣರಾಗಲಿ ಅವರು ತಪ್ಪಿತಸ್ಥರೆ ಸರಿ. ಆದರೆ ೪೦ ಲಕ್ಷ ರೂಪಾಯಿಗಳನ್ನು ವಸೂಲಿ ಮಾಡಿ ಮೋಸಮಾಡಲಾಗಿದೆ ಎನ್ನುವ ಅಪರಾಧ ಎಷ್ಟರ ಮಟ್ಟಿಗೆ ಸರಿ? ಇಂತಹ ಅಪರಾಧವನ್ನು ಈ ಪುಸ್ತಕದಲ್ಲಿ ದಾಖಲಿಸುವ ಮುನ್ನ ಕೂಲಂಕುಷವಾಗಿ ತನಿಖೆ ಮಾಡಿ ದಾಖಲೆಗಳ ಸಮೇತ ಪ್ರಕಟಿಸಿರಬೇಕಾಗಿತ್ತು. ಈಗ ಈ ಅಪವಾದಕ್ಕೆ ಯಾವ ರೀತಿಯ ಬೆಲೆಯೂ ಇಲ್ಲದಾಗಿ ಒಂದು ಗುಂಪಿನ ಅಪವಾದವಾಗಿದೆಯಷ್ಟೆ.

'ದಲಿತ ಯುವ ಜನಾಂಗ, ಅದರಲ್ಲೂ ವಿಶೇಷವಾಗಿ ಅಂಬೇಡ್ಕರ್ ಅವರಲ್ಲಿ ಭಕ್ತಿ ಗೌರವ ಇಟ್ಟುಕೊಂಡಿರುವ ಯುವ ಜನತೆ

ಬಾಬಾ ಸಾಹೇಬರ ಅಧ್ಯಯನ ಶೀಲತೆ ಮತ್ತು ಶಿಸ್ತು, ಸಂಯಮಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡರೆ ಅವರ ಜೀವನ ನಿಜವಾಗಿಯೂ ಸಾರ್ಥಕವಾಗುತ್ತದೆ; ಅದು ದಲಿತ ಜನಾಂಗಕ್ಕೆ ಸಹಾಯಕವು ಆಗುತ್ತದೆ. ಇಲ್ಲದಿದ್ದರೆ ದಲಿತ ಯುವ ಜನಾಂಗದ ಜೊತೆಗೆ ದಲಿತ ಸಮಾಜವು ನಿಷ್ಪ್ರಯೋಜಕವಾಗುತ್ತದೆ. ಎನ್ನುವ ಎಚ್ಚರಿಕೆಯ ಮಾತುಗಳನ್ನು ಈ ಪುಸ್ತಕದ ಮೂಲಕ ಮುನಿವೆಂಕಟಪ್ಪನವರು ಹೇಳಿದ್ದಾರೆ. ಈ ಪುಸ್ತಕ ದಲಿತ ಚಳುವಳಿ, ಸಾಹಿತ್ಯ ಮತ್ತು ಜನಾಂಗದ ಕೈಪಿಡಿಯಾಗುವ ಎಲ್ಲ ಲಕ್ಷಣಗಳನ್ನು ತುಂಬಿಕೊಂಡಿರುವುದರ ಜೊತೆಗೆ ಎಲ್ಲ ಮಗ್ಗಲುಗಳನ್ನು, ಸೋಲು ಗೆಲವುಗಳನ್ನು ಮುಂದೆ ನಡೆಯಬೇಕಾದ ದಾರಿಯನ್ನು ಸಹ ತೋರಿಸಿಕೊಟ್ಟಿದೆ ಎಂದರೂ ಅತಿಶಯೋಕ್ತಿಯಾಗಲಾರದು.

ಸನಾತನ ಧರ್ಮಕ್ಕೆ ಪ್ರಸ್ತುತ ಹೋಗಿ ಬಂದಿರುವ ವಿಪತ್ತನ್ನು ಅದು ಕಾಪಾಡಿಕೊಳ್ಳಲು ಜಾತಿ ಭೇದ ಮೂಲ ಸಂಸ್ಕೃತಿ ಪರಿವಾರಗಳು ಕೈಜೋಡಿಸಿ ಜಾತಿ ಆಧಾರಿತ ಸಮಾಜವನ್ನು ಮತ್ತೊಮ್ಮೆ ಗಟ್ಟಿಗೊಳಿಸಲು ಹವಣಿಸುತ್ತಿದೆ. ಧರ್ಮಗಳೆಲ್ಲವು ಜಾತಿಗಳಾಗಿ ಬೆಳೆದು ನಿಂತಿರುವ ಈ ದೇಶದಲ್ಲಿ ಆಳುವ ಜಾತಿಗಳು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ರೂಢಿಗೆ ತಂದಿರುವ ತಂತ್ರಗಳು ಎನ್ನುವ ಗೋಪಿನಾಥ್ ಅವರ ಮಾತುಗಳನ್ನೂ ಅದು ಈಗ ಉಳಿಸಿಕೊಳ್ಳಲು ಇನ್ನಷ್ಟು ಹುರುಪಿನಿಂದ ಕಾರ್ಯಮಗ್ನವಾಗಿದೆ.

'ತಮ್ಮ ಜನಾಂಗಕ್ಕೆ ತಗುಲಿರುವ ಗುಲಾಮಗಿರಿಯ ಸಂಕೋಲೆಗಳನ್ನು ಕಡಿದೊಗೆಯಲು ತಮ್ಮ ಆಯುಷ್ಯ, ಆತ್ಮ ಶಕ್ತಿ ಮತ್ತು ದೇಹ ಶಕ್ತಿಯನ್ನು ತ್ಯಾಗ ಮಾಡಿದವರೆ ಧನ್ಯರು' ಎಂದಿರುವ ಅಂಬೇಡ್ಕರ್ ಮಾತಿನಂತೆ ನಡೆದುಕೊಳ್ಳುವ ಶಕ್ತಿಯುತ ಯುವ ಪೀಳಿಗೆ ನಮ್ಮಲ್ಲಿದ್ದು ಅದು ಇಂದು ಸರಿಯಾದ ದಾರಿ ಕಾಣದೆ ಅಡ್ಡ ರಸ್ತೆಯಲ್ಲಿ ನಿಂತಿದೆ. ಜೊತೆಗೆ ಈಗ ಎಲ್ಲ ದಲಿತ ಸಂಘಟನೆಗಳು ದಲಿತರ ಏಳಿಗೆಗಾಗಿ ಒಗ್ಗೂಡುವ ಅಗತ್ಯ ಇಂದೆಂದಿಗಿಂತ ಈಗ ತೀರ ಅಗತ್ಯವಾಗಿದೆ. ಮಹಾದೇವ, ಸಿದ್ದಲಿಂಗಯ್ಯ ಬದುಕಿಗಾಗಿ ಹೋರಾಟಗಳನ್ನು ಮಾರಿಕೊಂಡರು ಎನ್ನುವುದು ನಿಜವಾದರು ಕಾಲ ಅಂತವರನ್ನು ಪಕ್ಕಕ್ಕೆ ತಳ್ಳಿ ಮುನ್ನಡೆಯುತ್ತದೆ. ಸಮಯ ಈಗಲೂ ಪೂರ್ಣವಾಗಿ ಕೈತಪ್ಪಿ ಹೋಗಿಲ್ಲ. ದಲಿತ ಜನಾಂಗದ ಎಲ್ಲ ಬಣಗಳು ಮತ್ತು ಮುಖಂಡರು ಜನಾಂಗದ ಸರ್ವತೋಮುಖದ ಬೆಳವಣಿಗೆಗೆ ಕೈಜೋಡಿಸಿ, ಮೈಕೊಡವಿ, ಘರ್ಜಿಸಿ ಎದ್ದು ನಿಂತರೆ ಕರ್ನಾಟಕದ ಮೂಲೆ ಮೂಲೆಗಳಲ್ಲಿ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಪಗಲ್ಭಾಜಿತನವನ್ನು ಅದ್ಭಸ್ತಿಯಲ್ಲಿಡಲು ಹೆಚ್ಚು ಕಾಲ ಬೇಕಾಗುವುದಿಲ್ಲ. ಇದನ್ನು ದಲಿತರು ಮನಗಾಣಬೇಕಿದೆ.

ದಲಿತ ಚಳುವಳಿ ಯಾವ ಕಾರಣಕ್ಕೂ ತನ್ನ ಉದ್ದೇಶವನ್ನು ಸಾಧಿಸಿಕೊಳ್ಳದೆ ಶಮನಗೊಳ್ಳುವುದಿಲ್ಲ. ಅದೀಗ ತನ್ನ ಒಡಲ ಮೇಲಿನ ಒಂದು ಪೊರೆಯನ್ನು ಬಿಚ್ಚಿಕೊಳ್ಳಲು ಅರೆಘಳಿಗೆ ನೋವನ್ನು ಅನುಭವಿಸುತ್ತಿದೆ. ಊರೂರು, ಕೇರಿ

ಕೇರಿ ಸುತ್ತಿ ಬಂದು ಬಿಸಿಲು ಬಂಡೆಯ ಮೇಲೆ ಕುಳಿತುಕೊಂಡಿರುವ ಚಳುವಳಿ ತನ್ನ ನಿಯಮಗಳನ್ನು ಬದಲಿಸಿಕೊಂಡು ಹೊಸ ಹೆಜ್ಜೆಗಳನ್ನು ಇಡಬೇಕಿದೆ.

ಇದೆಲ್ಲದರ ಮೇಲೆ ಈ ಪುಸ್ತಕದ ಒಟ್ಟು ಸೋಲು ಗೆಲುವುಗಳೇನು? ಎಂಬುದರ ಬಗ್ಗೆ ಯೋಚಿಸಿದಾಗ, ಎಲ್ಲಾ ಲೇಖನಗಳು ಒಂದಲ್ಲಾ ಒಂದು ರೀತಿಯಲ್ಲಿ ನಮ್ಮನ್ನು ಅವಲೋಕನ ಮಾಡಿಕೊಳ್ಳಲು ಪ್ರೇರೇಪಿಸುತ್ತವೆ. ಕಳೆದ ಕಾಲು ಶತಮಾನದಲ್ಲಿ ದಲಿತ ಚಳುವಳಿಗಳ ಮುಂಚೋಣಿಲ್ಲಿದ್ದವರು ಮಾಡಿದ, ಮಾಡುತ್ತಿರುವ ತಪ್ಪುಗಳೇನು? ಮುಂದಿನ ದಿನಗಳಲ್ಲಿ ಅವರೇನು ಮಾಡಬೇಕು ಎಂಬುದಕ್ಕೂ ಸುಳಿವಿನ ಜಾಡನ್ನು ತೋರಿಸಿಕೊಟ್ಟಿರುವುದೇ ಈ ಕೃತಿಯ ಗೆಲುವೆನ್ನಬಹುದು. ಇದೆ ರೀತಿಯಾಗಿ ದಲಿತ ಚಳುವಳಿಗಳು ತಮ್ಮ ಸೂಕ್ಷ್ಮ ದೂರದೃಷ್ಟಿಯಿಂದ ಸಾಮಾಜಿಕ ಗೆಲುವಿನತ್ತ ಕೊಂಡೊಯ್ಯುವಂತಹ ಇನ್ನಷ್ಟು ಕೃತಿಗಳನ್ನು ಮುನಿವೆಂಕಟಪ್ಪನವರು ಮುಂದಿನ ದಿನಗಳಲ್ಲಿ ನೀಡುತ್ತಾರೆ ಎನ್ನುವುದನ್ನು ನಾವೆಲ್ಲ ಕಾತುರದಿಂದ ಎದುರು ನೋಡಬೇಕಾಗಿದೆ.

**ಎಂ. ವೆಂಕಟಸ್ವಾಮಿ**
ಸಂಖ್ಯೆ ೪೩೭, ಮೊದಲನೇ ಮಹಡಿ
೧೪ನೇ ಮುಖ್ಯ ರಸ್ತೆ, ಎಂ.ಸಿ. ಬಡಾವಣೆ
ವಿಜಯನಗರ, ಬೆಂಗಳೂರು–೫೬೦ ೦೪೦

* * * *

ಯುಗಚೇತನ ಪ್ರೇಮಚಂದ್— ಲೇಖಕರು: ದು. ನಿಂ. ಬೆಳಗಲಿ ಪುಟಗಳು ೨೧೬, ಬೆಲೆ ೭೫–೦೦ ರೂ. ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ. ಎಂಬೆಸಿ ಸೆಂಟರ್ ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦೦೦೧.

ಪ್ರೇಮಚಂದ್‌ರದು ವರ್ಣರಂಜಿತ ವ್ಯಕ್ತಿತ್ವ. ಶಾಲಾ ಶಿಕ್ಷಕರಾಗಿದ್ದುಕೊಂಡೇ ತಮ್ಮ ಪ್ರಗತಿಶೀಲ ಚಿಂತನೆಗಳಿಂದ, ರೈತಪರ ಕಾಳಜಿಯಿಂದ ಶೋಷಿತರ ದನಿಯಾಗಿ ಮಿಡಿದವರು. ಶೋಷಕರ, ದನಿಕರ, ಜಮೀನುದಾರರ ಅಮಾನವೀಯತೆ ದರ್ಪ ದೌರ್ಜನ್ಯಗಳನ್ನು ಅನಾವರಣ ಮಾಡುತ್ತಾ ಎಲ್ಲೆಂದರಲ್ಲಿ ಹೇಗೆಂದರಾಗೆ ವಿಶ್ವಮಾನ್ಯ ಕಥೆ ಕಾದಂಬರಿಗಳನ್ನು ಸೃಷ್ಟಿಸಿದವರು. ಇವರ ಸಾಹಿತ್ಯ ಸಮಾಜಕ್ಕೆ ಹೊಸ ದಿಕ್ಕು ತೆರೆದು, ಓದುಗರಲ್ಲಿ ಚಿಂತನೆಗೆ ಅನುವು ಮಾಡಿಕೊಟ್ಟಿತು.

ಪ್ರೇಮಚಂದ್‌ರು ತಮ್ಮ ೨೩ ನೆಯ ವಯಸ್ಸಿನಲ್ಲಿ ಬರೆದ ಮೊದಲ ಕಾದಂಬರಿಯೆ ಅಂದಿನ ಕಾಶಿನಗರದ ಪೂಜಾರಿಯ ಡಾಂಬಿಕತೆ, ದೇವರು ಧರ್ಮ ವರ್ಗ ವರ್ಣಗಳ ಹೆಸರಿನಲ್ಲಿ ನಡೆಯುತ್ತಿದ್ದ ಅನೈತಿಕತೆ ಅವ್ಯವಹಾರಗಳನ್ನು ಬಯಲಿಗೆಳೆದ ಖಂಡಿತ

ಮಾದಿಯಾಗಿ ಲೋಕವಿರೋಧಕ್ಕೆ ಗುರಿಯಾಗುತ್ತಾರೆ. ಆದರೆ ಯಾವುದಕ್ಕೂ ಜಗ್ಗದಜಾಯಮಾನದ ಪ್ರೇಮಚಂದ್ ತಾವು ನಂಬಿದ ಮೌಲ್ಯಕ್ಕೆ ಬದುಕಿನುದ್ದಕ್ಕೂ ಬದ್ಧರಾಗಿದ್ದುಕೊಂಡು ಬರೆಯುತ್ತಾರೆ. "ನಮ್ಮ ದೇಶದಲ್ಲಿ ದೇವರ ಹೆಸರಿನಲ್ಲಿಯೇ ವರ್ಣಾಶ್ರಮ ಧರ್ಮಗಳು ಬೆಳೆದುಕೊಂಡು ಬಂದಿದ್ದು, ಅಸ್ಪೃಶ್ಯತೆ ಕೂಡ ಇಂಥ ದೇವರುಗಳ ದಲ್ಲಾಳಿಗಳಾದ ಪುರೋಹಿತರ ಕಲ್ಪನೆಯ ಕೂಸೇ ಆಗಿದೆ". ಎಂದು ಅಸ್ಪೃಶ್ಯತೆಯನ್ನು ಜತನದಿಂದ ಕಾಯ್ದುಕೊಂಡು ಬಂದ ಸಮಾಜವನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ.

ಪ್ರೇಮಚಂದ್‌ರು ಆತ್ಮಕಥೆ ಬರೆಯಲಿಲ್ಲ ಆದರೂ ಹಲವಾರು ಪತ್ರಿಕೆಗಳಲ್ಲಿ ತಮ್ಮ ನೆನಪನ್ನು ಸ್ಮರಿಸಿಕೊಂಡರು. ಆತ್ಮೀಯ ಮಿತ್ರರಲ್ಲಿ ಸುಖ ದುಃಖ ದುಮ್ಮಾನಗಳನ್ನು ಹಂಚಿಕೊಳ್ಳಲು ನಿರಂತವಾಗಿ ಪತ್ರ ವ್ಯವಹಾರ ಮಾಡಿದರು. ಅವರ ಕಥೆ ಕಾದಂಬರಿ ಲೇಖನ, ಪತ್ರಗಳೇ ಪ್ರೇಮಚಂದ್‌ರ ಆತ್ಮ ಚರಿತ್ರೆಗೆ ಪ್ರಮುಖ ಆಕರ. ಈ ಎಲ್ಲ ಲಭ್ಯ ಮಾಹಿತಿಯ ಆಧಾರದಿಂದ "ಯುಗಚೇತನ ಪ್ರೇಮಚಂದ್" ಮೂಡಿ ಬಂದಿದೆ.

ಈ ಕೃತಿಯಲ್ಲಿ ಪ್ರೇಮಚಂದ್‌ರ ಬಾಲ್ಯ ಶಿಕ್ಷಣ, ಉದ್ಯೋಗ, ಸಾಂಸಾರಿಕ ಜೀವನ ಸ್ವಾತಂತ್ರ್ಯ ಹೋರಾಟ, ಸಾಹಿತ್ಯ ನಿರ್ಮಾಣ ಪತ್ರಿಕೋದ್ಯಮ, ಸಿನಿಮಾ ಜಗತ್ತಿನ ಸಂಬಂಧ– ಮುದ್ರಣ ಉದ್ದಿಮೆ ಹಾಗೂ ಯುಗಚೇತನದ ಅಂತ್ಯವನ್ನು ಚಿತ್ರಿಸಿದ್ದಾರೆ.

'ಈ ಕೃತಿ ಸಮಗ್ರ ಪ್ರೇಮಚಂದ್ ಅಲ್ಲದಿದ್ದರೂ ಅವರ ಕೃತಿ ಹಾಗೂ ವ್ಯಕ್ತಿತ್ವವನ್ನು ಕನ್ನಡಿಗರು ಒಂದಿಷ್ಟು ಅರಿಯಲು ಸಹಕಾರಿಯಾಗಿದೆ. ಎಂದು ಭಾವಿಸಿದ್ದೇನೆ' ಎಂದು ಲೇಖಕರು ಹೇಳಿದ್ದಾರೆ. ಈ ಮಾತನ್ನೂ ಒಪ್ಪಿಕೊಂಡು ಕೃತಿಯು ಪ್ರೇಮಚಂದ್‌ರ ಜೀವನ ದರ್ಶನ ನೀಡುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಬಹುದು. ಇಂಥ ಮಹತ್ವದ ಕೃತಿಯನ್ನು ಕನ್ನಡಕ್ಕಿತ್ತ ನಾಡಿನ ಹೆಸರಾಂತ ಬರಹಗಾರರಾದ ದು. ನಿಂ. ಬೆಳಗಲಿ ಅವರು ಸ್ತುತ್ಯರ್ಹರು. ಈ ಕೃತಿಯನ್ನು ತಮ್ಮ ಪ್ರಕಟಣ ಮಾಲೆಯ ೯೦೧ನೆಯ ಕುಸುಮವಾಗಿಸಿಕೊಂಡಿರುವ ನವಕರ್ನಾಟಕ ಪ್ರಕಾಶನವು ಅಭಿನಂದನಾರ್ಹವಾಗಿದೆ.

**ನಿನ್ನು ನಿನಾದ**—ಲೇಖಕಿ: ಲೀಲಾ ಮಣ್ಣಾಲ; ಪುಟ: ೧೩೫; ಕ್ರೌನ್ ೧/೮; ಬೆಲೆ: ರೂ ೪೫–೦೦; ಪ್ರಕಾಶಕರು: ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು–೫೭೪ ೨೦೨ (ದ.ಕ.).

ಲೀಲಾ ಮಣ್ಣಾಲ ಅವರ ಮೂರನೆಯ ಸಾಮಾಜಿಕ ಕಾದಂಬರಿ 'ನಿನ್ನು ನಿನಾದ' ಕೃತಿಯು ನಾಯಕನಾದ ತೇಜಸ್ವಿಯ ತಂದೆ. ತಾಯಿ ಮತ್ತು ತಂಗಿ ವಾಹನ ಅಪಘಾತ

ಒಂದರಲ್ಲಿ ಅಸು ನೀಗುತ್ತಾರೆ. ತೇಜಸ್ವಿ ಮಾತ್ರ ಬದುಕಿ ಸೋದರ ಮಾವನ ಆಶ್ರಯದಲ್ಲಿ ಬೆಳೆಯುತ್ತಾನೆ. ಮಾವ ತನ್ನವನಾದರೇನು ಅತ್ತೆ ತನ್ನವಳಾಗಲು ಸಾಧ್ಯವೆ? ಹಂಗಿನ ಅನ್ನಕ್ಕಿಂತ ಭಿಕ್ಷೆಯೆ ಲೇಸೆಂದು ಭಾವಿಸಿ ಕಥಾನಾಯಕ ಮನೆ ಬಿಡುತ್ತಾನೆ. ತುತ್ತು ಕೂಳಿಗಾಗಿ ಪಾಡುಪಟ್ಟು ಎಲ್ಲಿಯೂ ಸಲ್ಲದೆ ಅದೇ ಉಂಡೇನು ಕದಾ ತೆಗಿ ಎಂದು ಪಶ್ಚಾತ್ತಾಪದಿಂದ ಮಾವನ ಮನೆಗೇ ಬರುತ್ತಾನೆ, ನಿಂತಿದ್ದ ವಿದ್ಯಾಭ್ಯಾಸ ಮುಂದುವರಿಯುತ್ತದೆ.

ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದ ತೇಜಸ್ವಿ ಕವಿಯಾಗಿಯೂ ಮಿಂಚುತ್ತಾನೆ. ಸುಂದರ ಹೆಣ್ಣಿನ ಸ್ನೇಹವನ್ನೂ ಪ್ರತಿಭೆ ಕಾವ್ಯ ಕನ್ನಿಕೆಯ ಒಲುಮೆಯಿಂದಾಗಿ ಅನಾಯಾಸವಾಗಿ ಸಂಪಾದಿಸುತ್ತಾನೆ. ಈ ಮಧುರ ಅನುಭವ ಸವಿಯುವ ಮೊದಲೇ ಗೆಳತಿಯ ದುರ್ಮರಣದ ಬರಸಿಡಿಲೆರಗುತ್ತದೆ. ಈ ಸಾವಿಗೆ ತೇಜಸ್ವಿಯೇ ಕಾರಣ ಎಂಬ ಬಿರುದಿನೊಂದಿಗೆ ಕಾಲೇಜಿನಿಂದ ಗೇಟ್‌ಪಾಸ್ ಪಡೆದು ಕಷ್ಟ ನಷ್ಟಗಳ ಸರಮಾಲೆಯೊಂದಿಗೆ ಬೀದಿ ಪಾಲಾಗುತ್ತಾನೆ. ಹೊಟ್ಟೆಪಾಡಿಗೆ ಬಹುಕೃತ ವೇಷ. ಅನಿರೀಕ್ಷಿತವಾಗಿ ಭೂಗತ ಜಗತ್ತಿಗೆ ಪ್ರವೇಶ. ಹಣ ಸಂಪಾದನೆ ಐಷಾರಾಮ ಬದುಕು. ಹೆಣ್ಣಿನ ಅನಿರೀಕ್ಷಿತ ಪರಿಚಯ, ಪರಿಣಾಮ ವಿವಾಹ. ತಂದೆಯಾಗುವ ಭಾಗ್ಯ ಕೈಗೂಡುತ್ತಿದ್ದಂತೆಯೇ ಜೇಲುವಾಸ. ಅನಂತರ ಬಿಡುಗಡೆ, ಗೌರವ ಬದುಕಿಗಾಗಿ ಹಂಬಲ. ಇದು 'ನಿಮ್ನ ನಿನಾದ'ದ ಸಂಕ್ಷಿಪ್ತ ಪರಿಚಯ.

ಫ್ಲ್ಯಾಷ್ ಬ್ಯಾಕ್ ತಂತ್ರದ ಸಿನೀಮಿಯಾ ಶೈಲಿಯ ಈ ಕಾದಂಬರಿ ಆಕರ್ಷಕ ನಿರೂಪಣೆಯಿಂದಾಗಿ ಓದಿಸಿಕೊಂಡು ಹೋಗುತ್ತದೆ. ಇಷ್ಟಲ್ಲದೆ ಹೆಚ್ಚಿನದನ್ನು ಇದರಿಂದ ನಿರೀಕ್ಷಿಸುವುದು ಸಾಧ್ಯವಿಲ್ಲ.
ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್‌ನಲ್ಲಿ ಕಾದಂಬರಿಯು ಮುದ್ರಣಗೊಂಡು ದೋಷರಹಿತವಾಗಿ ಹೊರಬಂದಿದೆ.

**ಚಂದ್ರಶೇಖರಾರಾಧ್ಯ**
೧೪೫, 'ಇಂಚರ', ಎಂ. ಬ್ಲಾಕ್
೨ ನೆಯ ಹಂತ, ಕುವೆಂಪುನಗರ
ಮೈಸೂರು-೨೩

---

Reg. No. KRNN-29 / WPP 6

LICENCE No. 21
LICENCED TO POST WITH PAYMENT



Edited by Chandrashekhararadhya Printed by Papanna
Printed & Published by Karnataka State Adult Education Council
5/1 Vinoba Road, Manasa Gangothri Mysore-570 006-